॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ಹೇಮಪುರ

ಶ್ರೀಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ, ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# HEMAPURA

**Shri Kshethra Bangaramakki**
**Post Gerasoppa - 581 384**
**Honnavara Taluk, Uttara Kannada Dist.**

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು, ಶ್ರೀಕ್ಷೇತ್ರ ಬಂಗಾರಮಕ್ಕಿ**
**ಶ್ರೀ ರವೀಶ, ವಕೀಲರು, ಸಾಗರ**
**ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ**
**ಶ್ರೀ ನಾಗರಾಜ್ ಶೇಟ್, ಶಿರಸಿ**
**ಶ್ರೀ ಭೋಗಾನಂದ, ಶಿವಮೊಗ್ಗ**
**ಶ್ರೀ ಪ್ರವೀಣ್, ಬೆಂಗಳೂರು**
**ಶ್ರೀ ಜಿ.ಎಚ್. ನಾಯ್ಕ್, ಹೊನ್ನಾವರ**
**ಶ್ರೀ ಕೆ. ಮನೋಹರ್, ಬೆಂಗಳೂರು**
**ಶ್ರೀ ಡಿ.ಎಂ. ಸತೀಶ್, ತುಮಕೂರು**

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ**
ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ದೂ: 08387-268544, 268333, 268545

ಮುದ್ರಕರು:
**ಸಾಯಿನಾಥ ಗ್ರಾಫಿಕ್ಸ್, ಬೆಂಗಳೂರು**

## ಒಳಪುಟಗಳಲ್ಲಿ

ಸಚ್ಚಿಂತನ .......... 2
ಸಂಪಾದಕೀಯ .......... 3
ಯಶಸ್ವೀ ಬದುಕಿನ ಮಾರ್ಗ ಮಿಂಚು .......... 4
ಶ್ರೀಧರ ಸ್ಮರಣೆ .......... 6
ಶ್ರೀರಾಮ ಕಥಾಸಾರ .......... 6
ಸಂಪ್ರದಾಯ .......... 8
ಪರಮೇಶ್ವರನ ಇಪ್ಪತ್ತೈದು ಲೀಲೆಗಳು .......... 9
ಮಹಾಕ್ಷತ್ರಿಯ .......... 10
ಬದುಕಲೊಂದಿಷ್ಟು ಆಪ್ತಮಾತುಗಳು .......... 12
ಕಗ್ಗದ ಬೆಳಕಿನಲ್ಲಿ .......... 13
ವಚನಭಾಗವತ .......... 15
ಧರೆಗಿಳಿದ ದಿವ್ಯತೇಜ .......... 17
ಸುಂದರಕಾಂಡದ ಸೌಂದರ್ಯ .......... 20
ಪವನತನಯನ ಹೃದಯ .......... 21
ವಿವೇಕವಿದ್ದರೆ ಮಾತ್ರ ಮನುಷ್ಯ .......... 21
ಔಷಧೀಯ ಸಸ್ಯ ಸಂಪತ್ತು .......... 22
ಕವನ – 'ಬಾಳ ದಾರಿ' .......... 23
ಕವನ – 'ನುಡಿ-ನಮನ' .......... 24
ಪದಬಂಧ-49 .......... 24

**ಹೇಮಪುರ ಘನ ಗಂಭೀರ**

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ಪತ್ರಿಕೆಯು ಪ್ರಕಟವಾದ ಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ಭಾರತದ ಪ್ರಥಮ ಪೈಲೇಟ್ – ಜೆ.ಅರ್.ಡಿ.ಟಾಟಾ

# ಭಗವನ್ಮುಖಿ.........



ನಾವು ಈ ಪ್ರಪಂಚದಲ್ಲಿ ಪಡೆಯುವ ಪ್ರತಿಯೊಂದು ನೋವು, ಹೊಡೆತ, ಒದೆತಗಳು ನಮ್ಮನ್ನು ಘಾಸಿಮಾಡುತ್ತದೆ. ಇಂತಹ ಸಂದರ್ಭದಲ್ಲಿ ಈ ಪ್ರಪಂಚದ ಅಸತ್ಯತೆಯನ್ನು ನೆನಪಿಗೆ ತಂದುಕೊಳ್ಳಬೇಕು ಹಾಗೂ ಮನಸ್ಸಿಗೆ ಉಂಟಾದ ಘಾಸಿಯನ್ನು ಭಗವನ್ಮುಖಿಗೊಳಿಸಬೇಕು. ಇದರಿಂದ ನಮ್ಮ ಎಲ್ಲ ನಿರಾಸೆಗಳು, ನಮ್ಮ ಎಲ್ಲ ಶೋಕತಾಪಗಳು ವರವಾಗುವವು. ಈ ಕಷ್ಟಕಾರ್ಪಣ್ಯಗಳಿಗೆ ನಮ್ಮ ಜ್ಞಾನದ ದಿವ್ಯ ಪ್ರಭಾವವನ್ನು ಹರಿಸಿ ಪರಿಸ್ಥಿತಿಯನ್ನು ಹಗುರಗೊಳಿಸಬೇಕು. ಈ ಪ್ರಕ್ರಿಯೆಯನ್ನು ದೇವರ ಕಡೆಗೇ ತಿರುಗಿಸಬೇಕು. ಇಂಥಹ ಸಂದರ್ಭದಲ್ಲಿ ದೇವರನ್ನು ಪ್ರಾರ್ಥಿಸಿ ಸಂಪರ್ಕಿಸಬೇಕು. ಆಗ ಅವನು ನಮ್ಮ ಅತೀ ಸಮೀಪದಲ್ಲಿಯೇ ಇರುವನು. ಇದೊಂದು ಆಧ್ಯಾತ್ಮಿಕ ಜೀವನದಲ್ಲಿ ಒಂದು ಮುಖ್ಯವಾದ ಕಾರ್ಯ. ಭಗವಂತನೊಡನೆ ಒಂದು ನಿಕಟವಾದ ಸಂಬಂಧ ಬೆಳೆಸುವುದು ಒಂದು ಮಹತ್ಸಾಧನೆ.

ಆಧ್ಯಾತ್ಮಿಕ ಸಾಧಕನು ಎಲ್ಲ ಸನ್ನಿವೇಶಗಳಲ್ಲೂ ಭಗವಂತನನ್ನೇ ಆಶ್ರಯಿಸಬೇಕು. ಹಾಗೆಯೇ ಭಗವಂತನಿಂದಲೇ ಹೆಚ್ಚು ಹೆಚ್ಚು ಸ್ಫೂರ್ತಿಯನ್ನು ಪಡೆಯಬೇಕು.

ನಮಗೆ ವ್ಯಥೆಯಾದಾಗ ನಮ್ಮ ಮನಸ್ಸು ಅಸ್ಥಿರವಾಗುವುದು. ಆದರೆ ನಮಗೆ ಎಂತಹ ನೋವಿದ್ದರೂ ಹೇಳಬೇಕು, "ಹೌದು, ಇವೆಲ್ಲ ನನ್ನ ದೇಹ ಮನಸ್ಸುಗಳಿಗೆ, ನನ್ನಾತ್ಮವನ್ನು ಇವು ಮುಟ್ಟಲಾರದು. ನನ್ನಾತ್ಮವು ಇವುಗಳಿಗೆ ಬಂಧಿಯಾಗದು". ಯಾವಾಗಲೂ ಎಲ್ಲ ಸಂದರ್ಭಗಳಲ್ಲಿಯೂ ಆತ್ಮನ ವೈಭವವನ್ನು, ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕು. ಸಿದ್ಧಪುರುಷರಿಗೆ ದುಃಖವುಂಟಾದರೆ ಅವರು ಸಾಕ್ಷಿಯಂತೆ – ಹೊಡೆತ, ಒದೆತ, ನೋವುಗಳನ್ನು ಸಾಕ್ಷಿಯಂತೆ ನೋಡಿ, ಕೂಡಲೇ ಮನಸ್ಸನ್ನು ಉನ್ನತಮಟ್ಟಕ್ಕೇರಿಸಿ ಯಾವುದೇ ಸಂದರ್ಭದಲ್ಲಿಯೂ ವಿಚಲಿತರಾಗದಂತೆ ಇರುವರು.

ನಮ್ಮ ಹೃದಯದೊಳಗಿರುವ ಅಂತಃಶ್ಚೈತನ್ಯವನ್ನು ಭಾವಿಸುವ ನಮ್ಮ ಸಾಮರ್ಥ್ಯವನ್ನು ಅಧಿಕಗೊಳಿಸಬೇಕು. ನಮ್ಮ ಎಲ್ಲ ಯೋಚನೆ ಮತ್ತು ಭಾವನೆಗಳನ್ನು ನಮ್ಮೊಳಗಿರುವ ದಿವ್ಯ ಚೈತನ್ಯದ ಕಡೆಗೆ ಹರಿಸಬೇಕು. ಹೊರ ಪ್ರಪಂಚದಲ್ಲಿ ಎಷ್ಟೊಂದು ದುಃಖವಿದೆ, ಎಷ್ಟೊಂದು ಬೇಗುದಿ ಇದೆ, ಕಷ್ಟ ಸಂಕಟಗಳಿವೆ! ಇದು ಯಾವಾಗಲೂ ಹೀಗೆಯೇ. ಈ ತೋರಿಕೆಯ ಪ್ರಪಂಚ ಯಾವಾಗಲೂ ದ್ವಂದ್ವಮಯ – ಯಾವಾಗಲೂ ಒಳಿತು ಕೆಡುಕುಗಳು ಸುಖ–ದುಃಖಗಳು ಇರುತ್ತವೆ. ಬದಲಾಗದ ಸುಖ ಎಂಬುದು ಇಲ್ಲವೇ ಇಲ್ಲ. ನಾವು ಭಗವಂತನನ್ನೇ ಹೆಚ್ಚು ಹೆಚ್ಚು ಆಶ್ರಯಿಸಬೇಕು ಮತ್ತು ಶರಣಾಗತ ಭಾವವನ್ನು ಬೆಳೆಸಿಕೊಳ್ಳಬೇಕು. ಶಾಂತಿ ಮತ್ತು ಧನ್ಯತೆಗೆ ಇದೊಂದೇ ಮಾರ್ಗ. ಇದು ಪಲಾಯನ ವೃತ್ತಿಯಲ್ಲ, ಆದರೆ ನಮ್ಮ ಪ್ರವೃತ್ತಿ ಮತ್ತು ಭಾವನೆಯನ್ನು ನಿಜವಾಗಿ ಊರ್ಧ್ವಮುಖಿಗೊಳಿಸುವ ಮಾರ್ಗ. ಇದೊಂದು ಸೂಕ್ತ ಪರಿಹಾರ. ನಾವು ಯಾವಾಗಲೂ ದೂರುವ ಹೊರಗಿನ ಕಷ್ಟಗಳು, ಯುದ್ಧ ಹೋರಾಟಗಳಿಗೆ ದೂಡಬಹುದಾದ ಪ್ರಪಂಚದ ಈ ಅಶಾಂತಿಯ ವಾತಾವರಣ ನಮ್ಮನ್ನು ಶಾಂತಿಯ ಏಕೈಕ ಆಗರವಾದ ಭಗವಂತನನ್ನು ಅರಸಲು ಹುರುದುಂಬಿಸಬೇಕು. ನಮ್ಮ ಎಲ್ಲ ದುಃಖ, ಕಷ್ಟ, ಕಾರ್ಪಣ್ಯ, ನಿರಾಶೆಗಳು ಪ್ರಪಂಚದ ನಶ್ವರತೆಯನ್ನು ಸದಾ ನೆನಪಿಸುತ್ತಿರಬೇಕು. ಈ ಪ್ರಪಂಚದಲ್ಲಿ ಯಾವುದೂ ನಮಗೆ ಸುರಕ್ಷತೆಯನ್ನು ನೀಡಲಾರದು. ಈ ಪ್ರಪಂಚದಿಂದ ಯಾವ ಸುಖವನ್ನೂ, ಯಾವ ಆನಂದವನ್ನೂ ಬಯಸುವುದು ಒಳಿತಲ್ಲ. ಯಾಕೆಂದರೆ ನಶ್ವರವಾದ ಈ ಪ್ರಪಂಚದಲ್ಲಿ ಶಾಶ್ವತವಾದುದು ಯಾವುದು ಇಲ್ಲ. ಶಾಶ್ವತವಾದ ಸುಖ, ಆನಂದ ಇರುವುದು ಆ ಭಗವಂತನಲ್ಲಿ ಮಾತ್ರ ಹಾಗಾಗಿ ಆ ಭಗವಂತನೊಬ್ಬನೇ ನಮ್ಮ ಶಕ್ತಿಯ ಮೂಲ. ಎಲ್ಲವೂ ಅವನ ಇಚ್ಛೆಯಂತೆಯೇ ನೆರವೇರುವುದು. "ತೇನವಿನಾ ತೃಣಮಪಿ ನಚಲತಿ" ಎಂಬ ಭಾವದೊಂದಿಗೆ ಭಗವಂತನೊಡನೆ ನಾವು ಒಂದಾಗಿರೋಣ. ಇದುವೇ ನೈಜ ಆಧ್ಯಾತ್ಮಿಕ ಸಾಧಕನ ಭಾವ. ಇಂತಹ ಭಾವವನ್ನು ನಮ್ಮದಾಗಿಸಿಕೊಂಡು ನಾವೂ ಸಾಧಕರಾಗಿ ಸಾಧನೆಯ ಮಾರ್ಗದಲ್ಲಿ ನಡೆದು ನಮ್ಮ ಮನಸ್ಸನ್ನು ಭಗವಂತನೆಡೆಗೆ ತಿರುಗಿಸಿ ಮುನ್ನಡೆಯೋಣ

**ಶ್ರೀ ರಾಮಸ್ಮರಣಂ**

**ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು**

**ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.**



# ಸದಾ ದಯೆ ಇರಲಿ, ಇರಲಿ ಕಾಮ ಕ್ರೋಧಕೆ ಕಡಿವಾಣ
# ತ್ರಿಲೋಕಾಧಿಪತಿಯಾಗು ಅದುವೇ ಜೀವನ ತ್ರಾಣ

ಸತ್ಯಮೇವ ವ್ರತಂ ಯಸ್ಯ ದಯಾದಿನೇಷು ಸರ್ವಥಾ।
ಕಾಮ ಕ್ರೋಧೌ ವಶೇ ಯಸ್ಯ ತೇನ ಲೋಕತ್ರಯಂ ಜಿತಂ॥

ಸತ್ಯವೇ ವ್ರತವಾಗಿದ್ದರೆ, ದೀನರಲ್ಲಿ ಸದಾ ದಯೆ ಇದ್ದರೆ, ಕಾಮಕ್ರೋಧಗಳನ್ನು ಗೆದ್ದರೆ, ಅಂಥಹ ಸಾಮರ್ಥ್ಯ ಇದ್ದರೆ ಮೂರು ಲೋಕವೂ ಕೂಡ ವಶವಾದಂತೆ.

ಜೀವನದಲ್ಲಿ ಅನೇಕರು ಅನೇಕ ವ್ರತ ಮಾಡುತ್ತಾರೆ. ಅನೇಕ ವ್ರತದಿಂದ ಅನೇಕ ವಿಧವಾದ ಸತ್ಪ್ರಾಪ್ತಿ ಇದೆ. ಆದರೆ ಯಾವ ವ್ರತ ಮಾಡಿದರೂ ಸತ್ಯ ವ್ರತ ಮಾಡುವುದು ಬಹಳ ಕಷ್ಟ ಎನ್ನುತ್ತಾರೆ. ಅಂದರೆ ಸದಾ ಮಾತನಾಡಬೇಕು, ಆಡುವ ಮಾತು ಸತ್ಯದಿಂದ ಕೂಡಿದ್ದರೆ ಅದು ಎಲ್ಲಕ್ಕಿಂತಲೂ ಮಿಗಿಲು. ಅಂದರೆ ಸತ್ಯವೆನ್ನುವುದು ಯಾಕೆ ಅಷ್ಟು ಕಷ್ಟ. ದೈನಂದಿನ ಜೀವನದಲ್ಲಿ ಸತ್ಯವನ್ನು ನುಡಿಯುವುದರಿಂದ ಹೇಗೆ ಒಳ್ಳೆಯದಾಗುತ್ತದೆಯೋ ಅದನ್ನು ಪಾಲನೆ ಮಾಡುವುದು ಅಷ್ಟು ಸುಲಭ ಸಾಧ್ಯವಲ್ಲ. ಅಂದರೆ ಸತ್ಯವನ್ನು ನುಡಿಯುವುದರಿಂದ ಅನ್ಯರ ಕೋಪ, ಅನ್ಯರ ಅಸಭ್ಯ ವರ್ತನೆ, ಅನ್ಯರ ಅನ್ಯಾಯ, ಅನ್ಯರಿಗೆ ಉಂಟಾಗುವ ತೊಂದರೆ, ಅನ್ಯರಿಂದ ತನಗೆ ಆಗುವ ನೋವು ಇವೆಲ್ಲವನ್ನೂ ಸಹಿಸುವ ಶಕ್ತಿ ಇದ್ದರೆ ಮಾತ್ರ ಆತ ಸತ್ಯವ್ರತವನ್ನು ನಡೆಸಬಲ್ಲ. ನಡೆಸಿದ ನಂತರ ಕೊನೆಗೆ ಆ ಕಷ್ಟವನ್ನೆಲ್ಲ ಸಹಿಸಿ ಸಹಿಸಿ, ಅಂತಿಮವಾಗಿ ನೆಮ್ಮದಿ ತರುತ್ತದೆ ಎನ್ನುವುದು ಶತಸಿದ್ಧ.

ಅನೇಕ ಮಹಾತ್ಮರು, ಗಾಂಧೀಜಿ ಮೊದಲಾದವರು ಸತ್ಯಕ್ಕೆ ಉದಾಹರಣೆಯಾಗಿ ಲೋಕಕ್ಕೆ ಸತ್ಯ ಎನ್ನುವುದು ಮಹಾ ವ್ರತ, ಸದಾ ಪಾಲನೆ ಜೀವನದ ಮಹತ್ಸಾಧನೆಗೆ ಮೈಲುಗಲ್ಲು ಎನ್ನುವುದನ್ನು ತೋರಿಸಿಕೊಟ್ಟರು. ಸತ್ಯವನ್ನು ನುಡಿದು ವಿದ್ಯಾರ್ಥಿ, ಶಿಕ್ಷಕ, ಅಧಿಕಾರಿ ಅನೇಕರು ಹಿರಿಕಿರಿಯರ ಕೋಪಕ್ಕೆ ತುತ್ತಾಗಿ ಮಳೆ ಬಂದಂತೆ ಕೊಡೆ ಹಿಡಿದು ಸತ್ಯವೂ ಬೇಡ ಅಸತ್ಯವೂ ಬೇಡ ನಮ್ಮ ಬದುಕು ನಮಗೆ ಎನ್ನುವ ಸಾಮಾನ್ಯ ಸಿದ್ಧಾಂತ ಎಲ್ಲೆಡೆ ಕಾಣಸಿಗುವುದು ಆಶ್ಚರ್ಯವೇನಲ್ಲ.

ದೀನರಲ್ಲಿ ದಯೆ ಬೇಕು. ಬಡವರನ್ನು ಕಂಡರೆ ಎಲ್ಲರಿಗೂ ಅನುಕಂಪ ಇರುತ್ತದೆ. ದೀನರಿಗೆ ದಯನೀಯ ಸ್ಥಿತಿ ಬರಬಾರದು ಎನ್ನುವ ಪರಿಕಲ್ಪನೆ ಅನೇಕರಿಗೆ ಇರುತ್ತದೆ. ಆದರೆ ತನ್ನ ಆದಾಯದಲ್ಲಿ ಇನ್ನೊಬ್ಬರಿಗೆ ಸ್ವಲ್ಪ ಕೊಡಬೇಕು ಅಥವಾ ಅವರನ್ನು ಸ್ವಲ್ಪ ಉನ್ನತಮಟ್ಟಕ್ಕೆ ಒಯ್ಯಬೇಕು ಎನ್ನುವ ಮಾನಸಿಕ ಕಲ್ಪನೆ ಮೂಡುವುದಿಲ್ಲ. ಕೊಡುವುದಕ್ಕಿರಬೇಕು ಕೊಡುವ ಬುದ್ಧಿಯು ಬೇಕು ಎನ್ನುವ ತತ್ತ್ವ ಕ್ರಿಯಾಚರಣೆಗೆ ಬರಬಹುದೇ? ಐಶ್ವರ್ಯ, ಸಂಪತ್ತು ಮುದವನ್ನು ಉಂಟುಮಾಡುತ್ತದೆ. ಅಂದರೆ ಧನವಂತನ ಮಾನಸಿಕ ಸ್ಥಿತಿ ಬಡವರತ್ತ ಮುಖ ಮಾಡಿದರೆ, ದೀನರಲ್ಲಿ ಪ್ರೀತಿ ವಾತ್ಸಲ್ಯದಲ್ಲಿ ಲೀನವಾದರೆ ತನ್ನಿಂದ ತಾನೇ ಉತ್ತಮ ಸಮಾಜ ನಿರ್ಮಾಣವಾದಂತೆ.

ಕಾಮ ಕ್ರೋಧವನ್ನು ಗೆದ್ದರೆ ಅಂದರೆ ಇಲ್ಲಿ ಗೆಲ್ಲುವುದು ಅಂದರೆ ಆಟದ ಗೆಲುವಲ್ಲ. ಅಂದರೆ ಕಾಮ ಕ್ರೋಧ ನಿಯಂತ್ರಿಸುವುದು ಎಂದರ್ಥ. ಕಾಮ ಅಂದರೆ ಬಯಕೆ, ಅಂದರೆ ಇಚ್ಛೆ, ಅಂದರೆ ಬೇಕು ಎನ್ನುವ ಭಾವನೆ. ಪಂಚೇಂದ್ರಿಯಗಳ ಎಲ್ಲ ಸುಖ ಯಾವಾಗಲೂ ಬೇಕು. ಅದಕ್ಕೆ ಕೊನೆಯಿಲ್ಲ. ಸೈಕಲ್ ಚಲಾಯಿಸುವವನು ಬೈಕ್ ಅಥವಾ ಉತ್ತಮ ಇಂಧನದಿಂದ ಚಲಿಸುವ ವಾಹನವನ್ನು ಇಚ್ಛಿಸುತ್ತಾನೆ. ಆಮೇಲೆ ನಾಲ್ಕು ಚಕ್ರದ ಉತ್ತಮ ಕಾರೊಂದು ಬೇಕು. ಆಮೇಲೆ ಸ್ವಂತ ವಿಮಾನವಿದ್ದರೆ ಚೆನ್ನ. ಹೀಗೆ ಎಲ್ಲ ಸಂಗತಿಗಳಲ್ಲಿ ಇಂತಹ ಬೇಕು ಬೇಕು ಎನ್ನುವ ಮಹದಾಸೆ, ಅದು ಪೂರ್ಣವಿರಾಮ ಪಡೆದು ಸಾಕು-ಬೇಡ ಎನ್ನುವ ಮನದಿಂಗಿತ ಮೂಡಿಬಂದರೆ ಆಗ ಅದು ಕಾಮ ಗೆಲ್ಲುವ ಮೂಲಮಂತ್ರ.

ಕ್ರೋಧ ಅಂದರೆ ಸಿಟ್ಟು. ಸಿಟ್ಟನ್ನು ಗೆಲ್ಲುವುದು ಅಂದರೆ ಬಿಡುವುದು. ತನ್ನ ಅನಿಸಿಕೆಯ ವಿರುದ್ಧದ ಸಂಗತಿ ಸಿಟ್ಟಿಗೆ ಕಾರಣವಾಗುತ್ತದೆ. ಸಿಟ್ಟು ತನ್ನ ವೈರಿ, ಶಾಂತಿ ಪರರ ವೈರಿ ಎನ್ನುವಂತೆ, ಸಿಟ್ಟೆಂಬ ವೈರಿಯನ್ನು ಪ್ರೀತಿಸುವವರು ಹೆಚ್ಚು. ಅಂದರೆ ಈ ಸಿಟ್ಟು ಬರುವ ಸ್ವಭಾವ ಸುಲಭವಾಗಿ ಬಿಡುವಂಥದ್ದಲ್ಲ. ಸಿಟ್ಟು ಎನ್ನುವುದು ಮಾತಾ ಪಿತೃಗಳನ್ನು ದೂರ ಮಾಡಿದ್ದು ದೈನಂದಿನ ಉದಾಹರಣೆ. ಗಂಡ-ಹೆಂಡತಿ-ಮಕ್ಕಳು ಎಲ್ಲರೂ ದೂರಾಗಿ ಕುಟುಂಬ ನಾಶದ ಅಂಚಿನತ್ತ ಓಡಿದ್ದು ಈ ಸಿಟ್ಟಿನಿಂದ. ಜೀವನದಲ್ಲಿ ಸಕ್ಕರೆ ಕಾಯಿಲೆ ಅಥವಾ ಬಿ.ಪಿ. ಅಥವಾ ಇನ್ನಿತರ ಕಾಯಿಲೆಗಳು ಬಂದದ್ದು ಈ ಕ್ರೋಧದಿಂದ. ಅಂದರೆ ಇಂತಹ ದುಸ್ಥಿತಿಗೆ ಕಾರಣವಾದ ಸಿಟ್ಟನ್ನು ದೂರಮಾಡುವುದು, ಬಿಟುವುದು, ಗೆಲ್ಲುವುದು ಮನುಷ್ಯನ ಆಂತರಂಗಿಕ ಆದ್ಯ ಕರ್ತವ್ಯ ತಾನೆ? ಹೀಗೆ ಕಾಮ-ಕ್ರೋಧ ಎಲ್ಲವನ್ನು ಗೆಲ್ಲುವ ಅಂದರೆ ಜೀವನದಲ್ಲಿ ಸತ್ಯವನ್ನು ತನ್ನ ಅಂಕಿತದಲ್ಲಿಟ್ಟು ಸದ್ಗುಣ ತನ್ನಿಂದ ತಾನೇ ಜೀವಿತದ ಅಂಗವಾದರೆ ಅದೇ ಬದುಕು ತಾನೆ?

ನವರಾತ್ರಿಗಾಗಿ ನವೋತ್ಸಾಹ ಸನ್ನಿಹಿತವಾಗಿದೆ ದುರ್ಗೆಯ ನವವತಾರದ ನವ ಸಂದೇಶ ನಮ್ಮನ್ನಾವರಿಸಲಿದೆ, ವಿಜಯದಶಮಿ, ವಿದ್ಯಾ ದಶಮಿಯ ಎಲ್ಲಾ ಶುಭ ಸಂದೇಶಗಳು ನಮ್ಮದಾಗಲಿ. ಸಮೃದ್ಧಿ, ಸದ್ಬುದ್ಧಿ ಸದಾ ಸಿದ್ಧಿ ದುರ್ಗೆಯ ಅನುಗ್ರಹದಿಂದ ಸರ್ವರದಾಗಲಿ.

ಜೀವನದಿ ದೈನಂದಿನ ವ್ರತವಾಗಲಿ ಸತ್ಯ
ಮನುಜ ಸಹಜ ಕಾಮ-ಕ್ರೋಧಗಳನ್ನು ಗೆಲ್ಲಲಿ ನಿತ್ಯ
ಅನ್ಯರ ಒಳಿತಿನಲಿ ತನ್ನ ಕಾಯಕವಿದು ಧನ್ಯ
ದಯೆಯೆಂಬ ಮನದಿಂಗಿತ ಸರ್ವರಿಗೂ ಸಮ್ಮಾನ್ಯ

ಸಂಪಾದಕರು.

ಯಶಸ್ವೀ ಬದುಕಿನ ಮಾರ್ಗ ಮಿಂಚು

ಲೇ॥ ವನರಾಗ ಶರ್ಮಾ

# ಶಾಂತಿಯ ಬೆಳುದಿಂಗಳು

ಶಾಂತಿ–ಪರಮ ಶಾಂತಿಯೇ ಜೀವನದ ಅಂತಿಮ ಗುರಿ. ಆತ್ಯಂತಿಕ ಸುಖ–ಪರಮಾನಂದ ಪರಮಶಾಂತಿಯಿಂದಲೇ ಲಭಿಸುತ್ತದೆ. ಅಶಾಂತಸ್ಯ ಕುತಃ ಸುಖಮ್? ಎಂದು ಗೀತೆ ಪ್ರಶ್ನಿಸುತ್ತದೆ.

ಶಾಂತಿ ಬೆಳುದಿಂಗಳ ಹಾಗೆ ಆಹ್ಲಾದಕರ. ಅಲ್ಲಿ ಬೇಗೆ –ಬೇಗುದಿಯಿಲ್ಲ. ನೋವು–ಸಂಕಟವಿಲ್ಲ. ವರಾತ–ಒತ್ತಡವಿಲ್ಲ. ಅಂತಹ ಶಾಂತಿಯೇ ಎಲ್ಲರಿಗೂ ಬೇಕಾದದ್ದು. ಪ್ರತಿಯೋರ್ವನ ಜೀವನದ ಗುರಿಯು ಅದೇ. ಅದನ್ನು ಪಡೆಯಲು ಮೊದಲು ಕ್ರಾಂತಿ ನಡೆಯಲೇ ಬೇಕು; ಅದು ಆಶಾ ಪಾಶವನ್ನು ಕಿತ್ತೊಗೆವ ಕ್ರಾಂತಿ. ಕೆಡುಕಿನ ಮೇಲೆ ಒಳಿತನ್ನು ಸಾಧಿಸುವ ಕ್ರಾಂತಿ. ಭವದ ಜಂಜಾಟಗಳ, ಕುಂದು–ಕೊರತೆಗಳ, ಸವಾಲು–ಸಮಸ್ಯೆಗಳ ಸುಳಿಯಲ್ಲಿ ಗೆದ್ದೆದ್ದು ಬರುವ ಮಹಾಕ್ರಾಂತಿ. ಆ ಕ್ರಾಂತಿಯ ಬೆಂಕಿಯ ಕುಲಿವೆಯಲ್ಲಿ ಬೆಂದು, ಅಪರಂಜಿ ಚಿನ್ನವಾಗಿ ಹೊರ ಬಂದಾಗ ಆ ಪರಮ ಶಾಂತಿ–ಅಲೌಕಿಕ ಶಾಂತಿ ನಮ್ಮದಾಗುತ್ತದೆ.

ದೇವರ ಸನ್ನಿಧಿಯಲ್ಲಿ, ಗುರುವಿನ ಪದತಲದಲ್ಲಿ ಸಂಪೂರ್ಣ ಶರಣಾಗತಿಯಾಗಿ, ಆಶೆಯನ್ನು ಮಾಣಿಸಿಕೊಂಡಾಗ ಬಾಳಿನ ಉದ್ಯಾನವನದಲ್ಲಿ ಶಾಂತಿಯ ಬೆಳುದಿಂಗಳು ಹಾಸುತ್ತದೆ. ಅದೇ ಸುಖದ ಗಂಗೋತ್ರಿ ! ಶಾಂತಿಯ ವೃಕ್ಷದಲ್ಲಿ ಬಿಟ್ಟ ಅಮೃತ ಫಲವೇ ಶಾಶ್ವತ ಸುಖ–ಪರಮ ಸುಖ! ಆಧ್ಯಾತ್ಮ ಸಾಧನೆಯೇ ಅದರ ದಾರಿ.

ಬಾಳಿನಲಿ ಶಾಂತಿಯನು ಕಾಣಲಿಕೆ 'ಹದ' ಬೇಕು  
ತೊಳೆತೊಳೆದು ಪಾತ್ರೆಯನು ಮಿಂಚುವಂತೆ ॥  
ಕಳೆಯನ್ನು ತೆಗೆಯುತ್ತ ಅದ್ಯಾತ್ಮದುಳುಮೆಯ  
ಬೆಳೆ ಶಾಂತಿ ಚಂದ್ರಿಕೆಯ– ವನರಾಗ ಮಿತ್ರ ॥  
ಬೆಳೆದಿಂಗಳುದ್ಯಾನವಾಗುವುದು ಜೀವನವು  
ಬೆಳೆಗುತಿರೆ ಪರತತ್ತ್ವ ಸುಜ್ಞಾನ ಜ್ಯೋತಿ ॥  
ಹೊಳೆಯಾಗಿ ಹರಿಯುವುದು ಶಾಂತಿ ಮಳೆ ಜಿನುಗುತ್ತ  
ಸೆಳೆಯುವುದು ಆತ್ಮನೆಡೆ– ವನರಾಗ ಮಿತ್ರ ॥

ಇದಕ್ಕೊಂದು ಸುಂದರವಾದ ದೃಷ್ಟಾಂತ ಕತೆ ಹೀಗಿದೆ :

ಹಸಿದ ಕಾಗೆಯೊಂದು ಹೇಗೊ ರೊಟ್ಟಿಯ ತುಣುಕೊಂದನ್ನು ಸಂಪಾದಿಸಿಕೊಂಡಿತು. 'ರೊಟ್ಟಿ ಸಹಿತ ಗಿಡವೊಂದರ ಮೇಲೆ ಹಾರಿ ಟೊಂಗೆಯ ಮೇಲೆ ಕುಳಿತು ಆರಾಮವಾಗಿ ತಿನ್ನೋಣ' ಎಂದು ಮೇಲೆ ಹಾರಿತು. ಆದರೆ ಇದನ್ನು ಕಂಡ ಇತರ ಕಾಗೆಗಳು ಬಲಾತ್ಕಾರವಾಗಿ ಅದನ್ನು ಕಸಿದುಕೊಳ್ಳಲೋಸುಗ ಅದನ್ನು ತೀವ್ರವಾಗಿ ಬೆನ್ನಟ್ಟಿದವು. ಆಗ ಅವುಗಳಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಇದ್ದಷ್ಟೂ ಶಕ್ತಿ ವ್ಯಯಿಸಿ ಕಾಗೆ ರೊಟ್ಟಿಯನ್ನು ಕೊಕ್ಕಿನಲ್ಲಿ ಕಚ್ಚಿ ಹಿಡಿದು ಹಾರಿಯೇ ಹಾರಿತು. ಎರಡು ಮೂರು ಘಂಟೆ ಹೀಗೆ ನಡೆಯಿತು ಕೊನೆಗೆ ಕಾಗೆ ತುಂಬಾ ಸೋತು ಹೋಯಿತು.. 'ಯಾರಾದರೂ ತಿಂದುಕೊಳ್ಳಲಿ, ಇದನ್ನು ಒಗೆಯುವುದೇ ಕ್ಷೇಮ ಎಂದು ಭಾವಿಸಿ, ಕಷ್ಟಕ್ಕೆ ಈಡು ಮಾಡಿದ ಇದು ತನಗೆ ಬೇಡ' ಎಂದು ಬಗೆದು ಆ ರೊಟ್ಟಿಯನ್ನು ಒಗೆಯಿತು. ಆ ಬಳಿಕ ಅದು ಚೆಲ್ಲಿದ ರೊಟ್ಟಿಯ ತುಣುಕನ್ನು ಯಾವ ಇನ್ನೊಂದು ಕಾಗೆ ಎತ್ತಿಕೊಂಡಿತೊ ಅದನ್ನು ಇತರ ಕಾಗೆಗಳು ಬೆನ್ನಟ್ಟಿದವು.! ರೊಟ್ಟಿಯ ಚೂರನ್ನು ಒಗೆದ ಕಾಗೆ ವಿಶಾಲ ಗಿಡವೊಂದರ ಮೇಲೇರಿ ಅದರ ತಂಪಾದ ನೆರಳಲ್ಲಿ ವಿಶ್ರಾಂತಿ ಪಡೆಯಿತು. ಆ ಮರದ ಮೇಲೆ ಹಣ್ಣೂ ಇತ್ತು ಸಾಯದಿರಲಿಕ್ಕಾಗಿ ಮಾತ್ರ ಅದನ್ನು ತಿಂದಿತು. ಆಸೆಯ ಹಿಂದೆ ಬೀಳಲಿಲ್ಲ. ಅದಕ್ಕೆ ಈಗ ಪರಮ ಶಾಂತಿ ಲಭಿಸಿತು. ಕ್ಷಣಿಕ ಸುಖದ ಬೆಂಬತ್ತಿ ಹೋದರೆ ಅಶಾಂತಿಯೇ ವಿನಾ ಶಾಂತಿಯಿಲ್ಲ. ಆಸೆಯ ಬಂಧನವನ್ನು ಕಿತ್ತೆಸೆದಾಗ ಶಾಂತಿಯೂ, ಆದರಿಂದ ಸುಖವೂ ದೊರಕಿತು.

ಗೀತೆಯಲ್ಲಿ ಶ್ರೀ ಕೃಷ್ಣ ಹೀಗೆ ಹೇಳುತ್ತಾನೆ :

ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ ।  
ನ ಚಾಭಾವಯುತಃ ಶಾಂತಿರಶಾಂತಸ್ಯ ಕುತಃ ಸುಖಮ್ ?

ಅಯುಕ್ತನಾದವನಿಗೆ ಬುದ್ಧಿಯಿಲ್ಲ. ಅಯುಕ್ತನಾದವನಿಗೆ ಭಾವನೆಯೂ ಇಲ್ಲ. ಭಾವನೆ ಮಾಡದವನಿಗೆ ಶಾಂತಿಯಿಲ್ಲ, ಶಾಂತಿಯಿಲ್ಲದವನಿಗೆ ಸುಖ ಎಲ್ಲಿ?

ಯಾರು ಇಂದ್ರಿಯವನ್ನು ನಿಗ್ರಹಿಸಿಕೊಂಡಿಲ್ಲವೋ ಅವನ ಬುದ್ಧಿ ಯುಕ್ತವಾಗಿರುವುದಿಲ್ಲ. ಆಸೆ–ಆಕಾಂಕ್ಷೆಗಳಿಂದ ಬುದ್ಧಿಯು ನಿರ್ದೇಶಿಸಲ್ಪಡುತ್ತಿದ್ದರೆ ಅವುಗಳನ್ನು ತೃಪ್ತಿ ಪಡಿಸಲು ಬುದ್ಧಿ ಪ್ರಯತ್ನಿಸುತ್ತದೆಯೇ ಹೊರೆತು ಸತ್ಯವನ್ನು ಅರಿಯಲು ಪ್ರಯತ್ನಿಸುವುದಿಲ್ಲ. ಯಾರು ತಮ್ಮ ಇಂದ್ರಿಯವನ್ನು ನಿಗ್ರಹಿಸಿಲ್ಲವೊ ಅವನ ಮನಸ್ಸಿನಲ್ಲಿ ಒಳ್ಳೆಯ ಭಾವನೆಗಳೂ ಇರದು. ಒಳ್ಳೆಯ ಭಾವನೆಗಳು

ಎಂಬುದು ಸುಗಂಧ ಪುಷ್ಪಗಳಂತೆ. ಅದು ತನ್ನ ಸುತ್ತಲೂ ಕಂಪು ಬೀರುತ್ತಿರುತ್ತದೆ. ಅಂತಹ ಒಳ್ಳೆಯ ಭಾವನೆಗಳಲ್ಲಿ ಮೈತ್ರಿ, ಕರುಣ, ಮುದಿತ, ಉಪೇಕ್ಷ ಎಂಬ ನಾಲ್ಕು ಭಾವಗಳು ಮುಖ್ಯವಾದವುಗಳು.

ಎಲ್ಲರನ್ನೂ ಪ್ರೀತಿಸುವುದು ಮೈತ್ರಿ ಭಾವ. ಅಲ್ಲಿ ದ್ವೇಷ ಮತ್ಸರಗಳಿಲ್ಲ. ಯಾರು ದುಃಖದಲ್ಲಿರುವರೋ ಅವರಿಗಾಗಿ ಮರಗುವುದು ಮತ್ತು ಸಹಾಯ ಮಾಡುವುದು ಕರುಣೆ. ಇತರರು ಉನ್ನತಿ ಹೊಂದಿದರೆ ಸಂತೋಷ ಪಡುವುದು, ಎಲ್ಲವೂ ಭಗವಂತನ ಹೂದೋಟದ ಅರಳಿದ ಸುಂದರ ಕುಸುಮಗಳು ಎಂದು ಭಾವಿಸಿ ಅವರನ್ನು ನೋಡಿ ಆನಂದ ಪಡುವುದು ಮುದಿತ ಭಾವ. ಹಾಗೆಯೇ ಯಾರಾದರೂ ನಮ್ಮನ್ನು ಟೀಕಿಸಿದರೆ, ಬೈಯ್ಯುತ್ತಿದ್ದರೆ ಅದನ್ನು ಉದಾಸೀನದಿಂದ ಕಾಣುವುದು ಉಪೇಕ್ಷೆ.

ಈ ಎಲ್ಲ ಭಾವಗಳೆ ಶಾಂತಿಯ ಮೂಲ. ಯಾರ ಹೃದಯದಲ್ಲಿ ಒಳ್ಳೆಯ ಭಾವನೆಗಳೇ ಇಲ್ಲವೊ ಅಲ್ಲಿ ಶಾಂತಿಯೆಂಬುದು ಒಂದು ಕನಸು. ಪರಮಾತ್ಮನ ಸೃಷ್ಟಿಯಲ್ಲಿ ಎಲ್ಲರಿಗೂ ಸಮಾನ ಸ್ಥಾನವಿದೆ, ಎಲ್ಲರೂ ಚನ್ನಾಗಿ ಬದುಕ ಬೇಕು ಎಂಬ ಮೂಲ ಆಶಯವನ್ನು ಮನಸ್ಸಿನಲ್ಲಿಟ್ಟುಕೊಂಡು, ಒಳಿತನ್ನೇ ಹಂಚಬೇಕು. ಒಳ್ಳೆಯದನ್ನೇ ಮಾಡಬೇಕು. ಹೆರರ ಬಗ್ಗೆ ಕರುಬಬಾರದು. ಅವರ ಉನ್ನತಿಯನ್ನು ನೋಡಿ ಸಂತೋಷ ಪಡಬೇಕು. ನಾವು ಏನನ್ನು ಕಳಿಸುತ್ತೇವೆಯೊ ಅದನ್ನು ಪಡೆಯುತ್ತೇವೆ. ಬೈಗುಳನ್ನೋ, ಹೊಟ್ಟೆಕಿಚ್ಚನ್ನೋ ಕಳಿಸಿದರೆ ಅದನ್ನೇ ಪಡೆಯುತ್ತೇವೆ. ಪ್ರೀತಿಯನ್ನೊ, ತ್ಯಾಗವನ್ನೋ, ಸಹಾಯವನ್ನೋ ನೀಡಿದರೆ ಅದನ್ನೇ ಪಡೆಯುತ್ತೇವೆ. ಅಂತೆಯೇ ಎಲ್ಲರಿಗೂ ಒಳ್ಳೆಯದಾಗಲಿ. ಸರ್ವೇಭವಂತು ಸುಖಿನಃ । ಸರ್ವೇ ಸಂತು ನಿರಾಮಯಃ ॥ ಸರ್ವೇ ಸಂತು ನಿರಾಮಯಾಃ ಸರ್ವೇ ಭದ್ರಾಣಿ ಪಶ್ಯಂತು । ಮಾಕಶ್ಚಿತ್ ದುಃಖಭಾಗ್‌ಭವೇತ್॥ ಎಲ್ಲರೂ ಸುಖಿಗಳಾಗಲಿ, ಸರ್ವರೂ ನಿರೋಗಿಗಳಾಗಲಿ, ಎಲ್ಲರೂ ಮಂಗಳವನ್ನೇ ಕಾಣಲಿ, ದುಃಖವೆಂದು ಉಂಟಾಗದಿರಲಿ ಎನ್ನುತ್ತ ಎಲ್ಲರೂ ಭವ ಬಂಧದಿಂದ ಮುಕ್ತರಾಗಲಿ ಎಂದು ಆಶಿಸಿದ ನಮಗೂ ಹಾಗೆಯೇ ಆಗುತ್ತದೆ. ಆದುದರಿಂದ ಒಳ್ಳೆಯ ಭಾವನೆಯನ್ನು ಹೊಂದದೇ ಇರುವವನಿಗೆ ಶಾಂತಿಯೆಂಬುದು ಇಲ್ಲ. ಮಲವನ್ನು ಕೊಟ್ಟರೆ ಮಲ ಮರಳಿ ಬರುತ್ತದೆ. ಇದು ಶಾಂತಿಯ ದಿವ್ಯ ಮಂತ್ರ ತಿಳಿಯುವುದು ಶ್ರೇಯಸ್ಕರ.

ಬದುಕಿನಲ್ಲಿ ಯಾರಿಗೆ ಶಾಂತಿಯಿಲ್ಲವೊ ಅವನಿಗೆ ಸುಖ ಹೇಗೆ ಸಿಗಬೇಕು? ಸಿಹಿ ಮಾವಿನ ಹಣ್ಣು ಹುಳಿಯಾಗುತ್ತದೆ. ಇರಲು ಬಂಗಲೆ, ಮಲಗಲು ಹಂಸ ತೂಲಿಕಾ ತಲ್ಪವೇ ಇರಬಹುದು, ತಿರುಗಾಡಲು, ಕಾರು, ಹೆಲಿಕಾಪ್ಟರ್, ವಿಮಾನು, ಉಣಲು ಮೃಷ್ಟಾನ್ನ ಭೋಜನ, ಹೆಚ್ಚೇಕೆ ಅಮೃತವೇ, ಅಮೃತ ಫಲವೇ ಇದ್ದೀತು ಆದರೆ ಶಾಂತಿಯಿಲ್ಲದ ಆತನಿಗೆ 'ಸುಖ' ಎಂಬುದು ಮರೀಚಿಕೆಯೇ ಆಗಿರುತ್ತದೆ. ಬಾಯಿ ರುಚಿ ಇಲ್ಲದಾತನಿಗೆ ಯಾವುದು ರುಚಿಸುತ್ತದೆ? ಆದರಂತೆಯೇ ಅಶಾಂತನಿಗೆ ಸುಖ ಇಲ್ಲ. ಅದಕ್ಕೆ ತ್ಯಾಗರಾಜರು 'ಶಾಂತಮು ಲೇಕ ಸೌಖ್ಯಮು ಲೇದು" ಎಂದು ಹಾಡುತ್ತಾರೆ ಎಂದು ಸ್ವಾಮಿ ಸೋಮನಾಥಾನಂದರು ಗೀತಾ ಭಾವಧಾರೆಯಲ್ಲಿ ಇದನ್ನು ಸುಂದರವಾಗಿ ವ್ಯಾಖ್ಯಾನಿಸಿದ್ದಾರೆ.

"ಇಲ್ಲಿ ವಿಷವಿಕ್ಕಿದವನಿಗೆ ವಿಷವೇ ದಕ್ಕುವುದು. ಸಕ್ಕರೆ ತಿನ್ನಿಸಿದವನಿಗೆ ಸಕ್ಕರೆಯೇ ಸಿಗುವುದು. ಒಳ್ಳೆಯ ವ್ಯಕ್ತಿಗಳಿಗೆ ಒಳ್ಳೆಯ ತನದ ಆನಂದವೇ ಲಭಿಸುವುದು ತೊಂದರೆ ಕೊಡುವವನಿಗೆ ಬರುವ ಪ್ರತಿಫಲವನ್ನು ಕಾಣು....ಯಾರು ಇನ್ನೊಬ್ಬರ ಹೂವನ್ನು ಅರಳಿಸುವರೊ ಅವನ ತೋಟದ ಹೂಗಳು ಅರಳುತ್ತವೆ. ಯಾರು ಮಾತಾಡದಂತೆ ಇನ್ನೊಬ್ಬರ ಬಾಯಿ ಮುಚ್ಚಿಸುವರೋ ಅವರ ಬಾಯಿಯೂ ಮುಚ್ಚಲ್ಪಡುವುದು. ಯಾರು ಇನ್ನೊಬ್ಬರಿಗೆ ಮೋಸ ಮಾಡುವರೋ ಅವರಿಗೂ ಮೋಸವೇ ಆಗುವುದು. ನೀನು ಬೇರೆಯವರನ್ನು ಹೊಗಳಿದರೆ ನಿನ್ನನ್ನೂ ಉಳಿದವರು ಹೊಗಳುವರು. ನೀನು ಬೇರೆಯವರ ಸಂಕಟವನ್ನು ಪರಿಹರಿಸಿದರೆ ನಿನ್ನ ಸಂಕಟಗಳೂ ಪರಿಹಾರ ಕಾಣುವವು. ಮತ್ತೋಬ್ಬರಿಗೆ ರೊಟ್ಟಿ ತಿನ್ನಿಸಿದರೆ ರೊಟ್ಟಿ ಸಿಗುವುದು, ನೀರು ಕುಡಿಸಿದರೆ ನಿನಗೂ ನೀರು ಸಿಗುವುದು." – ಆಶಾರಾಮಾಜೀ ಬಾಪೂಜೀ'

ಶಾಂತಿಗೆ ಏನು ಬೇಕು ಎಂಬುದಕ್ಕೆ ಇದಕ್ಕಿಂತ ಇನ್ನೊಂದು ಉದಾಹರಣೆ ಬೇಕೆ? ಎಲ್ಲರಿಗೂ ಕ್ಷೇಮವುಂಟಾಗಲಿ, ಸರ್ವರಿಗೂ ಆರೋಗ್ಯ ಭಾಗ್ಯ ಲಭಿಸಲಿ, ಆಯುಷ್ಯ–ಆನಂದ–ಐಶ್ವರ್ಯ ಹೆಚ್ಚಲಿ ಎಂದು ಆಶಿಸಿದಾಗ ಪ್ರೀತಿಯನ್ನೂ ಕರುಣೆಯನ್ನೂ ಹರಿಸಿದಾಗ ಜೀವನದಲ್ಲಿ ಶಾಂತಿಯ ಬೆಳುದಿಂಗಳು ಹೊಯ್ಯುತ್ತದೆ.

ಸಕಲರಿಗೆ ಸುಖವಿರಲಿ ಸರ್ವರಿಗೆ ಹಿತವಿರಲಿ  
ಸೌಕರ್ಯ ಆರೋಗ್ಯ ಆನಂದವೆಂದು ॥  
ಅಕಳಂಕ ಭಾವದಲಿ ಆಶಿಸುತ ನಡೆದಂಗೆ  
ನಾಕವೇ ಬಳಿಗಾಯ್ತು – ವನರಾಗ ಮಿತ್ರ ॥


**ಹೇಮುಪುರ ಪತ್ರಿಕೆಯ ಚಂದಾವಿವರ**

* ಬಿಡಿ ಪತ್ರಿಕೆ – ರೂ.20/– * ವಾರ್ಷಿಕ ಚಂದಾ – ರೂ.200/– * ಪಂಚವಾರ್ಷಿಕ ಚಂದಾ – ರೂ.1000/–
* ಆಜೀವ ಸದಸ್ಯತ್ವ – ರೂ.5000/–

**ವಿವರಗಳಿಗೆ ಸಂಪರ್ಕಿಸಿ :** ಸಂಪಾದಕರು, ಹೇಮುಪುರ ಮಾಸಪತ್ರಿಕೆ. ಫೋನ್ ನಂ: 08387–268333,268545,268544.




ಭಾರತದ ಪ್ರಥಮ ನೌಕಾದಳ ಹಡಗು – ಐಎಸ್‌ಎಸ್, ದೆಹಲಿ

ಶ್ರೀಧರ ಸ್ಮರಣೆ

ಲೇ ॥ ಜಿ. ಟಿ ಶ್ರೀಧರಶರ್ಮ
9480473568

# ಸಜ್ಜನಗಡದಲ್ಲಿ ಶ್ರೀ ಶ್ರೀಧರರು ಅನುಪಮ ಸೇವೆ ಸಲ್ಲಿಸಿದರು. ಅವರು ಮಹಾತ್ಮರು

ಗುರುಸೇವೆಗೆ ಸರಿಯಾದ ಉದಾಹರಣೆ ಎಂದರೆ ಶ್ರೀಧರಸ್ವಾಮಿಗಳು ಸಜ್ಜನಗಡದಲ್ಲಿ ಸಲ್ಲಿಸಿದ ಸೇವೆ. ಅವರು ಸಜ್ಜನಗಡದಲ್ಲಿ ಇರುವಾಗೆಲ್ಲ ತನ್ಮಯತೆಯಿಂದ ಸೇವೆ ಸಲ್ಲಿಸಿದ್ದರು. ಅವರು ಆವಾಗ ಬೇರೆ ಏನನ್ನೂ ಯೋಚಿಸಲಿಲ್ಲ, ಮಾಡಲಿಲ್ಲ.

ಶ್ರೀಧರರು ಹೀಗೆ ಗಡದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಒಬ್ಬ ಹಿರಿಯರು ಹೀಗೆ ಹೇಳಿದರು. "ನಿಮಗೆ ಸಮಾಧಿ ಹತ್ತುವಂತೆ ಮಾಡುತ್ತೇನೆ". ಅವರು ನೋಡಲೂ ಯೋಗಿಯಂತೆಯೆ ಇದ್ದರು. ಶ್ರೀಧರರು ತುಂಬ ಶಾಂತರಾಗಿಯೇ ಹೇಳಿದರು. "ಸ್ವಾಮಿ, ತಾವು ಹಿರಿಯರು. ಸಮಾಧಿ ಅದು ಬಹುದೊಡ್ಡ ವಿಷಯ. ನಾನಿನ್ನೂ ಸಣ್ಣ ಸಾಧಕ. ನಾನೀಗ ಗುರುಸೇವೆ ಮಾಡುತ್ತಿದ್ದೇನೆ. ಕ್ರಮೇಣ ನನಗೆ ಸಮಾಧಿಯ ಅಧಿಕಾರ ಬರುವುದು. ಮಿಡಿಯನ್ನು ಗುದ್ದಿ ಹಣ್ಣು ಮಾಡಬಾರದು. ಶ್ರೀ ಸಮರ್ಥರ ಅನುಗ್ರಹವು ನನ್ನ ಮೇಲೆ ಬೇಗ ಆಗಲೆಂದು ನೀವು ಮನಮುಟ್ಟಿ ಆಶೀರ್ವದಿಸಿ. ಆಗ ನನಗೆ ಸಮರ್ಥರ ಕೃಪಾಶೀರ್ವಾದಗಳಿಂದ ಅಂಥ ಅಧಿಕಾರವೂ ಸಿಗುತ್ತದೆ. ಅವರೇ ಸಮಾಧಿಗೂ ಹಚ್ಚುವರಲ್ಲವೇ?"

ಶ್ರೀಧರರು ಸಜ್ಜನಗಡದ ಸಮರ್ಥರ ಸಮಾಧಿಯಲ್ಲಿ ಪೂಜೆ ಮಾಡುವಾಗ ತಮ್ಮನ್ನೇ ತಾವು ಮರೆಯುತ್ತಿದ್ದರು. ಒಂದು ದಿನ ಶ್ರೀಧರರು ನೈವೇದ್ಯದ ಹರಿವಾಣವನ್ನು ತೆಗೆದುಕೊಂಡು ಸಮರ್ಥರ ಶಯನಾಗಾರದೊಳಗೆ ಹೋಗುತ್ತಿದ್ದರು. ಅದರ ಪಕ್ಕದಲ್ಲಿಯೇ ಗಡದ ಪೂಜಾರಿ ಬಂಡೂಭಟ್ಟರ ಅತ್ತೆ ನಿಂತಿದ್ದಳು. ಶ್ರೀಧರರು ನೈವೇದ್ಯ ಮಾಡುವಾಗಿನ ಪದ್ಧತಿಯಂತೆ ಬಾಗಿಲು ಮುಚ್ಚಿಕೊಂಡರು ಗುರುವಿಗೆ ನೈವೇದ್ಯ ಅರ್ಪಿಸಿ ಶ್ರೀಧರರು ಹೊರಬರುತ್ತಿರುವುದನ್ನು ಗಮನಿಸಿದ ಆಕೆಯ ನುಡಿಗಳಿವು– " ಭಗವಂತ! ಶ್ರೀಧರರ ಭಕ್ತಿಯನ್ನು ನೋಡಿದರೆ ಆ ದೇವರಿಗೂ ಉಣಬೇಕಾಗಿ ಬರುವುದು." ತಮಗೆ ಬಿಡುವು ಸಿಕ್ಕಾಗೆಲ್ಲ ಶ್ರೀಧರರನ್ನು ಕುರಿತು ಒದುತ್ತಲೇ ಇರುವ ಸಾಗರದ ಕೃಷ್ಣಶಾಸ್ತ್ರಿಗಳು ಈ ಘಟನೆಗಳನ್ನು ಮತ್ತೆ ಸ್ಮರಿಸುತ್ತಾ ಹೀಗೆ ಹೇಳುತ್ತಾರೆ. "ಸಜ್ಜನಗಡದಲ್ಲಿ ಶ್ರೀಧರಸ್ವಾಮಿಗಳು ಅನುಪಮ ಸೇವೆ ಸಲ್ಲಿಸಿದರು. ಅವರು ಮಹಾತ್ಮರು".

ಶ್ರೀ ರಾಮ ಕಥಾಸಾರ

ಲೇ॥ ಬಸ್ತಿ ಸದಾನಂದ ಪೈ

# ಹನುಮಂತ –ಸೀತೆಯರ ಪರಿಚಯ – ವಿನಿಮಯ

ಸೀತೆಯ ಕಾವಲಿಗಿದ್ದ ರಾಕ್ಷಸಿಯರಿಗೆ ರಾವಣನು ಆಜ್ಞೆಮಾಡಿ ದುದನ್ನುನರಿಸಿ, ಕೋಪದಿಂದ ಮೈಮರೆತ ರಾಕ್ಷಸಿಯರು ಸೀತೆಯ ಬಳಿಗೆ ಓಡಿ ಬಂದು ರಾವಣನ ಭಾರ್ಯೆಯಾಗಲು ನೀನು ಒಪ್ಪುದಿಲ್ಲವೇ ಎಂದು ಕೇಳುತ್ತಾರೆ. ಏಕಜಟೆ ಎಂಬ ರಾಕ್ಷಸಿಯು ಪುಲಸ್ತ್ಯನು ಬ್ರಹ್ಮಮಾನಸ ಪುತ್ರನು. ವಿಶ್ರವಸ್ಸುವು ಪುಲಸ್ತ್ಯನ ಮಾನಸ ಪುತ್ರನು. ಆತನ ಮಗನೇ ಈ ರಾಕ್ಷಸ ರಾಜ ರಾವಣನು. ಅವನಿಗೆ ಭಾರ್ಯೆಯಾಗು ಎನ್ನುತ್ತಾಳೆ. ಬೆಕ್ಕಿನ ಕಣ್ಣುಗಳಿಗೆ ಸಮಾನ ಕಣ್ಣುಗಳುಳ್ಳವಳು ಕೋಪದಿಂದ ಕಣ್ಣು ತಿರುಗಿಸುತ್ತಾ ಮೂವತ್ತಮೂರು ದೇವತೆಗಳನ್ನೂ, ದೇವೇಂದ್ರನನ್ನೂ ಗೆದ್ದವನು ರಾವಣನು. ಅವನ ಭಾರ್ಯೆಯಾಗು ಎನ್ನುತ್ತಾಳೆ. ಪ್ರಸಘ, ವಿಕಟೆ, ದುರ್ಮುಖಿ, ಮೊದಲಾದ ರಾಕ್ಷಸಿಯರೆಲ್ಲರೂ ರಾಮನನನ್ನು ಹೊಗಳಿ ಅವನ ಶೌರ್ಯಗಳನ್ನು ಬಣ್ಣಿಸಿ ಅವನ ಭಾರ್ಯೆಯಾಗಲು ಯಾಕೆ ಮನಸ್ಸು ಮಾಡುವುದಿಲ್ಲವೆಂದು ಕೇಳುತ್ತಾರೆ.

ಸೀತೆಯು ಇವರೆಲ್ಲರ ಮಾತುಗಳನ್ನು ಕೇಳಿ ಕಣ್ಣೀರು ತುಂಬಿ, ನೀವೆಲ್ಲರೂ ಒಟ್ಟುಗೂಡಿ ಆಡುತ್ತಿರುವ ಮಾತುಗಳು ಲೋಕ ವಿರುದ್ಧವೂ ಪಾಪಕರವೂ ಆಗಿವೆ. ಮನುಷ್ಯ ಸ್ತ್ರೀಯರು ರಾಕ್ಷಸನ ಭಾರ್ಯೆಯಾಗುವುದು ಯುಕ್ತವಲ್ಲ. ಶಚಿದೇವಿ ಇಂದ್ರನನ್ನು ರೋಹಿಣಿಯು ಚಂದ್ರನನ್ನು ಲೋಪಾಮುದ್ರೆಯು ಅಗಸ್ತ್ಯರನ್ನೂ, ಸುಕನ್ಯಯು ಚ್ಯವನ ಋಷಿಗಳನ್ನೂ, ಸಾವಿತ್ರಿಯು ಸತ್ಯವಾನನನ್ನೂ, ಶ್ರೀಮತಿಯು ಕಪಿಲ ಋಷಿಗಳನ್ನೂ, ದಮಯಂತಿಯು ನಿಷಧ ರಾಜ್ಯದ ರಾಜನಾದ ನಳನನ್ನೂ ಪತಿಯಾಗಿ ಪಡೆದಂತೆ, ನಾನು ಇಕ್ಷ್ವಾಕು ವಂಶದ ರಾಮನನ್ನು ಪತಿಯಾಗಿ ಪಡೆದಿರುವೆನು ಎನ್ನುತ್ತಾಳೆ.

ಅವಳ ಮಾತುಗಳಿಂದ ರಾಕ್ಷಸಿಯರಲ್ಲಿ ಇನ್ನೂ ಕೋಪ ಹೆಚ್ಚಾಗಿ ಕೊಡಲಿಗಳನ್ನು ಹಿಡಿದುಕೊಂಡು ಕ್ರೂರವಾದ ಮಾತುಗಳಿಂದ ಹೆದರಿಸುತ್ತಿದ್ದರು. ಹನುಮಂತನು ಅಲ್ಲಿಯೇ ಇದ್ದ ಶಿಂಶುಪಾ ವೃಕ್ಷದ ಮೇಲೆ ಅವಿತು ಕುಳಿತು ಇದನ್ನೆಲ್ಲಾ ನೋಡುತ್ತಿದ್ದನು. ರಾಕ್ಷಸಿಯರು ಬೆದರಿಸುವುದನ್ನು ಕಂಡು ಸೀತೆಯು ಕಣ್ಣೊರೆಸಿಕೊಂಡು ಶಿಂಶುಪಾ ವೃಕ್ಷದ ಬಳಿ ಹೋಗಿ ದುಃಖದಿಂದ ಬಳಲಿ ಅಲ್ಲಿ ನಿಲ್ಲುತ್ತಾಳೆ. ವಿನುತೆ ಎಂಬ ರಾಕ್ಷಸಿ ಬಹಳ ಕೋಪಾವಿಷ್ಟಳಾಗಿ ನೀನು ಈತನಕ ತೋರಿದ "ಪತಿ ಪ್ರೇಮ" ಸಾಕು. ಯಾವುದನ್ನೇ ಆಗಲಿ ಅತಿಯಾಗಿ ಮಾಡಿದರೆ ಅದರಿಂದ ವ್ಯಸನಕ್ಕೀಡಾಗುತ್ತಾರೆ. ಮನುಷ್ಯ ಜಾತಿಗೆ ತಕ್ಕಂತೆ ನೀನು ಈತನಕ ನಡೆದುಕೊಂಡದ್ದು ನನಗೆ ಸಂತೋಷವಾಗಿದೆ. ಆದರೆ ನಿನ್ನ ಒಳ್ಳೆಯದಕ್ಕಾಗಿ ನಾನು ಹೇಳುವ ಮಾತು ಕೇಳು. ರಾಕ್ಷಸ ರಾಜನಾದ ರಾವಣನನ್ನು ಆಶ್ರಯಿಸು. ಸಮಸ್ತ ಲೋಕಗಳಿಗೂ ನಾಯಕಿಯಾಗು. ನಾನು ಹೇಳಿದ್ದು ನಿನಗೆ ಇಷ್ಟವಾಗದಿದ್ದರೆ ಈ ಕ್ಷಣವೇ ನಾವೆಲ್ಲರೂ ನಿನ್ನನ್ನು ತಿಂದುಬಿಡುವೆವು ಎಂದು ಹೆದರಿಸುತ್ತಾಳೆ.



ಭಾರತದ ಪ್ರಥಮ ದೂರದರ್ಶನ ಕೇಂದ್ರ – ದೆಹಲಿ

ಲಕ್ಷ್ಮಣನ ಅಣ್ಣನಾದ ರಾಮನಿಗೆ ನಾನಿಲ್ಲಿರುವುದು ತಿಳಿದಿಲ್ಲವೆಂದು ಕಾಣುತ್ತದೆ. ವೃದ್ಧನಾದ ಜಟಾಯುವು ರಾವಣನಿಂದ ನನ್ನನ್ನು ರಕ್ಷಿಸಬೇಕೆಂದು ದ್ವಂದ್ವಯುದ್ಧ ಮಾಡಿ ಬೀಳಿಸಲ್ಪಟ್ಟನು. ಮಹಾತ್ಮನೂ ನಿರ್ದೋಷ ಚರಿತನೂ, ಶೂರನೂ, ಶತ್ರು ಸಂಹಾರಕನೂ ಆದ ರಾಮನನ್ನು ಬಿಟ್ಟು ನಾನು ಬದುಕಿರುವುದಕ್ಕಿಂತ ಸಾಯುವುದೇ ಶ್ರೇಯಸ್ಕರ. ಪ್ರೀತಿಪಾತ್ರನೂ ಆತ್ಮಜ್ಞಾನಿಯೂ ಆದ ರಾಮನಿಂದ ತೊರೆಯಲ್ಪಟ್ಟು ಪಾಪಿಯಾದ ರಾವಣನ ವಶಳಾಗಿರುವ ನಾನು ಪ್ರಾಣತ್ಯಾಗ ಮಾಡುವೆನು ಎಂದು ಪ್ರಲಾಪಿಸುತ್ತಾಳೆ.

ಸೀತೆಯು ಹೇಳಿದ ಮಾತುಗಳನ್ನು ಕೇಳಿ ಕೋಪಾವಿಷ್ಟರಾದ ರಾಕ್ಷಸಿಯರು ನೀಚಳೇ ಪಾಪ ಬುದ್ಧಿಯುಳ್ಳವಳೇ ಈಗಲೇ ನಿನ್ನ ಮಾಂಸವನ್ನು ರಾಕ್ಷಸಿಯರು ಸಂತೋಷದಿಂದ ತಿಂದುಬಿಡುವರು ಎಂದು ಬೆದರಿಸುತ್ತಾರೆ. ದೂರದಲ್ಲಿ ಮಲಗಿದ್ದ 'ತ್ರಿಜಟೆ' ಎಂಬ ವೃದ್ಧ ರಾಕ್ಷಸಿಯು, ನೀಚರೇ ನಿಮ್ಮನ್ನು ನೀವು ತಿಂದುಕೊಳ್ಳಿ. ರಾಕ್ಷಸರ ನಾಶವನ್ನು ಈಕೆಯ ಗಂಡನಿಗೆ ಜಯವನ್ನೂ ತಿಳಿಸುವ ಭಯಂಕರವಾದ ಸ್ವಪ್ನವನ್ನು ನಾನೀಗ ಕಂಡೆ ಎನ್ನುತ್ತಾಳೆ. ರಾಕ್ಷಸಿಯರು ಭಯಪಟ್ಟು, ತ್ರಿಜಟೆಯನ್ನು ಕುರಿತು ರಾತ್ರಿ ಕಂಡ ಸ್ವಪ್ನದ ವೃತ್ತಾಂತವನ್ನು ಕೇಳುತ್ತಾರೆ.

ರಾಮನು ಲಕ್ಷ್ಮಣನೊಂದಿಗೆ ಇಲ್ಲಿಗೆ ಬಂದು ಸೀತೆಯನ್ನು ಕರೆದುಕೊಂಡು ದಿವ್ಯವಾದ ಪುಷ್ಪಕ ವಿಮಾನವನ್ನೇರಿ ಉತ್ತರ ದಿಕ್ಕಿಗೆ ಪ್ರಯಾಣ ಮಾಡುತ್ತಾನೆ. ರಾವಣನು ನೆಲದಲ್ಲಿ ಎಣ್ಣೆ ಹಚ್ಚಿಕೊಂಡು ಕೆಂಪು ವಸ್ತ್ರಧರಿಸಿ, ಕುಡಿದು ಮತ್ತನಾಗಿ ಕರವೀರ ಪುಷ್ಪಧರಿಸುತ್ತಾನೆ. ಪುಷ್ಪಕ ವಿಮಾನದಿಂದ ನೆಲಕ್ಕೆ ಉರುಳಿ ತಲೆ ಬೋಳಿಸಿಕೊಂಡು ಕಪ್ಪು ವಸ್ತ್ರವನ್ನುಟ್ಟ ಒಬ್ಬ ಹೆಂಗಸಿನಿಂದೆ ಎಳೆಯಲ್ಪಡುತ್ತಿದ್ದುದನ್ನು ನೋಡಿದೆ. ಕತ್ತೆಯನ್ನು ಹೂಡಿದ್ದ ರಥದಲ್ಲಿ ಕುಳಿತು ದಕ್ಷಿಣದಿಕ್ಕಿಗೆ ಪ್ರಯಾಣ ಮಾಡುತ್ತಾ ಒಂದು ಕೆಸರಿನ ಹೊಂಡದಲ್ಲಿ ಬೀಳುತ್ತಾನೆ. ರಾವಣನ ತಮ್ಮನಾದ ಕುಂಭಕರ್ಣನು ಇದೇತೆರನಾಗಿ ದಕ್ಷಿಣಕ್ಕೆ ಪ್ರಯಾಣ ಮಾಡುತ್ತಾನೆ. ಜನಕ ಪುತ್ರಿಯನ್ನು ಶರಣು ಹೋಗುವುದರಿಂದ ಆಕೆ ಪ್ರಸನ್ನಳಾಗುವಳು. ಅವಳ ಕ್ಷಮೆ ಬೇಡೋಣ. ಅವಳಿಗೆ ಬಂದ ದುಃಖವು ವಿಧಿದತ್ತವೆಂದು ತೋರುತ್ತದೆ. ಆದರೆ ರಾಕ್ಷಸರಾಜನ ನಾಶವನ್ನು ರಾಮನ ವಿಜಯವನ್ನು ಕಾಣುತ್ತಿದ್ದೇನೆ ಎನ್ನುತ್ತಾಳೆ.

ಸೀತೆಯು ತ್ರಿಜಟೆಯ ಮಾತುಗಳನ್ನು ಕೇಳಿ ಹರ್ಷಿತಳಾಗುತ್ತಾಳೆ. ಅದು ನಿಜವಾಗುವುದಾದರೆ ನಾನು ನಿಮಗೆ ಶರಣ್ಯಳು ಎಂದು ಹೇಳುತ್ತಾಳೆ.

ಹನುಮಂತನು ವಿಶ್ರಾಂತಿ ಪಡೆಯುತ್ತಾ ಸೀತೆಯ ಮಾತುಗಳನ್ನೂ, ತ್ರಿಜಟೆ ಹೇಳಿದುದನ್ನೂ ಕೇಳಿಸಿಕೊಳ್ಳುತ್ತಾನೆ. ನಾನು ರಹಸ್ಯ ವಿಧಾನದಿಂದ ಶತ್ರುವಿನ ಶಕ್ತಿಯನ್ನು ತಿಳಿದುಕೊಂಡೆ. ರಾವಣನ ಪ್ರಭಾವವನ್ನು ತಿಳಿದು ಕೊಂಡೆನು. ಈಗ ರಾಮನ ಭಾರ್ಯೆಯನ್ನು ಸಮಾಧಾನ ಪಡಿಸುವೆನು. ಆದರೆ ಸಮಾಧಾನ ಪಡಿಸುವುದು ಹೇಗೆ? ಈ ರಾತ್ರಿ ಕಳೆಯುವುದರೊಳಗೆ ಸಮಾಧಾನ ಪಡಿಸದಿದ್ದರೆ ಆಕೆ ಪ್ರಾಣ ತೊರೆಯಲು ಸಿದ್ಧಳಾಗಿದ್ದಾಳೆ ಎಂದು ಯೋಚಿಸುತ್ತಾನೆ.

ನಾನೀಗ ಮನುಷ್ಯರು ಮಾತಾಡುವ ಸಂಸ್ಕೃತ ಭಾಷೆಯಲ್ಲಿ ಮಾತಾಡುವೆನು. ಶುದ್ಧ ಸಂಸ್ಕೃತದಲ್ಲಿ ಮಾತಾಡಿದರೆ ವೇಷ ಮರೆ ಮಾಚಿದ ರಾವಣನೆಂದು ತಿಳಿದುಕೊಳ್ಳುವ ಸಾಧ್ಯತೆ ಇದೆ ಎಂದು ಯೋಚಿಸಿ ಮರದ ಕೊಂಬೆಗಳ ಮಧ್ಯದಲ್ಲಿ ಕುಳಿತು ಮಧುರವಾದ ಮಾತುಗಳಿಂದ ರಾಮನ ವಿಚಾರವನ್ನು ಸವಿಸ್ತಾರವಾಗಿ ಹೇಳುತ್ತಾನೆ. ನಂತರ ವಾಲಿಯನ್ನು ಕೊಂದು ಸುಗ್ರೀವನ ಆಜ್ಞೆಯಂತೆ ಸೀತೆಯನ್ನು ಹುಡುಕುತ್ತಾ ಸಮುದ್ರವನ್ನು ಹಾರಿಬಂದ ವಿಚಾರವನ್ನು ಹೇಳುತ್ತಾನೆ.

ಇಲ್ಲಿಗೆ ಬಂದು ರಾಮನು ಹೇಳಿದ ಗುರುತುಗಳಿಂದ ಕೂಡಿದ ಸೀತೆಯನ್ನು ಕಂಡೆ ಎಂದು ಹೇಳುತ್ತಾನೆ.

ಹನುಮಂತನು ಹೇಳಿದ ಎಲ್ಲಾ ವಿಚಾರವನ್ನು ಕೇಳಿಸಿಕೊಂಡು ಸೀತೆಯು ಆಶ್ಚರ್ಯದಿಂದ ದಿಕ್ಕು ದಿಕ್ಕುಗಳನ್ನು ನೋಡುತ್ತಾಳೆ. ಮುಖವನ್ನು ಮೇಲೆತ್ತಿ ಶಿಂಶುಪಾ ವೃಕ್ಷವನ್ನು ನೋಡುತ್ತಿದ್ದಾಗ ಉದಯ ಸೂರ್ಯನಂತಿರುವ ವಾರು ಕುಮಾರನನ್ನು ಕಾಣುತ್ತಾಳೆ.

ಸೀತೆಯು ದುಃಖದಿಂದ ಆಳುತ್ತಿರುವುದನ್ನು ಕಂಡು ಮರುತ ಸುತನು ಮರದಿಂದ ಕೆಳಗಿಳಿದು. ಬಂದು ಕೈ ಜೋಡಿಸಿ ಆಕೆಯ ಮುಂದೆ ನಿಲ್ಲುತ್ತಾನೆ. ತಾಯಿ ನೀನು ಯಾರು? ನಿನ್ನ ರೂಪವನ್ನು ತಪಸ್ಸಿನಿಂದ ಕೂಡಿದ ವೇಷವನ್ನು ನೋಡಿದರೆ ನೀನೇ ರಾಮನ ಅರಸಿ ಎಂದು ತಿಳಿಯುತ್ತೇನೆ ಎಂದು ಭಿನ್ನವಿಸಿಕೊಳ್ಳುತ್ತಾನೆ.

ಸೀತೆ ತನ್ನ ವಿಚಾರವನ್ನು ಹೇಳಿಕೊಳ್ಳುತ್ತಾನೆ. ಇನ್ನೆರಡು ತಿಂಗಳ ತನಕ ನನಗೆ ಗಡವು ಕೊಟ್ಟಿದ್ದಾನೆ. ಅದರೊಳಗೆ ರಾಮನು ನನ್ನನ್ನು ಕರೆದುಕೊಂಡು ಹೋಗದಿರುವಲ್ಲಿ ನಾನು ಪ್ರಾಣ ಬಿಡುವೆನು ಎನ್ನುತ್ತಾಳೆ.

ದೇವಿ ರಾಮನ ಆಜ್ಞೆಯ ಪ್ರಕಾರ ದೂತನಾಗಿ ನಾನು ಬಂದಿರುವೆನು. ರಾಮ ಲಕ್ಷ್ಮಣರು ತಮ್ಮ ಕ್ಷೇಮವನ್ನು ನಿನಗೆ ತಿಳಿಸುವಂತೆ ಹೇಳಿರುತ್ತಾರೆ ಎಂದು ಹನುಮಂತನು ಸೀತೆಯ ಹತ್ತಿರಕ್ಕೆ ಬರಲಾರಂಭಿಸುತ್ತಾನೆ. ಆತನು ವೇಷಮರೆಸಿಕೊಂಡು ಬಂದ ರಾವಣನಿರಬೇಕೆಂದು ಶಂಕಿಸಿ ಅಶೋಕ ವೃಕ್ಷದ ಬುಡದಲ್ಲಿ ನೆಲದ ಮೇಲೆ ಕುಳಿತುಕೊಳ್ಳುತ್ತಳೆ. ಹನುಮಂತನು ಭೀತಳಾಗಿರುವ ಸೀತೆಯನ್ನು ಕಂಡು ಪುನಃ ಆಕೆಗೆ ನಮಸ್ಕರಿಸುವನು. ಆದರೆ ಆಕೆ ಭಯದಿಂದ ಆತನನ್ನು ತಲೆಯತ್ತಿ ನೋಡುವುದಿಲ್ಲ.

ರಾಮನ ವೃತ್ತಾಂತವನ್ನು ಕೇಳಿದ ಸೀತೆ ರಾಮನೊಡನೆ ನಿನ್ನ ಸಂಪರ್ಕ ಹೇಗೆ ಉಂಟಾಯಿತು ಎಂದು ಕೇಳುತ್ತಾಳೆ. ಹನುಮಂತನು ರಾಮನನ್ನು ಇದ್ದುದಿದ್ದಂತೆಯೇ ವರ್ಣಿಸಿ ರಾಮ ಸುಗ್ರೀವರ ಮಿಲನವನ್ನು ತಿಳಿಸುತ್ತಾನೆ. ನಾನು ನಿನ್ನನ್ನು ಅರಸುವುದಕ್ಕಾಗಿ ಬಂದ ರಾಮನ ದೂತ ಹನುಮಂತನೆಂದು ಹೇಳುತ್ತಾನೆ. ಸ್ವಲ್ಪಕಾಲದಲ್ಲಿಯೇ ರಾಮನು ನಿನ್ನನ್ನು ಇಲ್ಲಿಂದ ಕರೆದುಕೊಂಡು ಹೋಗುತ್ತಾನೆ ಎಂದು ಸಮಾಧಾನ ಪಡಿಸುತ್ತಾನೆ.

ಹನುಮಂತನ ಮಾತುಗಳಿಂದಲೂ ಹೇಳಿದ ಗುರುತುಗಳಿಂದಲೂ ಆತ ರಾಮನ ದೂತನೆಂದು ನಿಶ್ಚಯಿಸುತ್ತಾಳೆ. ಸೀತೆಗೆ ನಂಬಿಕೆಯನ್ನುಂಟು ಮಾಡುವ ಸಲುವಾಗಿ ರಾಮನ ಹೆಸರನ್ನು ಕೆತ್ತಿರುವ ಉಂಗುರವನ್ನು ಕೊಡುತ್ತಾನೆ. ನಿನ್ನ ನಂಬಿಕೆಗಾಗಿ ಇದನ್ನು ನನ್ನೊಡನೆ ಕೊಟ್ಟು ಕಳುಹಿಸಿದ್ದಾನೆ ಎಂದು ಭಿನ್ನವಿಸಿಕೊಳ್ಳುತ್ತಾನೆ. ಅದನ್ನು ಕಂಡು ಸೀತೆಗೆ ರಾಮನನ್ನು ಕಂಡಷ್ಟೆ ಸಂತೋಷ ಉಂಟಾಗುತ್ತದೆ.

ರಾಮನು ಕ್ಷಿಪ್ರದಲ್ಲಿಯೇ ಕಪಿ ಕರಡಿಗಳ ಸೈನ್ಯದೊಂದಿಗೆ ಬಂದು ನಿನ್ನನ್ನು ಕರೆದುಕೊಂಡು ಹೋಗುವನು ಅಥವಾ ನಾನು ನಿನ್ನನ್ನು ಈಗಲೇ ಈ ದುಃಖದಿಂದ ಪಾರುಮಾಡುವೆನು. ನಿರ್ದೋಷಿಯೇ ನನ್ನ ಬೆನ್ನಮೇಲೇರಿಕೋ. ನಿನ್ನನ್ನು ಎತ್ತಿಕೊಂಡೇ ಸಮುದ್ರವನ್ನು ದಾಟಿ ಪ್ರಸ್ರವಣ ಗಿರಿಯಲ್ಲಿರುವ ರಾಮನಿಗೆ ನಿನ್ನನ್ನು ಒಪ್ಪಿಸುತ್ತೇನೆ ಎನ್ನುತ್ತಾನೆ. ಸೀತೆಗೆ ನಂಬಿಕೆಯನ್ನುಂಟು ಮಾಡಲು ಮರದ ಬುಡದಿಂದ ಮೈದಾನಕ್ಕೆ ಬಂದು ಬೆಳೆಯುತ್ತಾನೆ. ಕೋಟೆ ಕೊತ್ತಲ ತೋರಣಗಳಿಂದ ಕೂಡಿದ ಈ ಲಂಕೆಯನ್ನು ಹೊತ್ತುಕೊಂಡು ಹೋಗಲು ನನಗೆ ಶಕ್ತಿ ಇರುವುದು ಎಂದು ಹೇಳುತ್ತಾನೆ.

ಪತಿಭಕ್ತಿಯನ್ನು ಗೌರವಿಸುತ್ತಾ ರಾಮನ ಹೊರತು ಬೇರೊಬ್ಬ ಗಂಡಸಿನ ಶರೀರವನ್ನು ಮುಟ್ಟಲೊಲ್ಲೆನು. ರಾವಣನ ಶರೀರ ಸ್ಪರ್ಶವು ಬಲಾತ್ಕಾರದಿಂದಯಿತು. ರಕ್ಷಕನಿಲ್ಲದ ಅಸಮರ್ಥಳಾದ ಹೆಂಗಸು ನಾನೇನು ಮಾಡಬಹುದಿತ್ತು? ರಾಮನು ಇಲ್ಲಿಗೆ ಬಂದು ರಾವಣನನ್ನೇ ಬಂಧು ಸಮೇತ ಕೊಂದು ನನ್ನನ್ನು ಇಲ್ಲಿಂದ ಕರೆದುಕೊಂಡು ಹೋಗುವುದೇ ಅವನಿಗೆ ಯುಕ್ತವಾದದ್ದು ಎನ್ನುತ್ತಾಳೆ.

ಹಿಂದೆ ನಡೆದ ಕಾಕಾಸುರನ ವೃತ್ತಾಂತವನ್ನು ಸೀತೆ ಹನುಮಂತನಿಗೆ ಹೇಳಿ ತನ್ನ ಸೀರೆಯಲ್ಲಿ ಕಡ್ಡಿದ್ದ ದಿವ್ಯವೂ ಮಂಗಳಕರವೂ ಆದ ಚೂಡಾಮಣಿ ಎಂಬ ಆಭರಣವನ್ನು ತನ್ನ ಗುರುತಾಗಿ ರಾಮನಿಗೆ ಕೊಡಲು ಹನುಮಂತನ ಕೈಲಿಡುತ್ತಾಳೆ. ಅದನ್ನು ಸ್ವೀಕರಿಸಿ ತ್ವರಿತವಾಗಿ ರಾಮನು ಬಂದು ನಿನ್ನನ್ನು ಕರೆದುಕೊಂಡು ಹೋಗುತ್ತಾನೆಂದು ಆಶ್ವಾಸನೆ ಕೊಟ್ಟು ಆಕೆಗೆ ನಮಸ್ಕರಿಸಿ ಹನುಮಂತನು ಹಿಂತಿರುಗಿ ಪ್ರಯಾಣ ಮಾಡಲು ಸಂಕಲ್ಪಿಸುತ್ತಾನೆ.

ಸೀತೆಯನ್ನು ಕಾಣುವ ತನ್ನ ಕಾರ್ಯಸಾಧ್ಯವಾದುದಕ್ಕಾಗಿ ಪರಮಾನಂದ ಹೊಂದಿ ಉಳಿದ ಕಾರ್ಯಕ್ಕಾಗಿ ಹೊರಡುತ್ತಾನೆ.

ಕಷ್ಟದಲ್ಲಿರುವಾಗ ಶುಭಶಕುನಗಳಾದರೆ ತಮ್ಮ ಕಷ್ಟಗಳು ದೂರವಾಗುತ್ತವೆಂಬ ನಂಬಿಕೆ ಎಲ್ಲರಲ್ಲೂ ಇರುತ್ತದೆ. ನಮಗೆ ಪರಿಚಯವಿಲ್ಲದವರ ಸವಿನುಡಿಗಳಿಗೆ ಬಲಿಯಾಗಿ ಮನೆ ಮಾರು ಕಳೆದುಕೊಂಡ ಬಗ್ಗೆ ಕೇಳುತ್ತಿದ್ದೇವೆ. ನಕಲಿ ಚಿನ್ನ ಖೋಟಾ ನೋಟುಗಳ ಜಾಲಗಳಿಗೆ ಬಲಿಯಾಗುವವರ ಬಗ್ಗೆಯೂ ಪತ್ರಿಕೆಗಳಲ್ಲಿ ಓದುತ್ತೇವೆ. ರಾಮನ ಜನ್ಮವೃತ್ತಾಂತ ಲಕ್ಷಣಗಳನ್ನು ವಾನರು ಹೇಳಿದರೂ ಸೀತೆ ಅದನ್ನು ನಂಬುವುದಿಲ್ಲ. ಇದು ರಾಕ್ಷಸನ ಮಾಯೆ ಇರಬಹುದೆಂದು ಸಂಶಯಪಡುತ್ತಾಳೆ. ಜಗನ್ಮಾತೆಯಾಗಿ ರಾಮನ ಕಾರ್ಯಕ್ಕೆ ಸಹಕರಿಸಲು ಬಂದವಳಿಗೆ ನಿಜ ಯಾವುದು? ಮಾಯೆ ಯಾವುದು? ಎಂಬುದು ತಿಳಿದಿದ್ದರೂ ಮನುಷ್ಯರು ಹೊಂದುವ ದೌರ್ಬಲ್ಯದ ಬಗ್ಗೆ ವಿಶ್ಲೇಷಿಸಲಾಗಿದೆ. ರಾಮನ ಮುದ್ರೆಯುಂಗುರ ಮಾತ್ರ ಆಕೆಯ ಅನುಮಾನವನ್ನು ಕೊನೆಗಾಣಿಸುತ್ತದೆ. ಹಾಗೆಯೇ ಬಲವತ್ತರವಾದ ಗುರುತುಗಳಿಲ್ಲದೇ ಅಪರಿಚಿತರೊಡನೆ ವ್ಯವಹರಿಸುವುದು ಸೂಕ್ತವಲ್ಲ ಎಂಬುದು ಇದರ ಆಶಯ. ಹನುಮಂತನು ಬೆನ್ನಮೇಲೆ ಹತ್ತಿಸಿಕೊಂಡು ಹೋಗುವೆನೆಂದಾಗಲೂ ಅದಕ್ಕೊಪ್ಪುವುದಿಲ್ಲ. ಯಾವ ಕೆಲಸವನ್ನು ಯಾರು ಮಾಡಬೇಕೋ ಅವರೇ ಮಾಡಬೇಕು. ಮತ್ತು ಸ್ತ್ರೀಯಾದವಳು ತನ್ನತನವನ್ನು ಉಳಿಸಿಕೊಳ್ಳಬೇಕು ಎಂಬುದನ್ನು ಸೂಚ್ಯವಾಗಿ ವಾಲ್ಮೀಕಿ ಋಷಿಗಳು ಈ ಪ್ರಕರಣದಿಂದ ನಮಗೆ ಮನವರಿಕೆ ಮಾಡಿದ್ದಾರೆ.

---

ಸಂಪ್ರದಾಯ

ಲೇ ॥ ಜಿ.ವಿ. ಶರ್ಮಾಪಂಡಿತ್

# ನಮಸ್ಕಾರವನ್ನು ಯಾರಿಗಾದರೂ ಮಾಡಬಹುದೇ ?

ವಯೋಹಿರಿಯರಿಗೆ, ಜ್ಞಾನಹಿರಿಯರಿಗೆ, ವಿದ್ಯಾಹಿರಿಯರಿಗೆ, ನಮಸ್ಕರಿಸುವುದರಿಂದ ಆಯುಷ್ಯ ವೃದ್ಧಿಯಾಗುತ್ತದೆ. ಇದಕ್ಕೆ ಸ್ತ್ರೀಪುರುಷ ವ್ಯತ್ಯಾಸವಿಲ್ಲ. ಸ್ತ್ರೀಯರಿಗೂ ನಮಸ್ಕರಿಸಬಹುದು. ಸ್ತ್ರೀಯರಿಗೆ ನಮಸ್ಕರಿಸಿದರೇ ಅದು ಪಾರ್ವತೀ ದೇವಿಗೆ ಸಲ್ಲುತ್ತದೆಂದು ದೇವೀಪುರಾಣ ತಿಳಿಸುತ್ತಿದೆ.

ಗುರುಪತ್ನಿಗೂ, ಬ್ರಾಹ್ಮಣ ಪತ್ನಿಗೂ, ಜಂಗಮ ಪತ್ನಿಗೂ, ಹತ್ತಿರ ನಿಂತು ನಮಸ್ಕರಿಸಬಾರದು. ದೂರ ನಿಂತು ನಮಸ್ಕರಿಸಬೇಕು.

ಕಿರಿಯರಿಗೆ ಹಿರಿಯರು ಮೊದಲಿಗೆ ನಮಸ್ಕರಿಸಬಾರದು. ಹೀಗೆ ಮಾಡುವುದರಿಂದ ಕಿರಿಯರಿಗೆ ಆಯುಕ್ಷೀಣವಾಗುತ್ತದೆಂದು. ಹೇಳುತ್ತಾರೆ. ಆದರೇ ಕಿರಿಯವನೇ ಆದರೂ ವಿದ್ಯಾಪಂಡಿತನಾದಲ್ಲಿ, ಅಥವಾ ಅಧಿಕಾರಿಯಾಗಿದ್ದಲ್ಲಿ ನಮಸ್ಕರಿಸಬೇಕು.

ಮಠಾಧಿಪತಿಗಳು, ಯತಿಗಳು, ವಿರಕ್ತರು, ಪುರೋಹಿತರು, ಗುರುಸ್ಥಾನದಲ್ಲಿರುವವರು ಎಷ್ಟು ಚಿಕ್ಕವರಾದರೂ ನಮಸ್ಕರಿಸಲೇ ಬೇಕು. ಬಂಧುಗಳು, ಪರಿಚಯಸ್ಥರು, ಆಪ್ತರು, ಇಷ್ಟರು, ಕುಲಬಾಂಧವರು, ಮುಂತಾದವರಲ್ಲಿ ಕಿರಿಯರಿಗೆ ಹಿರಿಯರು ನಮಸ್ಕರಿಸಬಾರದು.

**ನಮಸ್ಕಾರವನ್ನು ಹೇಗೆ ಮಾಡಬೇಕು?**



ಭಾರತದ ಪ್ರಥಮ ಮೆಟ್ರೋ ರೇಲ್ವೆ – ಕಲ್ಕತ್ತಾ ಮೆಟ್ರೋ ರೇಲ್ವೆ

ಒಂದೇ ಕೈಯಿಂದ ನಮಸ್ಕರಿಸುವುದು ಹಿಂದೂ ಆಚಾರವಲ್ಲ. ಎರಡು ಕೈಗಳಿಂದಲೇ ನಮಸ್ಕರಿಸಬೇಕು. ಒಂದೇ ಕೈಯನ್ನೆತ್ತಿ **"ಹಲೋ"** ಎಂದು ಮಾತನಾಡಿಸುವುದು ಪಾಶ್ಚಿಮಾತ್ಯರ ಸಂಪ್ರದಾಯ. ತಲೆಯನ್ನು ತಗ್ಗಿಸಿ ಒಂದೇ ಕೈಯಿಂದ ಶಿರೋನಮಸ್ಕಾರ ಮಾಡುವುದು ನಮಸ್ಕರಿಸುವುದು ಹಿಂದೂ ಸಂಪ್ರದಾಯ.

**ನಮಸ್ಕಾರವನ್ನು ಯಾಕೆ ಮಾಡಬೇಕು?**

"ಈಶ್ವರಃ ಸರ್ವಭೂತಾನಿ" ಎನ್ನುತ್ತಿದೆ ವೇದ. ಪ್ರತಿಪ್ರಾಣಿಯಲ್ಲಿಯೂ ದೇವರಿದ್ದಾನೆ. ಆದರಿಂದ ನಾವು ಎಲ್ಲರಿಗೂ ನಮಸ್ಕರಿಸುತ್ತೇವೆ. ನಮಸ್ಕಾರವೆಂಬುವುದು ದೇಹಕ್ಕೆ ಅಲ್ಲ. ದೇಹದಲ್ಲಿರುವ ದೇವದೇವನಿಗೆ!. ಯಾರಾದರೂ ನಮಗೆ ನಮಸ್ಕರಿಸಿದಾಗ "ಪರಬ್ರಹ್ಮಾರ್ಪಣ ಮಸ್ತು" ಎಂದು ಹೇಳಿ ನಮಸ್ಕಾರವನ್ನು ಸ್ವೀಕರಿಸಬೇಕು. ಯಾರೇ ನಮಸ್ಕಾರವನ್ನು ಮಾಡಲೀ ನಾವು ಪ್ರತಿಯಾಗಿ ನಮಸ್ಕರಿಸಬೇಕು. **ಪ್ರತಿ ನಮಸ್ಕಾರ** ಮಾಡದಿದ್ದರೇ ನಮಗೇ ದೋಷವಾಗುತ್ತದೆ.'

**ನಮ್ಮ ಪಾಠಕರಿಗೊಂದು ವಿನಂತಿ !**

**ನಮ್ಮ ಮುದ್ದು ಮಕ್ಕಳಿಗೆ ಪ್ರಪ್ರಥಮವಾಗಿ 'ನಮಸ್ಕಾರ' ಮಾಡುವುದನ್ನು ಕಲಿಸಬೇಕು. "ಟಾಟಾ' ಮಾಡುವುದನ್ನು ನಾವು ಕಲಿಸದಿದ್ದರೂ ಮುಂದೆ ಅವರೇ ಕಲಿಸುತ್ತಾರೆ.**
**ನಮಸ್ಕಾರ ಎಂಬ ಶಬ್ದದಲ್ಲಿ ಮಹಾಶಕ್ತಿ ಇದೆ.**
**ಎಂಥವರನ್ನಾದರೂ ನಮ್ಮವರನ್ನಾಗಿ ಮಾಡುತ್ತದೆ.**

# ಪರಮೇಶ್ವರನ 25 ಲೀಲೆಗಳು

**ಕಂಕಾಳಧರ ಲೀಲೆಯು**

ಹಿಂದಕ್ಕೆ ತಮಾಸುರನೆಂಬ ರಾಕ್ಷಸನಿದ್ದನು. ಅವನು ಬ್ರಹ್ಮದೇವರಿಗೆ ತಿಳಿಯದಂತೆ ನಾಲ್ಕು ವೇದಗಳನ್ನು ಕದ್ದುಕೊಂಡು ಮಹಾಸಾಗರವನ್ನು ಹೊಕ್ಕನು. ಆದರಿಂದ ಜಗತ್ತಿನ ವಿಧಿವಿಧಾನಗಳೆಲ್ಲವೂ ನಿಂತು ಹೋದವು ದೇವತೆಗಳಿಗೆ ಕಷ್ಟವಾಯಿತು.ವಿಷ್ಣುವು ಇದನ್ನು ನೋಡಿ ದೇವತೆಗಳ ಕಷ್ಟ ಪರಿಹಾರಕ್ಕಾಗಿ ತಾನು ಮತ್ಸ್ಯಾವತಾರವನ್ನು ಮಾಡಿ ಸಾಗರದೊಳಗೆ ಹೊಕ್ಕು ತಮಾಸುರನನ್ನು ಕೊಂದು ನಾಲ್ಕು ವೇದಗಳನ್ನು ತಂದು ಕೊಡಬೇಕೆಂದು ಮಾಡಿ ಅದರಂತೆ ಮತ್ಸ್ಯಾವತಾರ ತಾಳಿ ತಮಾಸುರನನ್ನು ಕೊಂದು ನಾಲ್ಕು ವೇದಗಳನ್ನು ತಂದು ಬ್ರಹ್ಮನಿಗೆ ತಂದು ಕೊಟ್ಟನು ಆದರೆ ಮತ್ಸ್ಯನಿಗೆ ಬಹಳ ಗರ್ವ ಬಂದು ಸಾಗರದಲ್ಲಿ ಜಲಪ್ರಳಯವನ್ನೇ ಮಾಡತೊಡಗಿದನು.

ಅದನ್ನು ಕಂಡು ಶಿವನು ಮತ್ಸ್ಯವನ್ನು ಸಂಹರಿಸಿದನು. ಆದರೆ ಆ ಮತ್ಸ್ಯವು ತನ್ನ ಶರೀರವನ್ನು ಉದ್ಧಾರ ಮಾಡಬೇಕೆಂದು ಬೇಡಿಕೊಂಡಿತು. ಆ ಕಾರಣದಿಂದ ಶಿವನು ಮತ್ಸ್ಯದ ಬೆನ್ನೆಲುವನ್ನು ಮುರಿದು ತನ್ನ ಕೈಯಲ್ಲಿ ಧರಿಸಿಕೊಂಡನು ಇದೇ ಕಂಕಾಳಧರ ಲೀಲೆಯು.

ಇದಲ್ಲದೆ ಮತ್ತೊಂದು ಬಗೆಯು ಹೇಗೆಂದರೆ– ವಿಷ್ಣು ವಾಮನಾವ ತಾರದಲ್ಲಿ ತ್ರಿವಿಕ್ರಮನಾಗಿ ಮೂರು ಪಾದಗಳುಳ್ಳವನಾಗಿ ಬಲಿಚಕ್ರವರ್ತಿಯಲ್ಲಿಗೆ ಬಂದು ಮೂರು ಪಾದ ಬೂಮಿಯನ್ನು ದಾನ ಬೇಡಲು ಇದು ಯಾವ ದೊಡ್ಡ ವಿಷಯವೆಂದು ಬಲಿಯು ಕೊಟ್ಟನೆಂದು ತಿಲಾಂಜಲಿಯನ್ನು ಬಿಟ್ಟನು. ಆಗ ತ್ರಿವಿಕ್ರಮನು ತನ್ನದೊಂದು ಪಾದವನ್ನು ಪ್ರಥ್ವಿಯಷ್ಟು ಅಗಲ ಮಾಡಿ ತೋರಿ, ಮತ್ತೊಂದು ಪಾದವನ್ನು ಆಕಾಶಕ್ಕೆ ಏರಿಸಲು ಅದು ಸ್ವರ್ಗಲೋಕವನ್ನೆಲ್ಲ ವ್ಯಾಪಿಸಿತು. ಆಮೇಲೆ ಮೂರನೇ ಪಾದಕ್ಕೆ ಭೂಮಿಯನ್ನು ಕೊಡು ಎಂದು ಕೇಳಲು– ನನ್ನ ದೇಹವೇ ಪ್ರಥ್ವಿಯಾಗಿದೆ. ತೆಗೆದುಕೊಳ್ಳು ಎಂಬ ಬಲಿಚಕ್ರವರ್ತಿಯು ಅಡ್ಡ ಬೀಳಲು ವಿಷ್ಣು ತ್ರಿವಿಕ್ರಮನು ತನ್ನ ಪಾದವನ್ನು ಅವನ ಬೆನ್ನ ಮೇಲಿಟ್ಟು ತುಳಿದು ಪಾತಾಳಕ್ಕೆ ಕಳುಹಿಸಿದನು. ಈ ತ್ರಿವಿಕ್ರಮನ ಪ್ರತಾಪಕ್ಕೆ ಯಾರು ಎದುರಿಲ್ಲದಂತಾಯಿತು. ಆಕಾಶಕ್ಕೆ ನೆಗೆದ ಅವನ ಪಾದವು ಸ್ವರ್ಗಲೋಕವನ್ನು ತುಂಬಿ ಸತ್ಯಲೋಕಕ್ಕೆ ಚಾಚಿ ಬ್ರಹ್ಮದೇವರಿಗೆ ತೊಂದರೆ ಕೊಡಹತ್ತಿತು.

ಆಗ ಬ್ರಹ್ಮನು ತನ್ನ ಕಮುಂಡಲದೊಳಗಿನ ಉದಕವನ್ನು ಅದಕ್ಕೆ ಸಂಪ್ರೋಕ್ಷಿಸಿದನು. ಆದರೂ ಅದರ ಕಾಟ ಕಡಿಮೆ ಕಡಿಮೆಯಾಗಲಿಲ್ಲ. ಲೋಕಗಳನ್ನೇ ಪ್ರಳಯ ಮಾಡಹತ್ತಿತು. ಹೀಗೆ ತ್ರಿವಿಕ್ರಮನ ಮೂರು ಪಾದಗಳು ಮೂರು ಲೋಕಗಳಲ್ಲಿ ಪೀಡಕರವಾದವು. ಅದನ್ನು ಪರಮೇಶ್ವರನು ನೋಡಿದನು. ಲೋಕ ಕಲ್ಯಾಣಕ್ಕಾಗಿ ತ್ರಿವಿಕ್ರಮನನ್ನು ಮುರಿದು ಕೊಲ್ಲುವಾಗ್ಗೆ ತ್ರಿವಿಕ್ರಮನು ತನ್ನ ಶರೀರವನ್ನು ಪವಿತ್ರವನ್ನಾಗಿ ಮಾಡಬೇಕೆಂದು ಬೇಡಿಕೊಂಡನು. ಅದಕ್ಕಾಗಿ ಪರಮೇಶ್ವರನು ಅವನ ಬೆನ್ನಿನ ಪೆಟ್ಟಿಲವನ್ನು ಮುರಿದು ತನ್ನ ಕೈಯಲ್ಲಿ ಧರಿಸಿಕೊಂಡನು ಇದನ್ನು ಪರಮೇಶ್ವರನ ಕಂಕಾಳಧರ ಲೀಲೆಯೆಂದು ಹೇಳುವರು. ಹೀಗೆ ಪರಮೇಶ್ವರನ 25ನೇಯ ಪಾದ ಕಂಕಾಳಧರ ಲೀಲೆಯು ಮುಗಿದುದು.



ಭಾರತದ ಪ್ರಥಮ ವೇಗದೂತ ರೇಲ್ವೆ – ಶತಾಬ್ಧಿ ಎಕ್ಸಪ್ರೆಸ್

ಮಹಾಕ್ಷತ್ರಿಯ ಲೇ॥ ದೇವುಡು

# ಬೀಳುವುದು ಏಳುವುದಕ್ಕೆ

ದೇವಸಭೆಯು ದೇವಾಚಾರ್ಯನ ಅಧ್ಯಕ್ಷತೆಯಲ್ಲಿ ಸೇರಿದೆ. ಪಿತ್ರಗಣಗಳೂ ಋಷಿಗಣಗಳೂ ವಿಶೇಷಾಹ್ವಾನದ ಮೇಲೆ ಬಂದಿದ್ದಾರೆ. ಅಗ್ನಿ ವಾಯುಗಳು ಮಾತ್ರ ಕಾರಣಾಂತರದಿಂದ ತಾವು ಬರುವುದಕ್ಕಾಗುವುದಿಲ್ಲವೆಂದೂ, ಸಭೆಯ ನಿರ್ಣಯಗಳಿಗೆ ತಮ್ಮ ಒಪ್ಪಿಗೆಯುಂಟೆಂದೂ ಭಿನ್ನವಿಸಿಕೊಂಡಿದ್ದಾರೆ. ಸಭೆಯು ಸಕಾಲದಲ್ಲಿ ಆರಂಭವಾಯಿತು.

ಅಧ್ಯಕ್ಷರು ಎದ್ದು ಸಭೆಯನ್ನು ಸಂಬೋಧಿಸಿ, "ಮಾನ್ಯರೆ, ಇಂದು ಈ ಸಭೆಯು ಸೇರಿರುವ ಉದ್ದೇಶವು ತಮಗೆಲ್ಲ ತಿಳೀದೆ ಇದೆ. ಈಗಿನ ದೇವೇಂದ್ರನು ತನ್ನ ಅಧಿಕಾರ ಪೂರ್ಣವಾಗಿದೆಯೇ ಎಂಬ ಪ್ರಶ್ನವನ್ನು ಎತ್ತಿದ್ದಾನೆ. ಆತನು ನನ್ನನ್ನು ಕೇಳಿದಾಗ ನಾನು ಶಚೀಪತಿತ್ವವಿಲ್ಲದ ಇಂದ್ರತ್ವವು ಪೂರ್ಣವಾಗುವುದಿಲ್ಲ ಎಂದು ಹೇಳಬೇಕಾಯಿತು. ಹೇಳಿದೆ. ಈಗ ಆ ಇಂದ್ರತ್ವವು ಪೂರ್ಣವಾಗಬೆಕಾದರೆ ಏನು ಮಾಡಬೇಕೋ ಅದನ್ನು ಗೊತ್ತುಮಾಡುವುದು ಈ ಸಭೆಯ ಕೆಲಸ ಎಂದು ಹೇಳಿ ಕುಳಿತನು.

ಒಬ್ಬ ದೇವತೆಯು ಎದ್ದು ಹೇಳಿದನು ; "ಇಂದ್ರಪದವಿಗೆ ಬೇಕಾದ ಅಧಿಕಾರವೂ ಗೌರವವೂ ಪೂರ್ಣವಾಗಿದೆಯೆಂದೇ ನನ್ನ ನಂಬಿಕೆ. ಪ್ರತಿದಿನವೂ ದೇವಗಂಗಾದಿಗಳು ಸ್ನಾನಕ್ಕೆ ನೀರನ್ನು ಒದಗಿಸುತ್ತಿವೆ. ಕಲ್ಪವೃಕ್ಷಗಳು ದಿನವೂ ಬೇಕಾದ ದಿವ್ಯವಸ್ತ್ರಗಳನ್ನು ತಂದೊಪ್ಪಿಸುತ್ತಿವೆ. ಚಿಂತಾಮಣಿಯು ಬೇಕಾದ ದಿವ್ಯಾಭರಣಗಳನ್ನು ತಂದು ನೀಡುತ್ತಿದೆ. ಅಪ್ಸರೆಯರು ತಮ್ಮನ್ನೇ ಒಪ್ಪಿಸಿಕೊಂಡು ಆರಾಧಿಸುತ್ತಿದ್ದಾರೆ. ಗಂಧರ್ವಗಣಗಳು ನೃತ್ಯಗೀತಾದಿ ಸೇವೆಯನ್ನು ಒಪ್ಪಿಸುತ್ತಿವೆ. ಪಿತೃಗಣಗಳು ಓಲೈಸುತ್ತಿದ್ದಾರೆ. ಋಷಿಗಣವು ಆಶೀರ್ವಾದ ಮಾಡುತ್ತಿವೆ. ಕರ್ಮಬ್ರಹ್ಮಸ್ವರೂಪನಾದ ಅಗ್ನಿಯೂ ಮಾತರಿಶ್ವನಾದ ವಾಯುವೂ ಸೇವಿಸುತ್ತಿದ್ದಾರೆ. ಇನ್ನೇನಾಗಬೇಕು ! ಮಾನವೇಂದ್ರನು ಮಹೇಂದ್ರನಾದಾಗ ಏನೇನು ಅಧಿಕಾರಗಳನ್ನು ಕೊಡಬಹುದೋ ಅದೆಲ್ಲವನ್ನೂ ಕೊಟ್ಟೇ ಇದೆ. ಅದರಿಂದ ಈ ಪ್ರಶ್ನವೇ ಏಳುವುದಿಲ್ಲ."

ಇನ್ನೊಬ್ಬರು ಹೇಳಿದರು : "ಇಂದರತ್ವವು ಪೂರ್ಣವಾಗಿದೆಯೇ ಎಂದು ಪ್ರಶ್ನೆ ಅದಕ್ಕೆ ನಮ್ಮ ಮಿತ್ರರು ಉತ್ತರ ಕೊಟ್ಟಿದ್ದಾರೆ. ಮಾನವರು ದೇವಸಿಂಹಾಸನವನ್ನು ಏರಿದಾಗ ಏನೇನು ಕೊಡಬಹುದೋ ಅದೆಲ್ಲವನ್ನೂ ಕೊಡಲಾಗಿದೆ. ಶಚಿಪತಿತ್ವದ ಮಾತು. ಅದು ಈ ಸಂದರ್ಭದಲ್ಲಿ ಎತ್ತಬೇಕಾಗಿಲ್ಲ. ಶಚೀದೇವಿಯು ಆ ಇಂದ್ರನ ಪತ್ನಿ ನಾವು ದುಡುಕಿದರೆ ಅನ್ಯ ಪತ್ನಿಯನ್ನು ವಿನಿಯೋಗ ಮಾಡಿದ ಅಕಾರ್ಯವನ್ನು ಮಾಡಿದವರಾದೇವು"

ಋಷಿಗಳು ಒಬ್ಬರು ಎದ್ದು ಹೇಳಿದರು : ಈಗ ನಮ್ಮ ಮುಂದಿರುವ ಪ್ರಶ್ನವಿದು. ಇಂದ್ರತ್ವ ಪೂರ್ಣವಾಗಬೇಕಾದರೆ ಶಚೀಪತಿತ್ವವೂ ಸೇರಬೇಕು. ಇದುವರೆಗೆ ಇನ್ನೊಬ್ಬ ಇಂದ್ರನನ್ನು ನಾವು ವರಿಸಿರಲಿಲ್ಲ. ಈಗ ವರಿಸಿದ್ದೇವೆ. ಆತನ ಅಧಿಕಾರ ಪೂರ್ಣವಾಗಬೇಕು. ಶಚಿಯಿಲ್ಲದೆ ನಡೆಯುವುದಿಲ್ಲ. ಅದರಿಂದ ಈ ಶಚಿಯು ಅಧಿಕಾರಪ್ರಯುಕ್ತವಾಗಿ ಇಂದ್ರನರ್ಧ ಸಿಂಹಾಸನವನ್ನು ಪಡೆದಿರುವ ಇಂದ್ರಾಣಿಯೇ ಅಥವಾ ಮನ್ವಂತರದ ಆದಿಯಲ್ಲಿ ಅಧಿಕಾರಕ್ಕೆ ಬಂದ ಇಂದ್ರನನ್ನು ಮದುವೆಯಾದ ಪತ್ನಿಯೇ? ಇದನ್ನು ಈಗ ಇತ್ಯರ್ಥಮಾಡಬೇಕು. ನಾನೇನೋ ಶಚಿದೇವಿಯು ಅಧಿಕಾರ ಪ್ರಯುಕ್ತಳಾದವಳು. ಇಂದ್ರನ ಪಟ್ಟಕ್ಕೆ ಬಂದವರ ಸ್ವತ್ತಾಗಿರಬೇಕು ಎಂದು ಅಭಿಪ್ರಾಯಪಡುತ್ತಾನೆ.

ಸಭೆಯಲ್ಲಿ ಗದ್ದಲವೋ ಗದ್ದಲವಾಯಿತು. ಕೆಲವರು "ಇದು ಸ್ತ್ರೀವಿಷಯಕವಾದ ಪ್ರಶ್ನೆ. ಸ್ತ್ರೀಯನ್ನು ಒಮ್ಮೆ ವಿನಿಯೋಗ ಮಾಡಬಹುದೇ ಹೊರತು ಮತ್ತೊಮ್ಮೆ ವಿನಿಯೋಗ ಮಾಡಲು ಯಾರಿಗೂ ಅಧಿಕಾರವಿಲ್ಲ. ಆಕೆಯು ಬೇಕಾದರೆ, ತನ್ನ ಮೇಲೆ ಇತರರು ಏನೂ ಅಧಿಕಾರವಿಲ್ಲವೆಂದು ಸ್ಪಷ್ಟವಾದ ಮೇಲೆ, ತನ್ನನ್ನು ತಾನು ತನ್ನಿಚ್ಛೆಯಂತೆ ವಿನಿಯೋಗಿಸಿಕೊಳ್ಳಬಹುದು. ಆದರದು ಕಾಮ ವಿನಿಯೋಗವಾಗುವುದೇ ಹೊರತು ಧರ್ಮವಾಗುವುದಿಲ್ಲ" ಎಂದರು.

ಇನ್ನೊಬ್ಬರು ಎದ್ದು ಹೇಳಿದರು; "ಇಲ್ಲಿ ಧರ್ಮಕಾಮಗಳ ಪ್ರಸ್ತಾಪವಿಲ್ಲ. ಅದಿಕಾರವು ಅರ್ಥ ಸ್ಥಾನ. ಶಚಿಯು ಆ ಸ್ಥಾನಕ್ಕೆ ಬದ್ಧಳಾಗಿದ್ದರೆ ಆ ಸ್ಥಾನಕ್ಕೆ ಬಂದವರಿಗೆಲ್ಲ ಆಕೆಯಿಂದ ಸೇವೆಯು ಸಲ್ಲಬೇಕು. ಹಾಗಿಲ್ಲದೆ, ಆಕೆಯು ಇಂದ್ರನ ಧರ್ಮಪತ್ನಿಯಾದರೆ ಆ ಮಾತೇ ಬೇರೆ. ಅದನ್ನು ಗೊತ್ತುಮಾಡಿ."

ಸಭೆಯಲ್ಲಿ ದೀರ್ಘಕಾಲದ ಚರ್ಚೆಯಾಯಿತು. ಕೊನೆಗೆ "ಶಚಿಯು ಅಧಿಕಾರ ಸ್ಥಾನಬದ್ಧಳು. ಆದರಿಂದ ಶಚಿಪತಿತ್ವವೆನ್ನುವುದು ಅಧಿಕಾರ ಸಂಕೇತವೇ ಹೊರತು ಮತ್ತೇನೂ ಅಲ್ಲ. ಅದರಿಂದ ಶಚೀದೇವಿಯು ಹೊಸ ಇಂದ್ರನನ್ನು ಕಾಯೇನ ವಚಸಾ ಮನಸಾ ಸೇವಿಸಲೇಬೇಕು" ಎಂದು ಗೊತ್ತಾಯಿತು.

ದೇವಗುರುವು ಇಷ್ಟವಿಲ್ಲದಿದ್ದರೂ ಸಭೆಯ ನಿರ್ಣಯವನ್ನು ಅಂಗೀಕರಿಸಬೇಕಾಯಿತು. ಸಭೆಯು ಈ ನಿರ್ಣಯವನ್ನು ಹೊಸ ಇಂದ್ರನಿಗೂ ಶಚೀದೇವಿಗೂ ಕಳುಹಿಸುವ ಭಾರವನ್ನು ದೇವಗುರುಗಳಿಗೆ ಒಪ್ಪಿಸಿತು. ಹಾಗೆಯೇ ಆ ನಿರ್ಣಯದಂತೆ ವ್ಯಕ್ತಿಗಳು ನಡೆಯುವಂತೆ ನೋಡಿಕೊಳ್ಳುವ ಭಾರವನ್ನೂ ಆತನಿಗೇ ವಹಿಸಿತು.

ಬೃಹಸ್ಪತಿಯು ಚಿಂತಾಭಾರದಿಂದ ಕುಗ್ಗಿದವನಂತೆ ನಿಧಾನವಾಗಿ ಮಂದಿರಕ್ಕೆ ಬಂದನು. ಆತನಿಗೆ ಆವೊತ್ತು ರಥವೇರಿ ಬರುವುದಕ್ಕೂ ಇಷ್ಟವಿಲ್ಲ. ದಾರಿಯುದ್ದಕ್ಕೂ ಒಂದೇ ಯೋಚನೆ; ಛೇ, ಅವಿವೇಕವಾಯಿತು. ಈಗ ಶಚಿಯನ್ನೇನೋ ದೇವಸಭೆಯು

ಇಂದ್ರನಿಗೆ ಕೊಟ್ಟುಬಿಟ್ಟಿತು. ಆದರೆ ಆಕೆ ಒಪ್ಪುವಳೇ? ಆಕೆಯು ಆಗುವುದಿಲ್ಲವೆಂದರೆ ಸಭೆಯ ನಿರ್ಣಯವೇನಾಗಬೇಕು? ಏನು ದನವೇ? ಹೊಡೆದು, ಬಡಿದು, ಎಳೆದುಕೊಂಡು ಹೋಗಿ ಮತ್ತೊಂದು ಮನೆಯಲ್ಲಿ ಕಟ್ಟಿ ಬರೋಣವೆನ್ನುವುದಕ್ಕೆ? ಯೋಚಿಸಲಿಲ್ಲ? ಎಲ್ಲರ ಹೃದಯದಲ್ಲೂ ಕುಳಿತು ಆಟವಾಡಿಸುವ ಆ ಮಹಾವಿಷ್ಣುವಿನದು ಈ ಕೆಲಸ. ಆತನು ಮಾಡಿದಂತಾಗಲಿ."

ಹೋಗುತ್ತಿದ್ದ ದೇವಾಚಾರ್ಯನು ಹಾಗೆಯೇ ನಿಂತನು; 'ತಡೆ, ಇದನ್ನೇ ಏಕೆ ಹಳೆಯ ಇಂದ್ರನನ್ನು ಹಿಂತಿರುಗಿ ಕರೆದು ತರಲು ಉಪಯೋಗಿಸಿಕೊಳ್ಳಬಾರದು! ಹೌದು. ಶಚಿಯು ಏನಾದರೂ ಮಾಡಿ ಈ ಇಂದ್ರನಿಂದ ಒಂದು ಅವಧಿಯನ್ನು ಪಡೆಯಬೇಕು. ಅಷ್ಟರೊಳಗೆ ಇಂದ್ರನೆಲ್ಲಿರುವನೋ ಕಂಡುಹಿಡಿಯಬೇಕು. ಆತನು ಮತ್ತೆ ಪವಿತ್ರನಾಗುವಂತೆ, ಆತನಿಗೆ ಈಗ ಬಂದಿರುವ ಹತ್ಯೆಯಿಂದ ಬಿಡುಗಡೆಯಾಗುವಂತೆ ಏನಾದರೂ ಮಾಡಿಸಬೇಕು. ಆದರೆ, ಇದು ನನಗೆ ಏನೂ ತಿಳಿಯದಂತೆ ಇರಬೇಕು. ಇಲ್ಲವಾದರೆ ಈ ಇಂದ್ರನು ಕೇಳಿದರೆ ಹೇಳಲೇಬೇಕಾಗುವುದು ಸರಿ" ಎಂದು ತಲೆದೂಗುತ್ತ ಮತ್ತೆ ಉತ್ಸಾಹಗೊಂಡು ಮಂದಿರಕ್ಕೆ ಬಂದನು.

ಆತನು ಮಂದಿರಕ್ಕೆ ಬರುತ್ತಿದ್ದ ಹಾಗೆಯೇ ಪ್ರಹರಿಯು ಬಂದು ವಂದಿಸಿ "ಶಚೀದೇವಿಯು ದರ್ಶನಕ್ಕೆ ಬಂದಿದ್ದಾರೆ" ಎಂದನು. ಬೃಹಸ್ಪತಿಯು "ಒಳ್ಳೆಯದಾಯಿತು" ಎಂದು ನೇರವಾಗಿ ಆಕೆಯನ್ನು ನೋಡಲು ಹೋದನು.

ಶಚೀದೇವಿಯು ಇಂದ್ರನು ಓಡಿಹೋದಾಗಿನಿಂದ ಭೂಮಿಗೆ ಇಳಿದು ಹೋಗಿದ್ದಳು. ದೇವತೆಗಳು ಇಂದ್ರನನ್ನು ಪಿಶಾಚಗ್ರಸ್ಥರಾದಂತೆ ಹುಡುಕಿದುದು, ಮೂರು ಲೋಕಗಳಲ್ಲಿಯೂ ಆತನೆಲ್ಲಿರುವನು ಎಂಬ ಗುರುತೂ ಸಿಕ್ಕಿದುದು, ಆಗ ಯತ್ನವಿಲ್ಲದೆ ದೇವರ್ಷಿಪಿತೃಗಣಗಳು ಇನ್ನೊಬ್ಬ ಇಂದ್ರನನ್ನು ಅರಸಿ ತಂದು ಆತನಿಗೆ ಇಂದ್ರಾಭಿಷೇಕ ಮಾಡಿದುದು, ಆತನು ಅಧಿಕಾರಪೂರ್ಣತೆಯನ್ನು ಬಯಸಿದುದು, ಇಷ್ಟೂ ಆಕೆಗೆ ಗೊತ್ತು. ಆಕೆಯು ಅಂತಃಪುರವನ್ನು ಬಿಟ್ಟು ಈಚೆಗೆ ಬರದಿದ್ದರೂ ಇಂದಿನ ದೇವಸಭೆಯಲ್ಲಿ ನಿರ್ಣಯವಾಗುತ್ತಿದ್ದ ಹಾಗೆಯೇ ಆಕೆಗೆ ತಿಳಿದಿದೆ. ಶಚಿಯಾದರೂ ಮೂರು ಲೋಕದ ಒಡೆಯನ ಒಡತಿಯಾದರೂ, ಆಕೆಯು ಹೆಣ್ಣಲ್ಲವೆ? ಆದ ನಿರ್ಣಯವನ್ನು ಕೇಳಿ ಆಕೆಗೆ ಎದೆ ಒಡೆದಂತಾಯಿತು. "ತಾನು ಇನ್ನೊಬ್ಬನನ್ನು ಸೇವಿಸಬೇಕೆ? ಹಾಗೆಂದು ವಿಧಿಸುವವನೂ, ಆ ವಿಧಿಯು ಆಚರಣಕ್ಕೆ ಬರುವಂತೆ ನೋಡಿಕೊಳ್ಳುವವನೂ ದೇವಗುರು! ಯಾವ ಗುರುವನ್ನು ತಾವು ಇಂದ್ರದಂಪತಿಗಳು ದಿನವೂ ಅರ್ಚಿಸುತ್ತಿದ್ದರೋ, ಆತನಿಂದ ತನ್ನನ್ನು ಇನ್ನೊಬ್ಬನಿಗೆ ವಿನಿಯೋಗ ಮಾಡಲು ಕರ್ತ! ಅಯ್ಯೋ ನನ್ನ ಹಣೆಯಲ್ಲಿ ಏನು ಬರೆಯಿತು?"

ಬೃಹಸ್ಪತಿಯನ್ನು ಕಂಡು ಶಚಿಯು ಮತ್ತೆ ಗೊಳೋ ಎಂದು ಅತ್ತಳು. ದೇವಾಚಾರ್ಯನು ಆಕೆಯ ಕಣ್ಣಲ್ಲಿ ನೀರು ಬಂದಿದ್ದುದನ್ನು ನೋಡಿರಲಿಲ್ಲ. ಆತನಿಗೂ ಕಣ್ಣಲ್ಲಿ ನೀರು ಬಂತು. "ಶಚೀದೇವಿ, ನೀನು ನನಗೆ ಮಗಳಂತೆ! ನೀನು ಕಣ್ಣೀರು ಬಿಡುವುದನ್ನು ನಾನು ನೋಡಲಾರೆ. ದೇವಸಭೆಯು ದುಡುಕಿದೆ. ಅದನ್ನು ಸರಿಮಾಡೋಣವಂತೆ, ನೀನು ಅಳಬೇಡ" ಎಂದು ಸಮಾಧಾನ ಹೇಳಿದನು.

ಶಚಿಯು ಕಣ್ಣೀರು ಒರೆಸಿಕೊಂಡು ಬಿಕ್ಕಳಿಸುತ್ತಾ ಕೇಳಿದಳು; "ದೇವಸಭೆಯು ದೇವರಾಜನ ಅಧಿಕಾರ ಪೂರ್ಣವಾಗುವುದನ್ನು ಮಾತ್ರ ನೋಡಿತು. ನಾನು ಸ್ತ್ರೀ, ನನಗೆ ಪ್ರತ್ಯೇಕವಾದ ಅಧಿಕಾರವೊಂದಿದೆಯೆಂಬುವುದನ್ನು ಮಾತ್ರ ಗಮನಿಸಲಿಲ್ಲ."

ದೇವಗುರುವು ವಿಷ್ಣುವಾಗಿ ಹೇಳಿದನು: "ಅಮ್ಮಾ ಈ ಸಭೆಗೆ ನಾನು ಅಧ್ಯಕ್ಷನಾಗಬಾರದಿತ್ತು. ಯತ್ನವಿಲ್ಲ. ನಡೆದುಹೋಯಿತು. ಚಿಂತಿಸಬೇಡ, ಆ ನಿರ್ಣಯದಿಂದ ನಿನಗೆ ಹಾನಿಯಾಗದಂತೆ ನೋಡಿಕೊಳ್ಳೋಣ."

ಶಚೀದೇವಿಗೆ ಅರ್ಧ ಧೈರ್ಯವಾಯಿತು. ಆದರೂ ಕೋಪವಿಳಿದಿಲ್ಲ. "ದೇವ ಸಭೆಯನ್ನು ಕರೆಯಬೇಕೇಕೆ? ಅಲ್ಲಿ ನಿರ್ಣಯವನ್ನು ಮಾಡಿಸಬೇಕೇಕೆ? ಆನಂತರ ಆದರಿಂದ 'ನಿನಗೆ ಹಾನಿಯಾಗದಂತೆ ನೋಡಿಕೊಳ್ಳೋಣ' ಎಂಬ ಮಾತೇಕೆ? ಮೊದಲೇ ದೇವಸಭೆಯಲ್ಲಿ ನಿರ್ಣಯವೇ ಆಗದಂತೆ ತಡೆಯಬಾರದಾಗಿತ್ತೆ? ಅಥವಾ ದೇವಸಭೆಯೇ ಸೇರದಂತೆ ನೋಡಿಕೊಳ್ಳಬಾರದಾಗಿತ್ತೆ?" ಎಂಧು ಆಕೆಯ ಸಂಕಟ. ಬಹುದಿನದಿಂದ ತಾನೂ ತನ್ನೊಡೆಯನೂ ಗೌರವಿಸುತ್ತಿದ್ದಾತನಲ್ಲಿ ಈ ಮಾತನ್ನು ಕಂಠೋಕ್ತವಾಗಿ ಹೇಳಿ ನಿಷ್ಠುರಪಡಿಸುವುದೆಂತು? ಆದರೂ ಆತನನ್ನೇ ನೋಡುತ್ತಿರುವ ಕಣ್ಣು ಏನೇನೋ ಹೇಳುತ್ತಿತ್ತು.

ಆತನೂ ನೆಲವನ್ನು ನೋಡುತ್ತ ಕುಳಿತಿದ್ದಾನೆ. ಏನೋ ಯೋಚನೆಯಲ್ಲಿ ಅನ್ಯಮನಸ್ಕನಾಗಿದ್ದನೆ. ಇಲ್ಲದಿದ್ದರೆ ಶಚೀದೇವಿಯ ಯೋಚನೆಗಳನ್ನು ಆತನು ಅರ್ಥಮಾಡಿಕೊಳ್ಳುತ್ತಿದ್ದನೋ ಏನೋ? ಅಂತೂ ಇಬ್ಬರೂ ಬಹಳ ಹೊತ್ತು ಮಾತನಾಡಲಿಲ್ಲ.

ಕೊನೆಗೆ ದೇವಗುರುವು ಮಾತನಾಡಿ: "ದೇವಿ, ಅದರ ಇತ್ಯರ್ಥವು ನಿನ್ನ ಕೈಯಲಿದೆ. ನಾನೂ ಏನೂ ತಿಳಿಯದವನಂತೆ ನಿರ್ಣಯವನ್ನು ನಿನಗೂ ಆತನಿಗೂ ಕಳುಹಿಸಿಕೊಡುತ್ತೇನೆ. ನೀನು ನಿರ್ಣಯವನ್ನೂ ತೆಗೆದುಕೊಂಡು ಆತನ ಬಳಿಗೆ ಹೋಗು. ಆತನಿಗೆ ಹೇಳು: 'ಇದುವರೆಗೂ ನಾನು ಹಳೆಯ ಇಂದ್ರನನ್ನು ಗಂಡನೆಂದೇ ವ್ಯವಹಾರ ಮಾಡಿದ್ದೇನೆ. ಆದ್ಧರಿಂದ, ನಾನು ನನ್ನನ್ನು ಯಥೇಚ್ಛವಾಗಿ ವಿನಿಯೋಗಿಸಕೊಳ್ಳಬಹುದು. ಆದರೆ, ಧರ್ಮಶಾಸ್ತ್ರದ ಅಡ್ಡಿಯೊಂದಿದೆ. ಸ್ತ್ರೀಯು ದೇಶಾಂತರಗತನಾದ ಪುರುಷನಿಗಾಗಿ ಎಷ್ಟು ದಿನ ಕಾಯಬೇಕು ಎಂದು ಶಾಸ್ತ್ರ ಹೇಳುವುದೋ ಅಷ್ಟು ದಿನ ಕಾದು ನೋಡುವುದಕ್ಕೆ ಅಪ್ಪಣೆಯಾಗಬೇಕು" ಎಂದೂ ನಮಸ್ಕರಿಸು. ಆತನು ತಪ್ಪದೆ ಆಗಲೆನ್ನುವನು. ಅಷ್ಟರೊಳಗೆ ವಿಶ್ವಪ್ರಯತ್ನ ಮಾಡಿ ನಮ್ಮ ಇಂದ್ರನನ್ನು ಹುಡುಕಿಸೋಣ."

ಶಚಿಗೆ ಮನಸ್ಸು ಏನೋ ಹಗುರವಾದಂತಾಯಿತು. ಆದರೂ ಇನ್ನು ಬೆದರಿಕೆ ತಪ್ಪಲಿಲ್ಲ. ಕೇಳಿದಳು: "ಒಂದು ವೇಳೆ ಆತನು ದುಡುಕಿದರೆ? ಹುಡುಕಿದರೂ ಇಂದ್ರನು ಸಿಕ್ಕದೆ ಹೋದರೆ?"

ಬೃಹಸ್ಪತಿಯು ಧೀರಭಾವದಿಂದ ಹೇಳಿದನು: "ಧರ್ಮವನ್ನು ಮೀರುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಧರ್ಮದಿಂದಲೇ ಎಲ್ಲವೂ ನಿಂತಿರುವುದು. ಮಹಾವಿಷ್ಣುವನ್ನು ನಾವು ಪೂಜಿಸುವುದು ಧರ್ಮಮಯನೆಂದು. ನೀನು ಹೋಗುವಾಗ ಲಕ್ಷ್ಮೀ ನಾರಾಯಣನನ್ನು ಪೂಜೆ ಮಾಡಿ ಹೋಗು. ಆತನು ನೀನು ಹೇಳಿದ ಹಾಗೆ ಕೇಳುವನು. ಅದಕ್ಕಿಂತಲೂ ನೀನೂ ಹೇಳಿದ ಎರಡನೆಯ ವಿಷಯ ಹೆಚ್ಚು ಗಂಭೀರವಾದುದು. ಬೇಡ ಎಂದಾಗ ತಲೆಮರೆಸಿಕೊಳ್ಳುವುದು ದೇವತೆಗಳಲ್ಲಿ ಹುಟ್ಟುತ್ತಲೇ ಬಂದಿರುವ ಶಕ್ತಿ. ಆದರೆ, ಮರೆಯಾಗಿರುವವರನ್ನು ಕಂಡುಹಿಡಿಯಲು ಏನು ಮಾಡಬೇಕು ಎಂಬುದು ಇಂದ್ರನಿಗೆ ಮಾತ್ರ ಗೊತ್ತು. ಆತನೇ ತಪ್ಪಿಸಿಕೊಂಡಿರಲು, ಇನ್ನು ಯಾರನ್ನು ಕೇಳುವುದು? ಅದನ್ನು ಯೋಚಿಸಬೇಕಾದುದು."

ಶಚಿಗೆ ಥಟ್ಟನ ಇಂದ್ರನು ಹೇಳಿದ್ದ ಮಾತು ನೆನಪಾಯಿತು. ಆದರೆ ಆತನು ಹೇಳಿರುವ ರಹಸ್ಯವನ್ನು ಆತನಪ್ಪಣೆಯಿಲ್ಲದೆ ಇತರರಿಗೆ ಹೇಳುವುದೆಂತು? ಆದರಿಂದ ಅದನ್ನು ಮುಚ್ಚಿಕೊಳ್ಳಲು, "ಬೇಕಾದರೆ ನಾನೇ ಹುಡುಕಲು ಹೋಗುವೆನು. ನನ್ನ ಮೇಲಿನ ಅಭಿಮಾನದಿಂದಲಾರದೂ ಆತನು ಪ್ರಕಟವಾಗುವನೇನೋ ನೋಡೋಣ," ಎಂದಳು.

ಬೃಹಸ್ಪತಿಯು ತನ್ನ ಸಲಹೆಯನ್ನು ಶಚೀದೇವಿಯು ಒಪ್ಪಿಕೊಂಡಿರುವಳೆಂದು ಸಂತೋಷಿತವಾಗಿ, "ನೀನು ಸೌಭಾಗ್ಯವತಿ. ನಿಮ್ಮಂಥವರಿಗೆ ಬಂದ ಕಷ್ಟಗಳು ಬಹುಕಾಲವಿರುವುದಿಲ್ಲ. ಇರಲಿ, ನೋಡೋಣ. ನಮ್ಮ ಕೈಯಲ್ಲಾಗದಾಗ ಚತುರ್ಮುಖನ ಮೊರೆ ಹೊಕ್ಕರಾಯಿತು" ಎಂದನು.

ಶಚಿಯು ಧೈರ್ಯವಾಗಿ ನಕ್ಕಳು.

ಬದುಕಲೊಂದಿಷ್ಟು ಆಪ್ತ ಮಾತು ಲೇ : ಬಿ.ಎನ್.ರಮೇಶ ಬೊಂಗಳೆ

# ಸಚ್ಚಾರಿತ್ರ್ಯವೇ ಶಾಶ್ವತ ಬಂಡವಾಳ

ವ್ಯಕ್ತಿ ಬಡವನಿರಲಿ, ಶ್ರೀಮಂತನಿರಲಿ, ಆತನಿಗೆ ಚಾರಿತ್ರ್ಯವೆಂಬುದುದೊಂದು ಇದ್ದೇ ಇರುತ್ತದೆ. ಸಮಾಜವು ಆ ಇಬ್ಬರಲ್ಲಿಯೂ ಒಳ್ಳೆಯ ಚರಿತ್ರೆಯನ್ನು ಅಪೇಕ್ಷಿಸುತ್ತದೆ. ಭರವಸೆಯಿರಿಸಿರುತ್ತದೆ. ಮಹಾ ಪುರುಷನೋರ್ವನ ಹೆಸರಿನಲ್ಲಿಯೇ ಒಂದು ರೀತಿಯ ಮೋಡಿಯಿರುತ್ತದೆ. ನೆಹರೂ ಹೇಳುತ್ತಿದ್ದರಂತೆ- "ಗಾಂಧೀಜಿಯೋರ್ವರ ಮೌಲ್ಯದ ಬಗ್ಗೆ ನಾನೇನು ಹೇಳಿ, ಅದು ದೇಶದ ಮೌಲ್ಯಕ್ಕಿಂತ ದೊಡ್ಡದು."

ಜಗತ್ತಿನಲ್ಲಿ ಗೆಲ್ಲಲು ಮುಖ್ಯವಾಗಿ ಬೇಕಾಗಿರುವುದು ಚಾರಿತ್ರ್ಯ. ಒಂದೆಡೆ ಗಾಂಧೀಜಿ ಬರೆಯುತ್ತಾರೆ-"ನಾನು ಉನ್ನತ ಚಾರಿತ್ರ್ಯದ ಹಾದಿಯಲ್ಲಿ ನಡೆದೇ ಶಕ್ತಿ-ಸಾಮರ್ಥ್ಯಗಳನ್ನು ಹೊಂದುತ್ತಿರುತ್ತೇನೆಯೇ ವಿನಹ ಅನ್ಯ ಮಾರ್ಗಗಳನ್ನು ಸರಿಸುವುದಿಲ್ಲ. ನನ್ನ ಮಾರ್ಗದಲ್ಲಿ ನಾನಂದುಕೊಂಡಿರುವ ಗುರಿ ಮುಟ್ಟುವುದು ಅಷ್ಟು ಸುಲಭವಲ್ಲವೆಂಬುದು ನನಗೆ ತಿಳಿದಿದೆಯಾದರೂ ಅದಕ್ಕಿಂತ ಒಳ್ಳೆಯ ಹಾಗೂ ನಿಶ್ಚಿತವಾದ ಮಾರ್ಗ ಬೇರೊಂದಿಲ್ಲ."

ಯಾವುದೇ ಎಂಜಿನ್ನಿನ ಅಥವಾ ಯಂತ್ರದ ಸಾಮರ್ಥ್ಯವನ್ನು ಸೂಕ್ಷ್ಮವಾಗಿ ಊಹಿಸಬಹುದು. ಆದರೆ ಮನುಷ್ಯನ ಅಂತರ್ಯದಲ್ಲಿ ಅವಿತಿರುವ ಚರಿತ್ರೆಯ ಶಕ್ತಿ ಅಥವಾ ಸಾಮರ್ಥ್ಯ ಅಂದಾಜಿಸುವುದುದಾದರೂ ಹೇಗೆ? ಒಬ್ಬ ಹುಡುಗ ಅಥವಾ ಹುಡುಗಿಯ ಬದುಕಿನ ಮೇಲೆ ಶಾಲಾ-ಕಾಲೇಜುಗಳಲ್ಲಿ ಏನೊಂದು ಸಂಸ್ಕಾರದ ಪ್ರಭಾವ ಬಿದ್ದಿರುತ್ತದೋ ಅದನ್ನು ಅಂದಾಜಿಸುವುದಾದರೂ ಹೇಗೆ? ಒಬ್ಬಿಬ್ಬ ವಿದ್ಯಾರ್ಥಿಗಳು ತಮ್ಮ ಕಾರ್ಯ ವೈಖರಿಯ ಮೂಲಕ ಪರಂಪರಾಗತವಾಗಿ ನಡೆದುಕೊಂಡು ಬಂದಂತಹ ವಿಚಾರಗಳನ್ನು ಅಥವಾ ಪದ್ಧತಿಗಳನ್ನು ಬದಲಿಸಿಬಿಡುತ್ತಾರೆ. ಪದ್ಧತಿಗಳನ್ನೇ ಭಂಗಗೊಳಿಸುವಂತಹ ಅಂಥ ಧೀರ ವ್ಯಕ್ತಿಗಳ ಚರಿತ್ರೆಯನ್ನು ಯಾವುದಾದರೂ ಉಪಕರಣ ಅಥವಾ ಯಂತ್ರದಿಂದ ಅಳೆಯಲಾಗುತ್ತದೆಯೇ?

ಬದುಕಿನಲ್ಲಿ ವೈಫಲ್ಯ ಹೊಂದಿದ ವ್ಯಕ್ತಿಗೆ ಗೌರವಾದರಗಳು ಲಭಿಸುವುದಿಲ್ಲ, ಹಾಗೆಂದ ಮಾತ್ರಕ್ಕೆ ಚೆನ್ನಾಗಿ ಉಂಡು-ಉಡುತ್ತಿರುವ ಹಾಗೂ ಹಣವನ್ನು ಕೂಡಿಡುವ ವ್ಯಕ್ತಿಗಳಿಗೂ "ಸಫಲ"ರೆನ್ನಲಾಗುವುದಿಲ್ಲ. ಅನ್ಯರ ಸಹಾಯಕ್ಕೆ ಒದಗದ, ನೊಂದವರ ಕಣ್ಣೀರೊರಸದ, ದುಖಿಃತ ಹಾಗೂ ನಿರಾಶಿತರ ಮನಸ್ಸಿನಲ್ಲಿ ಭರವಸೆ ಮೂಡಿಸದ ವ್ಯಕ್ತಿಗಳು ಈ ಜಗತ್ತಿನಲ್ಲಿ ಇರುವುದರಿಂದ ಆಗುವ ಲಾಭವಾದರೂ ಏನು? ಅಂಥವರ ಮನಸ್ಸು ಕಲ್ಲಾಗಿರುತ್ತದೆಯಲ್ಲದೆ ಹಣ ಮಾತ್ರವೇ ಅವರ ಸರ್ವಸ್ವವಾಗಿರುತ್ತದೆ.

ಹಣಕ್ಕೆ ತಮ್ಮತನವನ್ನು ಮಾರಿಕೊಳ್ಳದ ಮಹಾನುಭಾವರ ಅಗತ್ಯ ಇಂದು ಜಗತ್ತಿಗಿದೆ. ತಮ್ಮ ಸಲಹೆ-ಅಭಿಪ್ರಾಯಗಳಿಗೆ ಬೆಲೆ ಕಟ್ಟಿಕೊಳ್ಳದ ವ್ಯಕ್ತಿಗಳ ಅಗತ್ಯ ಜಗತ್ತಿಗಿದೆ. ಯಾರು ಪ್ರಾಮಾಣಿಕರಾಗಿರುತ್ತಾರೋ, ಯಾರ ನರ-ನಾಡಿಗಳಲ್ಲಿ ಪ್ರಾಮಾಣಿಕತೆ ತುಂಬಿಕೊಂಡಿರುತ್ತದೋ, ಯಾರ ಹೃದಯ ದಿಗ್ದರ್ಶಕ-ಯಂತ್ರದ ರೀತಿಯಲ್ಲಿ ಒಳ್ಳೆಯತನವೆನ್ನುವ ನಕ್ಷತ್ರವನ್ನೇ ದಿಟ್ಟಿಸುತ್ತಿರುತ್ತದೋ, ಯಾರು ಸ್ವರ್ಗ ಸುಖದಿಂದ ಚ್ಯುತಿಗೊಂಡರು ಸಹ ತಮ್ಮತನವನ್ನು ಬಿಡಲಾರರೋ, ಹಾಗೂ ಬೆನ್ನು ತೋರಲಾರರೋ, ಸತ್ಯವನ್ನು ನುಡಿಯುವಲ್ಲಿ ಹಿಂಜರಿಯಲಾರರೋ, ಅದಕ್ಕಾಗಿ ಎಂತಹ ದೊಡ್ಡ ಸಂಕಟ ಅಥವಾ ಅಪಾಯವನ್ನೆದುರಿಸಲು ಸಿದ್ಧರಿರುತ್ತಾರೆಯೋ, ತಮ್ಮ ಹೆಸರಿನ ಡಂಗುರವನ್ನು ತಾವೇ ಸಾರಿಕೊಳ್ಳದೆ ಸಾಹಸದೊಡನೆ ಮೌನವಾಗಿದ್ದುಕೊಂಡೇ ತಮ್ಮ ಕೆಲಸವನ್ನು ಮಾಡುತ್ತಿರುತ್ತಾರೋ,

ತಮ್ಮ ಮನಸ್ಸಿನ ಭಾವನೆಗಳನ್ನು ಮುಚ್ಚಿಟ್ಟುಕೊಳ್ಳದೆಯೇ ವಾಸ್ತವ ಸ್ಥಿತಿಯನ್ನು ಸಂಕೋಚ ಪಡೆದ ವ್ಯಕ್ತಪಡಿಸುತ್ತಾರೋ ಅಂತಹ ವ್ಯಕ್ತಿಗಳೆಲ್ಲರ ಅಗತ್ಯ ಇಂದು ಜಗತ್ತಿಗಿದೆ.

ನಾವೆಲ್ಲ ವಸ್ತುತಃ ಕೀಟಗಳಿದ್ದಂತೆ. ಏಕೆಂದರೆ ಕೀಟಗಳು ಯಾವ ಬಣ್ಣದ ಮರ–ಗಿಡ–ಎಲೆಗಳಲ್ಲಿ ವಾಸಿಸುತ್ತವೆಯೋ ಆ ರೀತಿಯ ಬಣ್ಣದಲ್ಲಿ ಕಾಣತೊಡಗುತ್ತವೆ. ಅಂದರೆ ಅವುಗಳ ಬಣ್ಣ ಅಂತೆಯೇ ಆಗಿ ಬಿಡುತ್ತದೆ. ಅದೇ ರೀತಿ ಎಂತಹ ವಿಚಾರಗಳು ನಮ್ಮ ಮನಸ್ಸಿನಲ್ಲಿರುತ್ತವೆಯೋ ಅಥವಾ ಯಾವ ಪ್ರಕಾರದ ವಿಚಾರಗಳಿಂದ ನಮ್ಮ ಮನಸ್ಸಿನ ದಾಹವನ್ನು ನೀಗಿಸಿಕೊಳ್ಳುತ್ತೇವೆಯೋ ನಾವೂ ಅಂತೆಯೇ ಆಗಿ ಬಿಡುತ್ತೇವೆ. ನಮ್ಮ ದೈನಂದಿನ ಬದುಕಿನ ಪ್ರತಿಯೊಂದು ಕೃತ್ಯವೂ ನಮ್ಮ ಬದುಕಿನ ಮೇಲೆ ಪ್ರಭಾವ ಬೀರುತ್ತದೆ. ಉಕ್ಕಿನಾಕ್ಷರಗಳಲ್ಲಿ ಬರೆದಿರಬಹುದೆನ್ನುವಂತಹ ಸ್ಥಾಯಿತ್ವವನ್ನು ಜೀವನದಲ್ಲಿ ಅದು ಹೊಂದಿರುತ್ತದೆ. ಕಳೆದುಕೊಂಡ ಅವಕಾಶ, ಹಾಳು ಮಾಡಿಕೊಂಡ ಶಕ್ತಿ ಮತ್ತು ವ್ಯರ್ಥವಾಗಿ ಕಳೆದ ಸಮಯ ಇವೆಲ್ಲವೂ ಸದಾ ನಮ್ಮನ್ನು ಪ್ರಶ್ನಿಸುತ್ತವೆ, ದೂಷಿಸುತ್ತವೆ. ಬಿತ್ತಿದಂತೆ ಬೆಳೆ ಎನ್ನುವುದು ಇಲ್ಲಿನ ವಾಸ್ತವ, ಬೇವನ್ನು ಬಿತ್ತಿ ಮಾವನ್ನು ಪಡೆಯುವುದು ಸಾಧ್ಯವೇ? ಎಂಬುದು ಇಲ್ಲಿನ ಪ್ರಶ್ನೆ.

---

ಕಗ್ಗದ ಬೆಳಕಿನಲ್ಲಿ

ಲೇ: ವಿ॥ ಜಿ. ಎಸ್. ನಟೇಶ್

# ಸಾಹಸಕ್ಕೆ ಕುಂದಾಗುವುದು ಯಾವಾಗ

**ನಾಸಿಕದ ಮಾಟದಿಂದಾಕ್ಲಿಯೋಪ್ಯಾಟ್ರಳಿಗೆ**
**ದಾಸರಾದರು ಶೂರ ಸೀಸರ್ ಆಂಟನಿಗಳ್।**
**ದೇಶ ಚರಿತೆಗಮವರ ಜಸಮಂಕುಶವಾಯ್ತು**
**ನಾಸಾಪುಟದ ರೇಖೆ – ಮಂಕುತಿಮ್ಮ॥**

**ಮೂಗಿನ ಮಾಟದಿಂದಾಗಿ ಆ ಕ್ಲಿಯೋಪ್ಯಾಟ್ರ ಎಂಬ ಹೆಣ್ಣಿಗೆ, ಶೂರರಾದ ಸೀಸರ್ ಆಂಟನಿಗಳು ದಾಸರಾದರು. ಆ ಮೂಗಿನ ದಂಡದ ರೇಖೆ ಅವರ ದೇಶದ ಚರಿತ್ರೆಗೂ, ಯಶಸ್ಸಿಗೂ ಅಂಕುರವಾಯಿತು.**

ಇಂಗ್ಲೆಂಡಿನ ಮಹಾಕವಿ ಷೇಕ್ಸ್‌ಪಿಯರ್ 'ಆಂಟನಿ ಅಂಡ್ ಕ್ಲಿಯೋಪ್ಯಾಟ್ರ. ಎಂಬ ನಾಟಕವನ್ನು

ರಚಿಸಿದ್ದಾನೆ. ಕ್ಲಿಯೋಪ್ಯಾಟ್ರ ಈಜಿಪ್ಟಿನ ರಾಣಿ. ರೋಮ್ ಸಾಮ್ರಾಜ್ಯವನ್ನು ಕಟ್ಟುವಲ್ಲಿ ಸಾಕಷ್ಟು ಶ್ರಮವಹಿಸಿದ ಮಹಾಸೇನಾನಿ ಜೂಲಿಯಸ್ ಸೀಸರ್ ಹಾಗೂ ಅವನ ಸ್ನೇಹಿತನಾದ ಮಾರ್ಕ್ ಆಂಟನಿ ನಂತರದಲ್ಲಿ ಒಂದು ಹೆಣ್ಣಿಗಾಗಿ ಪರಸ್ಪರ ವೈರಿಗಳಾಗುತ್ತಾರೆ. ಕ್ಲಿಯೋಪ್ಯಾಟ್ರಳು ತನ್ನ ಮೂಗಿನ ಸೌಂದರ್ಯಕ್ಕೆ ಜಗತ್ಪ್ರಸಿದ್ಧಳಾದವಳು. ಅವಳ ಮೂಗಿನ ಮಾಟಕ್ಕೆ ಇಬ್ಬರೂ ಮನಸೋತು ಪರಸ್ಪರ ಕಾದಾಡಿಕೊಂಡು ಸತ್ತರು. ಅಂತಹ ವಿಶಾಲವಾದ ರೋಮ್ ಸಾಮ್ರಾಜ್ಯ ಹೆಣ್ಣಿನ ಮೋಹದಿಂದಾಗಿ ಪತನವಾಯಿತು. ಒಂದು ಹೆಣ್ಣಿನ ನಾಸಾದಂಡ ದೇಶದ ಚರಿತ್ರೆಯನ್ನೇ ಬದಲಿಸಿತು. ಅದರ ಎದುರು ಇವರ ಶೌರ್ಯ ಮಸುಕಾಗಿಬಿಟ್ಟಿತು. ಯಾವುದೇ ಸಂಪತ್ತು ಬಂದರು ವಿವೇಕವನ್ನು ಕಳೆದುಕೊಂಡರೆ ಸರ್ವವನ್ನೂ ಕಳೆದುಕೊಂಡಂತೆ ಎಂದು ಮೇಲಿನ ಪದ್ಯ ದೃಢಪಡಿಸುತ್ತದೆ. ಉನ್ನತ ಸ್ಥಾನವನ್ನು ಪಡೆದವರು ಸರ್ವದಾ ಮನೋನಿಯಂತ್ರಣದಲ್ಲಿರಬೇಕಾಗುತ್ತದೆ. ಹುಚ್ಚು ಮನಸ್ಸು ಏನನ್ನೂ ಮಾಡಿಸಿಬಿಡುತ್ತದೆ. ಅಲ್ಲಮಪ್ರಭುಗಳು ತಮ್ಮ ವಚನದಲ್ಲಿ ಹೀಗೆ ಎಚ್ಚರಿಸುತ್ತಾರೆ. 'ಹೆಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ, ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ ಗುಹೇಶ್ವರಾ.'

**ನಮಗೆ ಧನ್ಯತಮವಾದ ಗಳಿಗೆ ಯಾವುದು**

**ಧನ್ಯತಮವಾ ಗಳಿಗೆ ಪುಣ್ಯತಮವಾ ಗಳಿಗೆ**
**ನಿನ್ನ ಮಮತೆಯ ನೂಲ ವಿಧಿಯೆ ಪರಿದಂದು।**
**ಉನ್ನತಿಯಿನಾತ್ಮವನು ತಡೆದಿಡುವ ಪಾಶಗಳು**
**ಛಿನ್ನವಾದಂದೆ ಸೊಗ – ಮಂಕುತಿಮ್ಮ॥**

**ನಿನ್ನ ಮಮತೆಯ ನೂಲನ್ನು ವಿಧಿ ಹರಿದ ಆ ಕ್ಷಣವೇ ಧನ್ಯತಮ ಹಾಗೂ ಪುಣ್ಯತಮ. ಆತ್ಮೋನ್ನತಿಯನ್ನು ತಡೆದಿಡುವ ಪಾಶಗಳು ತುಂಡಾದಾಗಲೇ ಸುಖದ ಅನುಭವವಾಗುವುದು.**

ಮೋಹ ಮಮತೆಗಳನ್ನು ಮನುಷ್ಯ ತಾನಾಗಿಯೇ ಕಳಚಿಕೊಳ್ಳಲಾರ. ಆದ್ದರಿಂದ ಮಾನ್ಯ ಗುಂಡಪ್ಪನವರು ವಿಧಿ ತಾನಾಗಿಯೇ ಮಮತೆಯನ್ನು ಕಳಚಿಹಾಕಿಬಿಟ್ಟರೆ ಅದೊಂದು ಧನ್ಯತಮವಾದ ಗಳಿಗೆ. ಅದೊಂದು ಪುಣ್ಯದ ಗಳಿಗೆ ಅಂದಿದ್ದಾರೆ. ನಮ್ಮ ಆತ್ಮೋನ್ನತಿಯನ್ನು ತಡೆಯುವ ಪಾಶಗಳು ಎಂದು ತುಂಡಾಗುತ್ತವೆಯೋ ಅಂದು ನಮಗೆ ನಿಜವಾದ ಸುಖದ ಅನುಭವವಾಗುವುದು. ಮನುಷ್ಯನ ಬದುಕಿನ ಪರಮೋಚ್ಚ ಗುರಿ ಆತ್ಮೋನ್ನತಿ. ಭಗವದ್ಗೀತೆಯಲ್ಲಿ 'ಉದ್ಧರೇತ್ ಆತ್ಮನಾತ್ಮಾನಂ ನಾತ್ಮಾನಮವಸಾದಯೇತ್ ಆತ್ಮೈವಹ್ಯಾತ್ಮನೋ ಬಂಧುಃ ಆತ್ಮೈವರಿಪುರಾತ್ಮನಃ' ಎಂದು ಹೇಳಲಾಗಿದೆ. ಸದಾ ನಾವು ಆತ್ಮೋನ್ನತಿಯನ್ನು ಮಾಡಿಕೊಳ್ಳಬೇಕು. ಆತ್ಮವನ್ನು ನಾಶ ಮಾಡಿಕೊಳ್ಳಬಾರದು. ಏಕೆಂದರೆ ಆತ್ಮವೇ ತನಗೆ ಬಂಧುವೂ ಕೂಡ ಹಾಗೆಯೇ ವೈರಿಯೂ ಕೂಡ. ಪ್ರಾಪಂಚಿಕ ಸುಖ ಸೌಲಭ್ಯಗಳೇ

ಸರ್ವಸ್ವ ಎಂದು ತಿಳಿದಿರುವ ಜನರಿಗೆ ಕುವೆಂಪುರವರು ತಮ್ಮ 'ಶತಮಾನದ ಸಂಧ್ಯಾ' ಎಂಬ ಕತೆಯಲ್ಲಿ ಹೀಗೆ ಎಚ್ಚರಿಸಿದ್ದಾರೆ. 'ನೊಣ ಮೀಸೆಯ ಹುಳುಹೆಜ್ಜೆಯ ಎಣಿಸುವ ಬಿಜ್ಜೆಯಬಲ್ಲ ತನ್ನಾತ್ಮವ ತಾನರಿಯುವ ಸಾಧನೆಯೊಂದನು ಒಲ್ಲ. ಅನ್ವೇಷಣೆ, ಅನ್ವೇಷಣೆ ಸುಖಿಸಲು ಪುರುಸೊತ್ತಿಲ್ಲ. ತಿಳಿದೂ ತಿಳಿದೂ ಕೊನೆಗೇನೂ ಗೊತ್ತಿಲ್ಲ.'

**ಯಾವುದು ನಮಗೆ ವಿಹಿತವಾದುದು?**

**ವ್ಯಾಮೋಹವಿಲ್ಲದ ಪ್ರೇಮನಿರ್ಭರವಿರಲಿ**
**ಭೀಮಸಾಹಸವಿರಲಿ ಹಗೆತನವನುಳಿದು।**
**ನೇಮನಿಷ್ಠೆಗಳಿರಲಿ ಡಂಭಕಠಿಣತೆ ಬಿಟ್ಟು**
**ಸೌಮ್ಯವೆಲ್ಲೆಡೆಯಿರಲಿ – ಮಂಕುತಿಮ್ಮ॥**

**ವ್ಯಾಮೋಹವಿಲ್ಲದ ಪ್ರೇಮ ತುಂಬಿರಲಿ. ಹಗೆತನವಿಲ್ಲದ ಶೌರ್ಯ ಸಾಹಸವಿರಲಿ. ಆಡಂಬರ ಕಾಠಿಣ್ಯವಿಲ್ಲದ ನೇಮನಿಷ್ಠೆಗಳಿರಲಿ. ಎಲ್ಲೆಡೆಯಲ್ಲಯೂ ಸೌಮ್ಯತೆ ಇರಲಿ.**

ಎಂತಹ ಗುಣಗಳು ನಮ್ಮಲ್ಲಿ ತುಂಬಿರಬೇಕೆಂಬುದನ್ನು ಮಾನ್ಯ ಡಿ.ವಿ.ಜಿ.ಯವರು ಇಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ. ಬದುಕಿನಲ್ಲಿ ಪ್ರೇಮ ಹಾಸುಹೊಕ್ಕಾಗಿರಬೇಕು. ಆದರೆ ಆ ಪ್ರೇಮ ವ್ಯಾಮೋಹದಿಂದ ಮುಕ್ತವಾಗಿರಬೇಕು. ಅತಿಶಯವಾದ ಸಾಹಸ ಬದುಕಿಗೆ ಶೋಭೆಯೇ. ಆದರೆ ಆ ಸಾಹಸ ಹಗೆತನಕ್ಕೆ ಇಂಬುಕೊಡುವಂತಿರಬಾರದು. ಜೀವನದಲ್ಲಿ ನಿಯಮ ನಿಷ್ಠೆಗಳೆಲ್ಲ ವಿಹಿತವೇ. ಆದರೆ ಆಡಂಬರ ಕಠೋರತೆಗಳಿಂದ ದೂರವಾಗಿರಬೇಕು. ಸೌಮ್ಯವಾದ ಗುಣ ಎಲ್ಲಾ ಕಡೆಯಿರಬೇಕು. ಸೌಜನ್ಯ ಸಜ್ಜನಿಕೆಗಳು ಬದುಕಿನ ಉಚ್ಚತರವಾದ ಗುಣಗಳು. ಸಮಾಜದ ಸ್ವಾಸ್ಥ್ಯಕ್ಕೆ ಹಾಗೂ ವ್ಯಕ್ತಿಗತವಾದ ಉನ್ನತಿಗೆ ಅಂತಹ ಗುಣಗಳು ಮುಖ್ಯ ಕಾರಣವಾಗುತ್ತವೆ. ಸಮಾಜದ ಸ್ವಸ್ಥ ರಾಷ್ಟ್ರದ ಪ್ರತೀಕವಾಗಿರುತ್ತದೆ.

**ಯಾವುದರಿಂದ ನಮಗೆ ನಷ್ಟವಾಗುವುದು?**

**ಕಷ್ಟ ಜೀವದ ಪಾಕ ಕಷ್ಟ ಧರ್ಮವಿವೇಕ**
**ಎಷ್ಟೆಷ್ಟು ನೀತಿಯುಕ್ತಿಗಳ ಬಗೆದಡೆಯುಂ।**
**ಇಷ್ಟಿಷ್ಟು ನಿನ್ನೊಳ್ ಒಳತಿಳಿವಿಲ್ಲದಿರೆ ನಷ್ಟ**
**ದೃಷ್ಟಿಸೂಕ್ಷ್ಮವೆ ಗತಿಯೊ – ಮಂಕುತಿಮ್ಮ॥**

**ಜೀವನ ಪಾಕವಾಗುವುದು ಕಷ್ಟ. ಧರ್ಮದ ವಿವೇಕವುಂಟಾಗುವುದು ಕಷ್ಟ. ಎಷ್ಟು ನೀತಿಯುಕ್ತಿಗಳನ್ನು ಅನುಸರಿಸಿದರೂ ಅಷ್ಟಿಷ್ಟು ಒಳ ತಿಳಿವು ಇಲ್ಲದಿದ್ದರೆ ನಷ್ಟವಾಗುವುದು. ಸೂಕ್ಷ್ಮವಾದ ದೃಷ್ಟಿಯೇ ನಮಗೆಲ್ಲ ಗತಿ.**

ಜಗತ್ತಿನಲ್ಲಿ ಯಾವುದೇ ಸಾಧನೆ ಪರಿಶ್ರಮದ ಮೂಲದಿಂದ ಉಂಟಾಗುತ್ತದೆ. ಸಕ್ಕರೆ ಪಾಕವಾಗಬೇಕಾದರೆ ಬಹಳಷ್ಟು ಹೊತ್ತು ಕುದಿಯಬೇಕಾಗುತ್ತದೆ. ಜೀವನಾನುಭವದ ಪಾಕವೂ ಹಾಗೆಯೇ. ಜೀವನದಲ್ಲಿ ಆಳವಾದ ಅನುಭವ ಉಂಟಾಗಬೇಕಾದರೆ ಅದೆಷ್ಟೋ ಕಷ್ಟನಷ್ಟಗಳನ್ನು ಎದುರಿಸಬೇಕಾಗುತ್ತದೆ. ಧರ್ಮದ ಜ್ಞಾನವೂ ಸುಲಭಸಾಧ್ಯವಲ್ಲ. ಎಷ್ಟೇ ಅಧ್ಯಯನ ಮಾಡಲಿ, ಎಷ್ಟೇ ನೀತಿಗಳನ್ನು, ಯುಕ್ತಿಗಳನ್ನು ತಿಳಿದಿರಲಿ, ಅಷ್ಟಿಷ್ಟು ಒಳತಿಳಿವು ಇಲ್ಲದಿದ್ದರೆ ಆ ಎಲ್ಲಾ ಜ್ಞಾನವೂ ನಷ್ಟವಾದಂತೆ. ಈ ಕಾರಣದಿಂದಲೇ ಪ್ರತ್ಯಕ್ಷವಾಗಿ ಕಂಡರೂ ಪರಾಂಬರಿಸಿ ನೋಡು, ಎಂದು ನಮ್ಮ ಹಿರಿಯರು ಸೂಚಿಸಿದ್ದು. ಯಾವುದೇ ವ್ಯವಹಾರದಲ್ಲಿಯಾದರೂ ಒಂದು ಸೂಕ್ಷ್ಮವಾದ ದೃಷ್ಟಿಯಿರಬೇಕಾಗುತ್ತದೆ. ವಿವೇಕವನ್ನು ಬಳಸಬೇಕಾಗುತ್ತದೆ. 'ದೃಷ್ಟಿಪೂತಂ ನ್ಯಸೇತ್ ಪಾದಂ, ವಸ್ತ್ರಪೂತಂ ಪಿಬೇತ್ ಜಲಂ, ಶಾಸ್ತ್ರಪೂತಂ ವದೇತ್ ವಾಕ್ಯಂ, ಮನಃಪೂತಂ ಸಮಾಚರೇತ್.' ಹೆಜ್ಜೆಯಿಡಬೇಕಾದರೆ ದೃಷ್ಟಿಯಿಂದ ಪರಿಶೋಧಿಸಬೇಕು. ನೀರನ್ನು ವಸ್ತ್ರದಿಂದ ಶೋಧಿಸಿ ಕುಡಿಯಬೇಕು. ಶಾಸ್ತ್ರದಿಂದ ಶೋಧಿಸಿ ಮಾತುಗಳನ್ನಾಡಬೇಕು. ಮನಸ್ಸಿನಿಂದ ಶೋಧಿಸಿ ಆಚರಣೆಯನ್ನು ಮಾಡಬೇಕೆಂದು ಈ ಸುಭಾಷಿತ ಹೇಳುತ್ತದೆ. ಒಂದಷ್ಟು ಲೋಕಜ್ಞಾನ, ಒಂದಷ್ಟು ಶಾಸ್ತ್ರಜ್ಞಾನ, ಒಂದಷ್ಟು ವಿವೇಕ ಇವೆಲ್ಲಾ ಇದ್ದರೆ ಜೀವನ ಸುಗಮವಾಗುತ್ತದೆ. 'ವಿವೇಕ ಭ್ರಷ್ಟಾನಾಂ ಭವತಿ ವಿನಿಪಾತಃ ಶತಮುಖಃ' ವಿವೇಕವಿಲ್ಲದ ವ್ಯವಹಾರಕ್ಕೆ ನೂರಾರು ಮುಖಗಳಿಂದ ಅಧಃಪತನವುಂಟಾಗುತ್ತದೆ. ವಿವೇಕ ಅಷ್ಟು ಸುಲಭವಾಗಿ ಮೂಡುವುದಿಲ್ಲ. ಮನಸ್ಸನ್ನು ನಿರಂತರವಾಗಿ ಶೋಧಿಸಿಕೊಳ್ಳಬೇಕಾಗುತ್ತದೆ. ಬುದ್ಧಿಯ ಪರಿಷ್ಕಾರಕ್ಕೊಳಪಡಬೇಕಾಗುತ್ತದೆ. ಕಷ್ಟದ ಪಾಕದಿಂದಲೇ ಅದು ರೂಪಿತವಾಗಬೇಕು.

**ಮನಸ್ಸಿಗೆ ಹಾಗೂ ಬುದ್ಧಿಗೆ ಯಾವುದು ವ್ಯಾಯಾಮ**

**ಪರಿಪರಿಪರೀಕ್ಷೆಗಳು ಪರಿಭವದ ಶಿಕ್ಷೆಗಳು**
**ಗರಡಿಯ ವ್ಯಾಯಾಮ ಮನಬುದ್ಧಿಗಳಿಗೆ।**
**ಪುರುಷತೆಗೆ ಪೆಟ್ಟುಗಳಿನಾದ ಗಂತಿಯೆ ವಿಜಯ**
**ಬಿರಿದ ನನೆ ಫಲಕೆ ಮನೆ – ಮಂಕುತಿಮ್ಮ॥**

**ನಾನಾ ರೀತಿಯ ಪರೀಕ್ಷೆಗಳು, ಸೋಲಿನ ಶಿಕ್ಷೆಗಳು, ಮನಸ್ಸು ಬುದ್ಧಿಗಳಿಗೆ ಗರಡಿಯ ವ್ಯಾಯಾಮವಿದ್ದ ಹಾಗೆ. ಪೌರುಷಕ್ಕೆ ಪೆಟ್ಟುಗಳಿಂದ ಉಂಟಾದ ಗಡ್ಡೆಯೇ ಜಯ. ಮೊಗ್ಗು ಬಿರಿದಾಗ ಅದು ಹಣ್ಣಿಗೆ ಮನೆಯಾಗುತ್ತದೆ.**

ಜೀವಿ ಭೂಲೋಕಕ್ಕೆ ಬಂದ ತಕ್ಷಣ ಅವನ ಬದುಕಿನ ಪುಟಗಳು ಒಂದೊಂದೇ ತೆರೆದುಕೊಳ್ಳುತ್ತವೆ. ಹಗಲು ರಾತ್ರಿಗಳಂತೆ ಸಂಜೆ ಉಷೆಗಳಂತೆ ಕಷ್ಟಸುಖಗಳು ಬದುಕಿನುದ್ದಕ್ಕೂ ಹಾದು ಹೋಗುತ್ತಿರುತ್ತವೆ. ನಾನಾ ರೀತಿಯ ಪರೀಕ್ಷೆಗಳನ್ನು, ಸೋಲಿನ

ಶಿಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಸಂಪೂರ್ಣವಾಗಿ ಸುಖವನ್ನೇ ಅನುಭವಿಸಿದ ಅಥವಾ ಸಂಪೂರ್ಣ ಕಷ್ಟವನ್ನೇ ಅನುಭವಿಸಿದ ಜೀವಿ ಎಲ್ಲೂ ಕಾಣಸಿಗುವುದಿಲ್ಲ. ಮಾನ್ಯ ಗುಂಡಪ್ಪನವರು ಇಂತಹ ಕಷ್ಟಗಳು, ಸೋಲುಗಳು ಮನುಷ್ಯನಿಗೆ ಜೀವನದಲ್ಲಿ ಒಳ್ಳೆಯ ಪಾಠ ಕಲಿಸಿ ವಿವೇಕಿಯನ್ನಾಗಿ ಮಾಡುತ್ತವೆ ಎಂದು ಅಭಿಪ್ರಾಯಪಡುತ್ತಾರೆ. ಅವು ಮನುಷ್ಯನ ಮನಸ್ಸಿಗೆ ಹಾಗೂ ಬುದ್ಧಿಗೆ ವ್ಯಾಯಾಮವನ್ನು ನೀಡಿ ಗಟ್ಟಿ ಮಾಡುತ್ತವೆ. ಪೌರುಷಕ್ಕೆ ಆಗಾಗ್ಗೆ ಬೀಳುವ ಪೆಟ್ಟುಗಳು ಅವನನ್ನು ಸರಿಯಾದ ರೀತಿಯಲ್ಲಿ ಬದುಕಿಗೆ ತಯಾರು ಮಾಡುತ್ತವೆ. ಆ ಗಟ್ಟಿತನವೇ ಮುಂದೆ ಜೀವನದಲ್ಲಿ ಯಶಸ್ಸು ಪಡೆಯಲು ತಳಹದಿಯಾಗುತ್ತದೆ. ಮೊಗ್ಗು ತಾನು ಬಿರಿಯಲಾರೆ ಎಂದು ಹಾಗೇ ಕುಳಿತರೆ ಮುಂದೆ ಅದು ಹಣ್ಣಿಗೆ ಮನೆಯಾಗದು. ಬದುಕಿನಲ್ಲಿ ಕಷ್ಟಗಳಿಗೂ ತನ್ನದೇ ಆದ ಮಹತ್ವವಿರುತ್ತದೆ. ಮೊಟ್ಟೆಯಿಂದ ಹೊರಬರಬೇಕಾದರೆ ಚಿಟ್ಟೆ ಅದೆಷ್ಟು ಹೆಣಗಾಡುತ್ತದೆ! ಆ ಒದ್ದಾಟದಿಂದಲೇ ಗಟ್ಟಿತನವನ್ನು ಪಡೆದು, ಹಾರಲು ಶಕ್ತವಾಗುತ್ತದೆ. ಆದರೆ ಆ ಮೊಟ್ಟೆಯನ್ನು ಒಡೆದು ಅದಕ್ಕೆ ಹೊರಬರಲು ಅನುವು ಮಾಡಿಕೊಟ್ಟರೆ ಅದು ಅಲ್ಲಿಯೇ ಅದು ಅಲ್ಲಿಯೇ ಕೆಳಕ್ಕೆ ಬಿದ್ದು ಸತ್ತುಹೋಗುತ್ತದೆ. ಆದ್ದರಿಂದ ನಮಗೆ ಕಷ್ಟಗಳು ಬಂದಾಗ, ನಾವು ಜೀವನದಲ್ಲಿ ಸೋಲನ್ನು ಅನುಭವಿಸಿದಾಗ ನಾವೆಂದೂ ಕುಗ್ಗಿ ಹೋಗಬಾರದು. ಅದೊಂದು ನಮ್ಮ ಜೀವನಕ್ಕೆ ತರಬೇತಿ ಎಂದು ತಿಳಿದರೆ ಸಾಕು. ಸಕಲ ಜಯದ ಮೂಲವೂ ಅದೇ ಎಂದು ತಿಳಿಯಬೇಕು.

**ಜೀವನದ ತಿರುಳು ಎಂಥದು?**

**ದ್ರಾಕ್ಷಿರಸವೇನಲ್ಲ ಜೀವನದ ತಿರುಳಾರ್ಗಂ**
**ಇಕ್ಷುದಂಡದವೊಲದು ಕಷ್ಟಭೋಜನವೆ।**
**ದಕ್ಷತೆಯನಿಡಿಯುವಂಗೊಂದೆರಡು ಗುಟುಕು ರಸ**
**ಮಾಕ್ಷಿಕರು ಮಿಕ್ಕೆಲ್ಲ – ಮಂಕುತಿಮ್ಮ॥**

**ಯಾರಿಗೂ ಜೀವನದ ತಿರುಳು ದ್ರಾಕ್ಷಿಯಂತೆ ಸುಲಭವಲ್ಲ. ಕಬ್ಬಿನ ಜಲ್ಲೆಯಂತೆ ಅದು ಕಷ್ಟಕರವಾದ ಭೋಜನವೇ. ದಕ್ಷತೆಯಿಂದ ಅದನ್ನು ಹಿಡಿಯುವವನಿಗೆ ಒಂದೆರಡು ಗುಟುಕು ರಸ ಸಿಗುತ್ತದೆ. ಉಳಿದವರೆಲ್ಲ ನೊಣಗಳಷ್ಟೇ.**

ಜೀವನದ ಸಾರ ಯಾರಿಗೂ ದ್ರಾಕ್ಷಾರಸದಂತೆ ಸುಲಭಸಾಧ್ಯವಲ್ಲ. ಅದು ಕಬ್ಬಿನ ಜಲ್ಲೆಯಂತೆ ಕಷ್ಟಭೋಜನವೇ ಆಗಿರುತ್ತದೆ. ಕಬ್ಬಿನ ಕೋಲನ್ನು ಹಿಡಿದಾಕ್ಷಣ ರಸದ ಆಸ್ವಾದನೆ ಸಿಕ್ಕಲಾರದು. ಹಲ್ಲಿನಿಂದ ಬಲವಾಗಿ ಅದರ ಸಿಪ್ಪೆಯನ್ನು ಜಗ್ಗಿ ಎಳೆಯಬೇಕು. ನಂತರ ಒಳ ತಿರುಳನ್ನು ಜಗಿದು ಜಗಿದು ರಸವನ್ನು ಪಡೆಯಬೇಕು. ಕಬ್ಬಿನ ರಸವನ್ನು ಗಾಣದಿಂದ ತೆಗೆದು ಕುಡಿಯುವುದಕ್ಕಿಂತ ಸ್ವತಃ ಕಬ್ಬಿನ ಕೋಲನ್ನು ಆಸ್ವಾದಿಸಿದರೆ ಮನಸ್ಸಿಗೆ ಏನೋ ಒಂದು ರೀತಿಯ ಉಲ್ಲಾಸ. ಹಾಗೆ ಕಷ್ಟಪಟ್ಟು ಪ್ರಯತ್ನಿಸಿದರೆ ಕಬ್ಬಿನ ಒಂದೆರಡು ಗುಟುಕು ರಸ ಸಿಗುತ್ತದೆ. ಅದಕ್ಕೆ ದಕ್ಷತೆ ಬೇಕಾಗುತ್ತದೆ. ಅಂತಹ ಪ್ರಯತ್ನ ಪಡದೇ ರಸಾಸ್ವಾದವನ್ನು ಪಡೆಯಬೇಕೆನ್ನುವವರು ಕೇವಲ ನೊಣಗಳಷ್ಟೇ.

ವಚನಭಾಗವತ

ಲೇ: ತ. ಸು. ಶಾಮರಾಯ

# ಶ್ರೀರಾಮಚಂದ್ರ

ಕಲ್ಮಾಷಪಾದರಾಜನ ಮಗ ಅಶ್ಮಕನು ತನ್ನ ಮಗನಿಗೆ ರಾಜ್ಯವನ್ನು ಕೊಟ್ಟು ಅರಣ್ಯಕ್ಕೆ ಹೋಗಲು, ಪರಶುರಾಮನು ಕ್ಷತ್ರಿಯವಂಶವನ್ನೇ ನಿರ್ಮೂಲಮಾಡುವುದಕ್ಕಾಗಿ ಗಂಡುಗೊಡಲಿಯನ್ನು ಹಿಡಿದು ಬಂದನು. ಆಗ ಇನ್ನೂ ಬಾಲಕನಾಗಿದ್ದ ಅಶ್ಮಕ ಪುತ್ರನನ್ನು ಅಂತಃಪುರದವರು ತಮ್ಮ ಮಧ್ಯದಲ್ಲಿ ಬಚ್ಚಿಟ್ಟುಕೊಂಡು ಕಾಪಾಡಿದರು. ಇದರಿಂದ ಆ ಬಾಲಕನಿಗೆ 'ನಾರೀಕವಚ' ಎಂದು ಹೆಸರಾಯಿತು. ಪರಶುರಾಮನಿಂದ ಕ್ಷತ್ರಿಯ ವಂಶವೆಲ್ಲವೂ ನಾಶವಾಗಿಹೋಗಲು ಅದನ್ನು ಅಳಿಯದಂತೆ ಉಳಿಸಲು ಈತನೇ ಕಾರಣನಾದುದರಿಂದ ಈತನಿಗೆ 'ಮೂಲಕ' ಎಂಬ ಹೆಸರೂ ಉಂಟು. ಇವನ ಮರಿಮಗ ಖಟ್ವಾಂಗ. ಆತನು ಚಕ್ರವರ್ತಿಯಾಗಿ ಜಗತ್ತನ್ನೆಲ್ಲ ತನ್ನ ಕೊಡೆಯ ನೆರಳಿನಲ್ಲಿ ಸುರಕ್ಷಿತವಾಗಿಟ್ಟಿದ್ದನು. ಅಷ್ಟೇ ಅಲ್ಲ. ದೇವತೆಗಳಿಗೆ ಕಷ್ಟ ಬಂದಾಗಲೆಲ್ಲ ಈತ ಅವರ ಸಹಾಯಕ್ಕೆ ಹೋಗುತ್ತಿದ್ದನು. ಒಮ್ಮೆ ದೇವದಾನವ ಯುದ್ಧದಲ್ಲಿ ಈತನು ರಕ್ಕಸರನ್ನೆಲ್ಲ ಒಕ್ಕಲಿಕ್ಕಿ ಓಡಿಸಿದನು. ಸಂತೋಷಗೊಂಡ ದೇವತೆಗಳು ಬೇಕಾದ ವರವನ್ನು ಕೊಡುವುದಾಗಿ ಆತನಿಗೆ ತಿಳಿಸಿದರು. ಖಟ್ವಾಂಗನು ಅವರನ್ನು ಕುರಿತು 'ನನಗೆ ಇನ್ನೂ ಆಯುಷ್ಯವಿದೆ?' ಎಂದು ಕೇಳಿದ. ಅವರು 'ಇನ್ನು ಎರಡು ಗಳಿಗೆಗಳು ಮಾತ್ರ' ಎಂದರು. ಒಡನೆಯೆ ಖಟ್ವಾಂಗನು ತನ್ನ ರಾಜಧಾನಿಗೆ ಹಿಂದಿರುಗಿ, ತನಗಿದ್ದ ಎರಡು ಗಳಿಗೆಗಳ ಅವಧಿಯಲ್ಲಿಯೇ ಆತ್ಮಾನುಸಂಧಾನದಿಂದ ಪರಮಪುರುಷನಾದ ವಾಸುದೇವನನ್ನು ಮೆಚ್ಚಿಸಿ ಸದ್ಗತಿಯನ್ನು ಹೊಂದಿದನು. ಮಹಾನುಭಾವನಾದ ಖಟ್ವಾಂಗನ ಮಗ ದೀರ್ಘಬಾಹು, ಆತನ ಮಗ ರಘು, ರಘುವಿನ ಮಗ ಅಜ, ಅಜನ ಮಗ ದಶರಥ. ಈ ಪುಣ್ಯಶಾಲಿಯಾದ ದಶರಥನ ಮಗನೆ ಪುರಾಣಪುರುಷನಾದ ಶ್ರೀರಾಮಚಂದ್ರ. ವಾಲ್ಮೀಕಿ ಮಹರ್ಷಿ ಅದ್ವಿತೀಯವಾಗಿ ವರ್ಣಿಸಿರುವ ಈ ಪುರುಷೋತ್ತಮನ ಕಥೆ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರತಕ್ಕುದೆ. ಆ ಪುಣ್ಯಶ್ಲೋಕನ ಹೆಸರು ಲೋಕವನ್ನೆಲ್ಲ ಸಂರಕ್ಷಿಸಲಿ!

ವೇದಸ್ವರೂಪನಾದ ಶ್ರೀಹರಿಯು ದೇವತೆಗಳ ಮೊರೆಯನ್ನು ಕೇಳಿ, ಅವರನ್ನು ಸಂರಕ್ಷಿಸುವುದಾಗಿ ತನ್ನ ಬೇರೆ ಬೇರೆ

ಅಂಶಗಳಿಂದ ಶ್ರೀರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ನಾಲ್ವರು ಮಕ್ಕಳಾಗಿ ಹುಟ್ಟಿದನು. ಶ್ರೀರಾಮನು ಎಳೆಯ ಬಾಲಕನಾಗಿರುವಾಗಲೆ ತಮ್ಮನಾದ ಲಕ್ಷ್ಮಣನೊಡನೆ ವಿಶ್ವಾಮಿತ್ರರ ಆಶ್ರಮಕ್ಕೆ ಹೋಗಿ ಸುಬಾಹು, ಮಾರೀಚ ಮೊದಲಾದ ಅನೇಕ ರಾಕ್ಷಸರನ್ನು ಕೊಂದು ಹಾಕಿದನು. ಅಲ್ಲಿಂದ ಆತನು ಜನಕರಾಜನ ರಾಜಧಾನಿಯಾದ ಮಿಥಿಲೆಗೆ ಹೋದನು. ಮುನ್ನೂರು ಮಂದಿ ಪರಾಕ್ರಮಿಗಳು ರಥದಲ್ಲಿ ಎಳೆದುಕೊಂಡು ಬಂದ ಶಿವಧನುಸ್ಸನ್ನು, ಹೆದೆಯೇರಿಸುವ ನೆಪದಲ್ಲಿ, ಆನೆಯು ಕಬ್ಬಿನ ಜಲ್ಲೆಯನ್ನು ಮುರಿಯುವಂತೆ ಲೀಲಾಜಾಲವಾಗಿ ಮುರಿದು, ಸುರಸುಂದರಿಯಾದ ಸೀತೆಯನ್ನು ಮದುವೆ ಮಾಡಿಕೊಂಡನು. ಆಕೆ ಮತ್ತಾರೂ ಅಲ್ಲ, ಸಾಕ್ಷಾತ್ ಲಕ್ಷ್ಮಿ. ಶ್ರೀರಾಮಚಂದ್ರನು ಆಕೆಯನ್ನು ತನ್ನೊಡನೆ ಅಯೋಧ್ಯೆಗೆ ಕರೆತರುತ್ತಿರಲು, ಕ್ಷತ್ರಿಯ ವಂಶಕ್ಕೆ ಮೃತ್ಯುವಿನಂತಿದ್ದ ಪರಶುರಾಮನು ಆತನನ್ನು ಇದಿರಿಸಿದನು. ಶ್ರೀರಾಮನು ಆತನ ಗರ್ವವನ್ನು ನಾಶಮಾಡಿ ಊರಿಗೆ ಹಿಂದಿರುಗಿದನು. ದಶರಥನು ತನ್ನ ಕಣ್ಮಣಿಯಂತಿದ್ದ ಈ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದಿರಲು, ಆತನ ಕಿರಿಯ ಹೆಂಡತಿಯಾದ ಕೈಕೇಯಿ, ಅದಕ್ಕೆ ಅಡ್ಡಿಯನ್ನು ತಂದೊಡ್ಡಿದಳು. ಹಿಂದೆ ದಶರಥ ತನಗೆ ಕೊಟ್ಟಿದ್ದ ಎರಡು ವರಗಳನ್ನು ಮುಂದೆ ಮಾಡಿ, ಅವುಗಳಲ್ಲಿ ಒಂದರಿಂದ ಶ್ರೀರಾಮನನ್ನು ಅಡವಿಗೆ ಅಟ್ಟಬೇಕೆಂದೂ, ಮತ್ತೊಂದರಿಂದ ತನ್ನ ಮಗ ಭರತನಿಗೆ ಪಟ್ಟಗಟ್ಟಬೇಕೆಂದೂ ಬೇಡಿದಳು. ಸತ್ಯಸಂಧನಾದ ದಶರಥನು ಮಾತಿಗೆ ಕಟ್ಟುಬಿದ್ದು ಸಂಕಟ ಪಡುತ್ತಿರಲು, ಇದನ್ನು ಕೇಳಿದ ಶ್ರೀರಾಮನು ಸೀತಾಲಕ್ಷ್ಮಣರೊಡನೆ ತಾನಾಗಿಯೇ ಕಾಡಿಗೆ ಹೊರಟು ಹೋದನು.

ವನವಾಸಕ್ಕೆ ಹೋದ ಶ್ರೀರಾಮನು ಪರಿಪರಿಯ ಕಷ್ಟಗಳನ್ನು ಅನುಭವಿಸಬೇಕಾಯಿತು. ಆತನು ದಂಡಕಾರಣ್ಯದಲ್ಲಿದ್ದಾಗ ರಾವಣನ ತಂಗಿಯಾದ ಶೂರ್ಪಣಖಿ ಆತನನ್ನು ಮೋಹಿಸಿದಳು. ಅವಳ ನಿರ್ಬಂಧವನ್ನು ಸಹಿಸಲಾರದೆ ಅವಳ ಕಿವಿ ಮೂಗುಗಳನ್ನು ಕೊಯ್ದು ಓಡಿಸಬೇಕಾಯಿತು. ಇದನ್ನು ಕೇಳಿ ಅವಳ ಬಂಧುಗಳಾದ ಖರದೂಷಣರು ಮೊದಲಾದ ಹದಿನಾಲ್ಕು ಸಹಸ್ರಜನ ರಕ್ಕಸರು ಏಕಕಾಲದಲ್ಲಿ ಶ್ರೀರಾಮನ ಮೇಲೆ ಬಿದ್ದರು. ಅಷ್ಟು ಜನರನ್ನೂ ಆತನು ಕ್ಷಣಮಾತ್ರದಲ್ಲೇ ಕೊಂದು ಹಾಕಿದನು. ಇದನ್ನು ಶೂರ್ಪಣಖಿಯು ರಾವಣನಿಗೆ ತಿಳಿಸಿ, ಸೀತೆಯ ಸೌಂದರ್ಯವನ್ನು ಬಾಯಲ್ಲಿ ನೀರುಕ್ಕುವಂತೆ ವರ್ಣಿಸಿದಳು. ಕಾಮುಕನಾದ ರಾವಣನು ಆಕೆಯನ್ನು ಕದ್ದು ತರುವುದಕ್ಕಾಗಿ ಮಾರೀಚನ ಸಹಾಯವನ್ನು ಕೋರಿದನು. ಆ ಮಾರೀಚ ಮಾಯೆಯ ಜಿಂಕೆಯಾಗಿ ಸುಳಿದು ಸೀತಾರಾಮರನ್ನು ಮರುಳುಗೊಳಿಸಿದ. ಸೀತೆಯ ಅಪೇಕ್ಷೆಯಂತೆ ಶ್ರೀರಾಮ ಆ ಮೃಗವನ್ನು ಹಿಡಿದು ತರಲೆಂದು ಹೊರಟ. ಅದು ಅವನನ್ನು ಬಹುದೂರದವರೆಗೆ ಸೆಳೆದುಕೊಂಡು ಹೋಯಿತು. ಕೊನೆಗೆ ಅದು ರಾಕ್ಷಸನ ಮಾಯೆಯೆಂದು ತಿಳಿದ ಶ್ರೀರಾಮನು ಅದನ್ನು ಬಾಣದಿಂದ ಹೊಡೆದು ಕೊಂದ. ಅದು ಸಾಯುವಾಗ 'ಲಕ್ಷ್ಮಣಾ, ಸೀತೇ' ಎಂದು ಕೂಗಿ ಸತ್ತಿತು. ಶ್ರೀರಾಮನ ದನಿಯಲ್ಲಿ ಅದು ಕೂಗಿದುದರಿಂದ ಲಕ್ಷ್ಮಣ ಆ ದನಿ ಬಂದ ದಿಕ್ಕಿಗೆ ಹೊರಟ. ಆ ಸಮಯವನ್ನೇ ಕಾದಿದ್ದ ರಾವಣ ಸನ್ಯಾಸಿವೇಷದಿಂದ ಬಂದು ಸೀತೆಯನ್ನು ಕದ್ದೊಯ್ದ. ರಾಮ ಲಕ್ಷ್ಮಣರು ಹಿಂತಿರುಗಿ ಸೀತೆಯನ್ನು ಕಾಣದೆ ಕಳವಳಿಸಿದರು. ಸ್ತ್ರೀಮೋಹ ಎಷ್ಟು ಭಯಂಕರವೆಂಬುದನ್ನು ನಟಿಸಿ ತೋರಿಸುವವನಂತೆ ಶ್ರೀರಾಮನು ಅತ್ತು ಅತ್ತು ಸಣ್ಣಗಾಗಿ ಹೋದ. ಆತ ಲಕ್ಷ್ಮಣನೊಡನೆ ಸೀತೆಯನ್ನು ಹುಡುಕುತ್ತಾ ಹೊರಡಲು ಹಾದಿಯಲ್ಲಿ ಸಾಯುತ್ತ ಬಿದ್ದಿದ್ದ ಜಟಾಯು ಕಾಣಿಸಿದ. ಆತ ಸೀತೆಯನ್ನು ಬಿಡಿಸುವುದಕ್ಕಾಗಿ ರಾವಣನೊಡನೆ ಹೋರಾಡಿ ನೆಲಕ್ಕೆ ಉರುಳಿದ್ದ. ತನಗಾಗಿ ಜೀವವನ್ನು ತೆತ್ತ ಆ ಹಕ್ಕಿಗೆ ಶ್ರೀರಾಮನು ಉತ್ತರಕ್ರಿಯೆಗಳನ್ನು ಮಾಡಿ ಸದ್ಗತಿಯನ್ನು ಕಾಣಿಸಿದ. ಅಲ್ಲಿಂದ ಮುಂದೆ ಕಬಂಧನೆಂಬ ರಾಕ್ಷಸನನ್ನು ಕೊಂದು, ಋಷ್ಯಮೂಕಪರ್ವತಕ್ಕೆ ಹೋದನು. ಅಲ್ಲಿ ಸುಗ್ರೀವನೆಂಬ ಕಪಿರಾಜನ ಸ್ನೇಹವಾಯಿತು. ಆ ಸುಗ್ರೀವನನ್ನು ಹಿಂಸಿಸುತ್ತಿದ್ದ ಅವನ ಅಣ್ಣನಾದ ವಾಲಿಯನ್ನು ಕೊಂದು ಶ್ರೀರಾಮನು ಸುಗ್ರೀವನಿಗೆ ಪಟ್ಟಾಭಿಷೇಕ ಮಾಡಿದನು. ಆ ಕಪಿರಾಜನು ಆಂಜನೇಯಾದಿ ಕಪಿಗಳಿಂದ ಸೀತೆಯಿರುವ ಸ್ಥಳವನ್ನು ಕಂಡುಹಿಡಿದನು. ಶ್ರೀರಾಮನು ಕಪಿಸೇನೆಯೊಡನೆ ರಾವಣಾಸುರನ ಲಂಕೆಯ ಮೇಲೆ ದಂಡೆತ್ತಿ ಹೊರಟನು. ಹಾದಿಯಲ್ಲಿ ಸಮುದ್ರ ಅಡ್ಡವಾಗಿತ್ತು. ತನಗೆ ಹಾದಿಯನ್ನು ಕೊಡುವಂತೆ ಶ್ರೀರಾಮ ಸಮುದ್ರರಾಜನನ್ನು ಬೇಡಿದ. ಮೂರು ದಿನದವರೆಗೆ ಬೇಡಿದರೂ ಅವನು ಮೌನವಾಗಿರಲು ಶ್ರೀರಾಮನಿಗೆ ರೇಗಿಹೋಯಿತು. ಆತ ಒಮ್ಮೆ ಕೆಂಗಣ್ಣಿನಿಂದ ಸಮುದ್ರದತ್ತ ನೋಡುತ್ತಲೆ ಅದು ಕುದಿದುಹೋಯಿತು. ಸಮುದ್ರರಾಜನು ಮನುಷ್ಯರೂಪದಿಂದ ಓಡಿಬಂದು, ಶ್ರೀರಾಮನ ಪಾದಗಳಿಗೆ ಅಡ್ಡಬಿದ್ದು 'ಸ್ವಾಮಿ, ನೀನು ಯಾರೆಂದು ತಿಳಿಯದೆ ನಾನು ಮಾಡಿದ ಅಪರಾಧವನ್ನು ಕ್ಷಮಿಸು. ನೀನು ಆದಿಪುರುಷನೆಂದು ನನಗೀಗ ಗೊತ್ತಾಗಿದೆ. ನೀನು ನನ್ನ ನೀರಿನಮೇಲೆ ಅಗತ್ಯವಾಗಿಯೂ ಸೇತುವೆಯನ್ನು ಕಟ್ಟಿ, ನಿನ್ನ ಮನಬಂದಂತೆ ಸಂಚರಿಸು. ಆ ಸೇತುವೆ ನಿನ್ನ ಕೀರ್ತಿಗೆ ಸ್ಮಾರಕವಾಗಲಿ' ಎಂದನು. ಅನಂತರ ಶ್ರೀರಾಮನ ಅಪ್ಪಣೆಯಂತೆ ಸೇತುವೆ ನಿರ್ಮಾಣವಾಯಿತು. ಕಪಿಸೇನೆ ಲಂಕೆಯನ್ನು ಪ್ರವೇಶಿಸಿ ಕೈಗೆ ಸಿಕ್ಕುದನ್ನು ಧ್ವಂಸಮಾಡುತ್ತಾ ಹೋಯಿತು. ರಾವಣನು ತನ್ನ ಸೈನ್ಯವನ್ನು ಕಪಿಸೇನೆಯ ಮೇಲೆ ಯುದ್ಧಕ್ಕೆ ಕಳುಹಿಸಿದನು. ಘನಘೋರವಾದ ಯುದ್ಧ ನಡೆದು ಕುಂಭ, ನಿಕುಂಭ, ದೇವಾಂತಕ, ನರಾಂತಕ, ಇಂದ್ರಜಿತ್ತು, ಪ್ರಹಸ್ತ, ಕುಂಭಕರ್ಣ ಮೊದಲಾದ ರಾಕ್ಷಸವೀರರೆಲ್ಲ ಸತ್ತುಹೋದರು. ಕಡೆಗೆ ರಾವಣನೆ ಶ್ರೀರಾಮನೊಡನೆ ಯುದ್ಧಕ್ಕೆ ನಿಂತನು. ಶ್ರೀರಾಮನು ದೇವೇಂದ್ರನು ಕಳುಹಿಸಿದ್ದ ದಿವ್ಯ ರಥವನ್ನೇರಿ ಅವನೊಡನೆ ಯುದ್ಧ ಮಾಡುತ್ತಾ 'ಎಲಾ ನೀಚ, ಜನರಿಲ್ಲದ ಮನೆಯೊಳಗೆ ನುಗ್ಗಿ ಆಹಾರವನ್ನು ಕದ್ದೊಯ್ಯುವ ನಾಯಿಯಂತೆ, ನಾನಿಲ್ಲದಾಗ ನನ್ನ ಆಶ್ರಮದಿಂದ ನನ್ನ ಮಡದಿಯನ್ನು ಕದ್ದೊಯ್ದೆಯಲ್ಲವೆ? ನೀನು ನಾಚಿಕೆಯಿಲ್ಲದೆ ಹೇಗೆ ತಾನೆ ನನ್ನೆದುರಿಗೆ ನಿಂತಿರುವೆ? ನಾನೆ ನಿನ್ನ ಮೃತ್ಯು. ಇಗೋ ನಿನ್ನ ಪಾಪಕ್ಕೆ ತಕ್ಕ ಫಲ' ಎಂದು ಹೇಳಿ ತನ್ನ ಅಮೋಘವಾದ ಬಾಣದಿಂದ ಅವನನ್ನು ಕೊಂದು ಹಾಕಿದನು.

ರಾವಣನ ಸಂಹಾರವಾದಮೇಲೆ ಶ್ರೀರಾಮನು ವಿಭೀಷಣನನ್ನು ಲಂಕೆಯ ರಾಜನನ್ನಾಗಿ ಮಾಡಿ, ಪುಷ್ಪಕವಿಮಾನದಲ್ಲಿ ಸೀತಾದೇವಿಯೊಡನೆ ಕಪಿವೀರರನ್ನೂ ರಾಕ್ಷಸವೀರರನ್ನೂ ಕರೆದುಕೊಂಡು ಅಯೋಧ್ಯೆಗೆ ಹಿಂದಿರುಗಿದನು. ದಾರಿಯಲ್ಲಿ



ಭಾರತದ ಪ್ರಥಮ ಕೃತಕ ಉಪಗ್ರಹ – ಆರ್ಯಭಟ

ದೇವಾನುದೇವತೆಗಳೆಲ್ಲ ಆತನಿಗೆ ಕಾಣಿಕೆಗಳನ್ನು ಒಪ್ಪಿಸಿ, ಆತನ ಕೀರ್ತಿಯನ್ನು ಹಾಡಿ ಹರಸಿದರು. ಅವುಗಳನ್ನು ಕೈಕೊಳ್ಳುತ್ತಾ ಶ್ರೀರಾಮನು ಅಯೋಧ್ಯೆಯ ಬಳಿಯಿದ್ದ ನಂದೀಗ್ರಾಮಕ್ಕೆ ಬಂದು, ಅಲ್ಲಿ ತನ್ನನ್ನೆ ನಿರೀಕ್ಷಿಸುತ್ತಾ ಋಷಿಯಂತೆ ಬಾಳನ್ನು ನಡೆಸುತ್ತಿದ್ದ ಭರತನನ್ನು ಕಂಡು ಅವನನ್ನು ಬಾಚಿ ತಬ್ಬಿಕೊಂಡನು. ಅನಂತರ ಅವನು ಸಕಲ ಪರಿವಾರದೊಡನೆ ಅಯೋಧ್ಯೆಯನ್ನು ಸೇರಿ, ವೈಭವದಿಂದ ಪಟ್ಟಾಭಿಷಿಕ್ತನಾದನು. ರಾಮರಾಜ್ಯವು ಸರ್ವಸುಖಕ್ಕೂ ಗಾದೆಯ ಮಾತಾಯಿತು. ಅದು ತ್ರೇತಾಯುಗವಾದರೂ ಶ್ರೀರಾಮನ ಪ್ರಭಾವದಿಂದ ಕೃತಯುಗವೆಂಬಷ್ಟು ಧರ್ಮದಿಂದ ತುಂಬಿಹೋಯಿತು. ಶ್ರೀರಾಮನು ಏಕಪತ್ನೀವ್ರತಸ್ಥನಾಗಿದ್ದುಕೊಂಡು, ಅನೇಕ ಯಜ್ಞಯಾಗಾದಿಗಳಿಂದ ಭುವಿ ಬಾನುಗಳೆರಡರಲ್ಲಿಯೂ ಸುಖ ಸಂತೋಷಗಳನ್ನು ಅನುಭವಿಸುತ್ತಾ ಹತ್ತು ಸಹಸ್ರ ವರ್ಷಗಳವರೆಗೆ ರಾಜ್ಯಭಾರಮಾಡುತ್ತಿದ್ದನು. ಇದೊಂದು ದೊಡ್ಡ ಅಚ್ಚರಿ. ಸರ್ವ ಲೋಕೇಶ್ವರನಾದ ಆತನು ಯಾಗ ಮಾಡುವುದರ ಮೂಲಕ ತನ್ನನ್ನು ತಾನೆ ಪೂಜಿಸಿಕೊಳ್ಳುತ್ತಿದ್ದನು.

ದೇವದೇವನು ಎಲ್ಲರ ಮನಸ್ಸಿನಲ್ಲಿಯೂ ಮಾನವನಾಗಿ ಹುಟ್ಟಿದಾಗ ಮಾನವನಂತೆಯೆ ವ್ಯವಹರಿಸಬೇಕಷ್ಟೆ! ತನ್ನ ರಾಜ್ಯಭಾರದ ವಿಷಯವಾಗಿ ಜನರ ಅಭಿಪ್ರಾಯವೇನೆಂಬುದನ್ನು ತಿಳಿಯುವುದಕ್ಕಾಗಿ ಆತನು ವೇಷವನ್ನು ಮರೆಸಿಕೊಂಡು ಊರಿನಲ್ಲೆಲ್ಲ ಸಂಚರಿಸುತ್ತಿದ್ದನು. ಒಮ್ಮೆ ಹಾಗೆ ಸಂಚರಿಸುತ್ತಿರುವಾಗ ಒಂದಾನೊಂದು ಮನೆಯಲ್ಲಿ ದೊಡ್ಡ ಗದ್ದಲವಾಗುತ್ತಿತ್ತು. ಒಳಗಿನಿಂದ 'ಎಲೆ ಬಜಾರಿ, ಕಂಡವರ ಮನೆಯಲ್ಲಿ ಇದ್ದು ಬಂದ ನಿನ್ನನ್ನು ಮತ್ತೆ ನನ್ನ ಹತ್ತಿರ ಸೇರಿಸಿಕೊಳ್ಳುವುದಕ್ಕೆ ನಾನೇನು ರಾಮನಂತೆ ಹೆಣ್ಣಿಗನಲ್ಲ. ನಾಯಿಮುಟ್ಟಿದ ಗಡಿಗೆಯನ್ನು ಮತ್ತೆ ಮನೆಯಲ್ಲಿ ಇಟ್ಟುಕೊಳ್ಳಲೆ?' ಎಂದು ಕೂಗುತ್ತಿರುವ ಗಂಡಸಿನ ದನಿ ಕೇಳಿಸಿತು. ಸಿಡಿಲಿನಂತಹ ಈ ನುಡಿಗಳಿಂದ ಆತನ ಮನಸ್ಸು ಕಲಕಿಹೋಯಿತು. ಆತನು ಗರ್ಭಿಣಿಯಾದ ತನ್ನ ಹೆಂಡತಿಯನ್ನು ಯಾರಿಗೂ ತಿಳಿಯದಂತೆ ಅಡವಿಗೆ ಅಟ್ಟಿದನು. ಅಲ್ಲಿ ಭಾಗ್ಯವಶದಿಂದ ಆಕೆ ವಾಲ್ಮೀಕಿ ಮಹರ್ಷಿಗಳ ಕಣ್ಣಿಗೆ ಬಿದ್ದಳು. ಆತ ಆಕೆಯನ್ನು ತನ್ನ ಆಶ್ರಮಕ್ಕೆ ಕರೆದೊಯ್ದ. ಅಲ್ಲಿ ಸೀತೆ ಲವ ಕುಶರೆಂಬ ಅವಳಿ ಮಕ್ಕಳನ್ನು ಹೆತ್ತಳು. ಅದೇ ವೇಳೆಗೆ ಲಕ್ಷ್ಮಣನಿಗೆ ಅಂಗದ, ಚಂದ್ರಕೇತುವೆಂಬ ಮಕ್ಕಳೂ, ಭರತನಿಗೆ ದಕ್ಷ, ಪುಷ್ಕಲ ಎಂಬ ಮಕ್ಕಳೂ, ಶತ್ರುಘ್ನನಿಗೆ ಸುಬಾಹು, ಶ್ರುತಸೇನರೆಂಬ ಮಕ್ಕಳೂ ಹುಟ್ಟಿದರು. ಈ ಸಮಸ್ತ ಬಂಧುಗಳೊಡನೆ ಶ್ರೀರಾಮನು ರಾಜ್ಯಭಾರ ಮಾಡುತ್ತಿರುವಾಗ ಆತನ ಸೋದರರು ಎಲ್ಲೆಲ್ಲಿಯೂ ದಿಗ್ವಿಜಯಗಳನ್ನು ಪಡೆದು, ಅನೇಕ ಕಪ್ಪ ಕಾಣಿಕೆಗಳನ್ನು ತಂದು ಅಣ್ಣನ ಪಾದಗಳಿಗೆ ಒಪ್ಪಿಸಿದರು. ಇದನ್ನೆಲ್ಲ ಕೇಳಿದ ಸೀತಾದೇವಿಗೆ ಗಂಡನ ಅಗಲಿಕೆ ಅಸಹ್ಯವಾಯಿತು. ಆಕೆ ತನ್ನ ಮಕ್ಕಳನ್ನು ವಾಲ್ಮೀಕಿಗೆ ಒಪ್ಪಿಸಿ, ಶ್ರೀರಾಮನನ್ನು ಸ್ಮರಣೆ ಮಾಡುತ್ತಾ ರಸಾತಲವನ್ನು ಪ್ರವೇಶಿಸಿದಳು. ಈ ಸುದ್ದಿಯು ಶ್ರೀರಾಮನಿಗೆ ಮುಟ್ಟಲು ಆತನು ಮಮ್ಮಲ ಮರುಗಿದನು. ಆತನು ತನ್ನ ಉಳಿದ ಆಯಸ್ಸನ್ನು ಬ್ರಹ್ಮಚರ್ಯದಲ್ಲಿಯೆ ಕಳೆದು ಕೊನೆಗೆ ತನ್ನ ಸ್ವಸ್ಥಾನಕ್ಕೆ ಹಿಂದಿರುಗಿದನು. ಆ ಮಹಾ ಪುರುಷನ ಚರಿತ್ರೆಯನ್ನು ಕೇಳಿದರೆ ಸಾಕು, ಪಾಪಕರ್ಮವೆಲ್ಲ ಸವೆದುಹೋಗುತ್ತದೆ, ಶಾಂತಿ ನೆಲಸುತ್ತದೆ, ಸಮಸ್ತ ಸನ್ಮಂಗಳಗಳೂ ಲಭಿಸುತ್ತವೆ. ಹತ್ತು ಸಹಸ್ರ ವರ್ಷ ಆತನು ಮಡದಿಯೊಡನೆಯೂ ಸೋದರರೇ ಆದಿ ಬಂಧುಗಳೊಡನೆಯೂ ರಾಜ್ಯಭಾರ ಮಾಡುತ್ತಾ ನಡೆದುಕೊಂಡ ರೀತಿ ಲೋಕಕ್ಕೆ ಒಂದು ಆದರ್ಶವನ್ನು ನೀಡಿದೆ.

ಧರೆಗಿಳಿದ ದಿವ್ಯತೇಜ

ಲೇ॥ ಲ.ನ. ಶಾಸ್ತ್ರೀ

# ನೇಪಾಳ, ಪ್ರಯಾಗಗಳಲ್ಲಿ

ಆಚಾರ್ಯರು ಬದರೀಯಲ್ಲಿ ಆತ್ಮಾ ರಾಮರಾಗಿದ್ದದ್ದು, ಸ್ವಲ್ಪ ದಿನಗಳು ಮಾತ್ರ. ಅವರಿಗೆ ಪುನಃ ಪ್ರಯಾಣವೊಂದು ಬಂದಿತು. ಬದರೀ ಯಾತ್ರೆಗಾಗಿ ಬಂದ ಹಲವು ಜನ ಯಾತ್ರಿಕರು, ತಾವು ನೇಪಾಳದಿಂದ ಬರುತ್ತಿರುವುದಾಗಿಯೂ ಅಲ್ಲಿ ವೇದಾಂತ ಧರ್ಮಕ್ಕೆ ತ್ರಿವಿಷ್ಟಪ ದೇಶದ ಬೌದ್ಧ ತಾಂತ್ರಿಕರಿಂದ, ತುಂಬಾ ಅಡ್ಡಿ ಆತಂಕಗಳು ಒದಗಿವೆಯೆಂದು, ಶ್ರೀ ಪಶುಪತಿನಾಥನ ಪೂಜಾಭಿಷೇಕ, ಅರ್ಚನಾದಿಗಳಿಗೂ ಅವಕಾಶವಿಲ್ಲದಂತೆ, ತಾಂತ್ರಿಕರು ಅಡ್ಡಿಯಾಗಿರುವರೆಂದೂ, ಬಿನ್ನವಿಸಿದರು. ಹಿಮಾಲಯ ಪರ್ವತದ ತಪ್ಪಲಲ್ಲಿದ್ದ ನೇಪಾಳಕ್ಕೆ ಪ್ರಯಾಣವು ತುಂಬಾ ಕಷ್ಟ ಸಾಧ್ಯವಾದರೂ, ಆಚಾರ್ಯರು ಹೇಗಾದರೂ ಆ ಸ್ಥಳಕ್ಕೆ ಭೇಟಿಕೊಟ್ಟು, ಅವನತಿ ಸ್ಥಿತಿಯಲ್ಲಿ ಇರುವ ವೈದಿಕ ಧರ್ಮಕ್ಕೆ ಪುನಃ ಚೈತನ್ಯ ನೀಡಬೇಕೆಂದು ಪ್ರಾರ್ಥಿಸಿದರು. ಅವರು ಧರ್ಮದ ಉದ್ಧಾರಕ್ಕಾಗಿಯೇ ಅವತರಿಸಿದ್ದವರಲ್ಲವೇ?

ಆಚಾರ್ಯರು ನೇಪಾಳದ ಯಾತ್ರೆಯನ್ನು ನಿಶ್ಚಯಿಸಿದರು. ಪ್ರಯಾಣದ ವ್ಯವಸ್ಥೆಯಾಯಿತು. ಬ್ರಹ್ಮ ಗುಪ್ತನು ರಥಗಳನ್ನು ಸಿದ್ಧಪಡಿಸಿ, ಪರ್ವತಪ್ರಾಂತ್ಯದಲ್ಲಿ ಶ್ರಮವಿಲ್ಲದೇ ಸಂಚರಿಸಬಲ್ಲ ಹಲವಾರು ಅಶ್ವಗಳನ್ನು ಕೊಟ್ಟನು. ಈ ಸಲದ ಪರಿವಾರ ತೀರಾ ಮಿತವಾಗಿತ್ತು. ಆಚಾರ್ಯರೊಡನೆ ನಾಲ್ವರು ಪ್ರಮುಖ ಸಂನ್ಯಾಸಿ ಶಿಷ್ಯರು, ಸದಾಶಿವ, ಪರಮೇಶ್ವರ ಮತ್ತಿಬ್ಬರು ಬ್ರಹ್ಮಚಾರಿಗಳು, ಬ್ರಹ್ಮಗುಪ್ತನು ನೇಮಿಸಿದ್ದ ನಾಲ್ಕು ಜನ ಮೈಗಾವಲಿನವರು, ರಥಗಳನ್ನು ನಡೆಸುವ ದಕ್ಷರಾದ ಸಾರಥಿಗಳು, ನಾಲ್ವರು ಸೇವಕ ಜನ, ಆಚಾರ್ಯರು ರಥದಲ್ಲಿ ಕುಳಿತೇ ಪ್ರಯಾಣ ಮಾಡಬೇಕು, ಎಂದು ಬ್ರಹ್ಮ ಗುಪ್ತನು ಒತ್ತಾಯಪೂರ್ವಕವಾಗಿ ಕೋರಿಕೊಂಡಿದ್ದರಿಂದ ಆಚಾರ್ಯರು ಒಪ್ಪಿಗೆಯಿತ್ತರು.



ಭಾರತದ ಪ್ರಥಮ ಅಂಚೆ ಚೀಟಿ – ಸಿಂಧ್ ಡಾಕ್

ಯಾತ್ರೆ ಪ್ರಾರಂಭವಾಯಿತು. ಬದರಿಯಿಂದ ಹರಿದ್ವಾರ, ಇಂದ್ರಪ್ರಸ್ಥ, ಪಾಟಲೀಪುತ್ರಕ್ಕೆ ಬಂದರು. ಅಲ್ಲಿಂದ ಉತ್ತರಾಭಿಮುಖವಾಗಿ ಪ್ರಯಾಣವಾಯಿತು. ದುರ್ಗಮವೂ ನಿಬಿಡಾರಣ್ಯಗಳಿಂದಲೂ, ಛಳಿ, ಮಳೆ ಗಾಳಿಗಳಿಂದಲೂ ಪರ್ವತ ಪ್ರಾಂತ್ಯದ ಪ್ರಯಾಣವು ತುಂಬಾ ಕಷ್ಟಕರವೂ ಪ್ರಯಾಸಕರವೂ ಆಯಿತು. ಹಲವಾರು ದಿನಗಳ ಸತತ ಸಂಚಾರದಿಂದ ಈ ಅದ್ವೈತ ಭಿಕ್ಷುವು ಇವರ ಶಿಷ್ಯರೂ ನೇಪಾಳ ರಾಜ್ಯದ, ರಾಜಧಾನಿಯನ್ನು, ಸೇರಿಸಿದರು.

ನೇಪಾಳದ ಧಾರ್ಮಿಕ ಸ್ಥಿತಿ ತೀರಾ ಶೋಚನೀಯವಾಗಿತ್ತು. ಬೌದ್ಧ ತಾಂತ್ರಿಕರು ಜನರನ್ನು ಮರಳುಗೊಳಿಸುವ ಪವಾಡಗಳನ್ನು ಮಾಡುತ್ತಾ ಈ ಪವಾಡಗಳೇ "ಧರ್ಮ" ಎಂಬ ಭ್ರಾಂತಿಯ ಸನ್ನಿವೇಶವನ್ನು ಮೂಡಿಸಿದ್ದರು. ನಾನಾ ವಿಧವಾದ ಈ ಪವಾಡಗಳನ್ನು ಕಂಡ ಜನಸಾಮಾನ್ಯರು ಇವರನ್ನೇ ಮಹಾತ್ಮರು, ಧಾರ್ಮಿಕ ಮಾರ್ಗ ನಿರ್ದೇಶಕರು ಎಂದು ನಂಬಿಬಿಟ್ಟಿದ್ದರು. ಪಂಡಿತವರ್ಗವು ಆಶ್ರಯದಾತರಿಲ್ಲದೆ ತೀರಾ ಸೊರಗಿ ಹೋಗಿದ್ದರು. ದೇವಾಲಯದ ಪೂಜೆಯಲ್ಲಿ ಬಲಿ. ಅನಾಚಾರಗಳು ತುಂಬಿದ್ದವು. ಅಧಾರ್ಮಿಕವಾಗಿ ಅನಾಯಕವಾಗಿತ್ತು.

ಆಚಾರ್ಯರು ಪಶುಪತಿನಾಥ ದೇವಾಲಯದಲ್ಲಿಯೇ ಬೀಡುಬಿಟ್ಟರು. ಅಲ್ಲಿದ್ದ ಅರ್ಚಕರನ್ನೂ, ಪಂಡಿತರನ್ನೂ ಭೇಟಿಮಾಡಿ, ಅವರೊಡನೆ ದೇಶದ ಧಾರ್ಮಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಕುರಿತು ಸಮಾಲೋಚನೆಯನ್ನು ನಡೆಸಿದರು. ತಮ್ಮ ಹತ್ತಿರ ಮಾತನಾಡುತ್ತಿರುವವರು ಶ್ರೀ ಶಂಕರಾಚಾರ್ಯರು ಎಂದು ಅರಿತ ಪಂಡಿತರು, ಅವರೊಡನೆ ಮನಬಿಚ್ಚಿ ಮಾತನಾಡಿದರು. ತಮ್ಮ ರಾಜ್ಯದಲ್ಲಿ ಬೌದ್ಧ ತಾಂತ್ರಿಕರು ಪ್ರಬಲರಾಗಿರುವರೆಂದೂ, ವೈದಿಕ ಧರ್ಮಕ್ಕೆ ರಾಜಾಶ್ರಯವು ಇದ್ದರೂ, ರಾಜನು ಸಹ ಬೌದ್ಧರು ನಡೆಸುವ ಪವಾಡಗಳಿಗೆ ಮರುಳಾಗಿ, ಅವರುಗಳ ವಶವರ್ತಿಯಾಗಿದ್ದು, ತಾವು ನಿಸ್ಸಹಯಕರಾಗಿರುವೆವೆಂದು ತಿಳಿಸಿದರು. ಆಚಾರ್ಯರು ಅವರಿಗೆಲ್ಲರಿಗೂ ಸಾಂತ್ವನವನ್ನು ನೀಡಿ ತಮ್ಮ ಆಗಮನದ ವಿಚಾರವನ್ನು ರಾಜಾಶಿವದೇವನಿಗೆ ತಿಳಿಸಬೇಕೆಂದೂ, ಬೌದ್ಧ ಪಂಡಿತರೊಡನೆ, ತಾವು ಚರ್ಚೆ ನಡೆಸುವುದಾಗಿಯೂ ಹೇಳಿದರು.

ಅಪರೂಪವಾಗಿ ನೇಪಾಳಕ್ಕೆ ಬರುತ್ತಿದ್ದ ಯಾತ್ರಿಕರಿಂದ ಆಚಾರ್ಯರ ವಿಚಾರವು ಮಹಾರಾಜ ಶಿವದೇವನಿಗೆ ಅಲ್ಪಸ್ವಲ್ಪ ತಿಳಿದಿತ್ತು. ಶಂಕರರ ಆಗಮನ ವಿಚಾರ ತಿಳಿದ ನಂತರ, ಆತನು ಕೂಡಲೇ ದೇವಾಲಯಕ್ಕೆ ಆಗಮಿಸಿ ಆಚಾರ್ಯರಿಗೆ ಭಕ್ತಿಶ್ರದ್ಧೆಯಿಂದ ವಂದನೆಯನ್ನು ಸಲ್ಲಿಸಿದನು. ತನ್ನ ಆಸ್ಥಾನದಲ್ಲಿಯೇ ಶಾಸ್ತ್ರಾರ್ಥ ಚರ್ಚೆಗೆ, ಏರ್ಪಾಟು ಮಾಡುವುದಾಗಿ ಬಿನ್ನವಿಸಿದನು. ಆಚಾರ್ಯರು ನೇಪಾಳದಲ್ಲಿ ಇರುವವರೆಗೆ ಅವರ ಆತಿಥ್ಯಕ್ಕೆ ಎಲ್ಲ ವ್ಯವಸ್ಥೆಯನ್ನು ಸಜ್ಜುಗೊಳಿಸಿದನು.

ಮಾರನೆಯ ದಿನದಿಂದಲೇ ಶಾಸ್ತ್ರಾರ್ಥ ಸಭೆಯು ಪ್ರಾರಂಭವಾಯಿತು. ಹಲವಾರು ದಿನಗಳ ಕಾಲ ನಡೆದಂತಹ ಆ ಸಭೆಯಲ್ಲಿ ಆಚಾರ್ಯರು ಬೌದ್ಧ ಮತದ ವಿಚಾರವಾಗಿ ಮಾಡಿದ ವಿಮರ್ಶೆ. ಸಭಿಕರನ್ನು ಅಚ್ಚರಿಗೊಳಿಸಿತು. ಎಷ್ಟೋ ಜನ ಬೌದ್ಧ ಪಂಡಿತರು, ತಮಗಿಂತ ಶಕರಾಚಾರ್ಯರೇ ತಮ್ಮ ಮತ ತತ್ತ್ವಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ, ಎಂಬುದನ್ನು ಪ್ರಾಂಜಲರಾಗಿ ಒಪ್ಪಿಕೊಂಡರು. ಶಂಕರರೊಡನೆ, ಜಗಳವಾಡಲೆಂದು ಬಂದ ತರುಣ ವಿದ್ವಾಂಸರು ಸಹ ಆಚಾರ್ಯರ ಪ್ರಸನ್ನ ಮುಖ ನಿಷ್ಕಲ್ಮಷ ಹೃದಯ, ವಿಶಾಲವಾದ ಮನಸ್ಸು ಮೃದುನುಡಿ ಇವುಗಳಿಗೆ ಮಾರುಹೋದರು. ಆಚಾರ್ಯರೆದುರು ಪವಾಡಗಳನ್ನು ಮಾಡಿ, ಅವರನ್ನು ಆಶ್ಚರ್ಯಗೊಳಿಸಬೇಕೆಂದು ಬಂದವರು, ನಾಚಿ ತಲೆ ತಗ್ಗಿಸಿದರು. ಆಚಾರ್ಯರು ನಿರ್ಭಿತ ಕೇಸರಿಯಂತೆ "ಸ್ನೇಹಿತರೆ ಬೌದ್ಧ ಮತಾವಲಂಬಿಗಳಾದ ನೀವೆಲ್ಲರೂ, ನಮ್ಮ ಶತ್ರುಗಳಲ್ಲ, ನಮ್ಮ ವಿರೋಧಿಗಳಲ್ಲ. ನಮ್ಮ ಅಣ್ಣ, ತಮ್ಮಂದಿರೇ ಆಗಿದ್ದೀರಿ" ಎಂದು ಪ್ರಾರಂಭಿಸಿ:

"ಕ್ಷುಲ್ಲಕವಾದ ಪವಾಡಗಳನ್ನು ಮೆರೆಸುತ್ತ, ಈ ಪವಾಡಗಳೇ ಧಾರ್ಮಿಕ ಮತ್ತು ಆಧ್ಯಾತ್ಮಿಕ ಶಕ್ತಿ ಎಂಬ ಭ್ರಾಂತಿಯನ್ನು ಮೂಡಿಸುತ್ತ, ನೀವು ಅಮಾಯಕ ಜನರನ್ನು ಮರುಳು ಮಾಡಿ, ದಾರಿ ತಪ್ಪಿಸುತ್ತಿದ್ದೀರಿ. ನೀವೂ ಅವನತಿಯ ಪಥದಲ್ಲಿ ಸಾಗುತ್ತಿದ್ದೀರಿ. ಗೌತಮ ಬುದ್ಧನು **ಮಾಹಿಂಸ್ಯಾತ್ ಸರ್ವಭೂತಾನಿ** ಎಂಬ ವೈದಿಕ ಆದೇಶವನ್ನು ಅನುಸರಿಸಿ ಬೋಧಿಸಿದ ಶುದ್ಧ ಚಾರಿತ್ರ್ಯ, ಸಾತ್ವಿಕ ಜೀವನ, ತ್ಯಾಗ, ವೈರಾಗ್ಯ, ಅಹಿಂಸೆ, ಮೈತ್ರಿ, ಕರುಣೆ ಮುಂತಾದುವನ್ನು ಬಿಟ್ಟುಕೊಟ್ಟು, ಬೌದ್ಧಮತಕ್ಕೆ ಕಳಂಕವನ್ನು ತರುತ್ತಿದ್ದೀರಿ. ವೇದಾಂತ ಧರ್ಮವನ್ನು ನೀವು ಒಪ್ಪಿ ಅಥವಾ ಒಪ್ಪದಿರಿ. ನಿಮ್ಮ ಧರ್ಮವನ್ನು ಸರಿಯಾಗಿ ಪಾಲಿಸುತ್ತಾ ಸಾಮಾನ್ಯ ಜನರಲ್ಲಿ ಧೈರ್ಯ, ವಿಶ್ವಾಸ, ನೈತಿಕ ತತ್ತ್ವ ಶ್ರದ್ಧೆ ಇವುಗಳನ್ನು ಮೂಡಿಸಿ." ಎಂದರು.

"ಧರ್ಮ ಬೋಧಕರು, ಧರ್ಮಪ್ರಸಾರಕರು ಶುದ್ಧವಾದ ನೈತಿಕ ಜೀವನವನ್ನು ನಡೆಸಬೇಕು. ಪ್ರಾಪಂಚಿಕ ಸುಖ, ಪ್ರಲೋಭನೆಗಳಿಗೆ ವಶರಾಗಬಾರದು. ಅದರಿಂದ ಅವರ ಹಿಂಬಾಲಕರು ತಪ್ಪುದಾರಿಗೆ ಹೋಗಿಬಿಡುತ್ತಾರೆ" ಎಂದು ಬೋಧಿಸಿದರು.

ಶ್ರೀ ಪಶುಪತಿನಾಥನ ಅರ್ಚಕರು, ಅಮಾಯಕರಾಗಿದ್ದು, ಪೂಜಾ ವಿಧಾನವನ್ನು ಬಲ್ಲವರಾಗಿರಲಿಲ್ಲ. ಅವರು ತಮ್ಮಿಂದ ಪೂಜೆಯು ಸಾಧ್ಯವಿಲ್ಲವೆಂದೂ ಆಚಾರ್ಯರೇ ಪೂಜಾ ವ್ಯವಸ್ಥೆ ಮಾಡಬೇಕೆಂದು ದೀನರಾಗಿ ಪ್ರಾರ್ಥಿಸಿದರು. ರಾಜಾ ಶಿವದೇವನು ಸಹ ಅದನ್ನು ಅನುಮೋದಿಸಿದನು. ಆಚಾರ್ಯರು ಒಂದು ಸೋಮವಾರ ಪ್ರದೋಷ ಕಾಲದಲ್ಲಿ ತಾವೇ ಸ್ವತಃ ಶ್ರೀ ಸ್ವಾಮಿ ಪಶುಪತಿನಾಥ ಪೂಜೆಯನ್ನು ಆರಂಭಿಸಿ, ಶ್ರೀ ರುದ್ರಾಭಿಷೇಕವನ್ನು ಅರ್ಚನೆಯನ್ನು ನಡೆಸಿದರು. ಪೂಜೆಗೆಂದು ಕುಳಿತ ಆಚಾರ್ಯರು ಮೈಮರೆತು ಮಂತ್ರ ಮಂತ್ರಗಾನವನ್ನು ಕೇಳುತ್ತಾ, ಮಾರನೆಯ ಬೆಳಗಿನ ಜಾವದವರೆಗೂ ಶ್ರೀ ಶಿವಪೂಜೆಯನ್ನು ಮಾಡಿದರು. ನೇಪಾಳದ ರಾಜಾ ಶಿವದೇವ, ಆತನ ಆಸ್ಥಾನ ಪಂಡಿತರು ದಿಗ್ಭ್ರಮೆಯಿಂದ ಇದನ್ನು ವೀಕ್ಷಿಸುತ್ತ ಮೈಮರೆತು ಕುಳಿತಿದ್ದರು. ಅವರು



ಭಾರತದ ಪ್ರಥಮ ಭಾರತೀಯರ ಬ್ಯಾಂಕ್ – ಔದ್ ಕಮರ್ಷಿಯಲ್ ಬ್ಯಾಂಕ್

ಇಂತಹ ತನ್ಮಯತೆಯ ಪೂಜೆಯನ್ನು ತಮ್ಮ ಜೀವನದಲ್ಲಿ ಕಂಡುದು ಅದೇ ಮೊದಲು.

ಮಾರನೆಯ ಪ್ರಾತಃಕಾಲ ಆಚಾರ್ಯರು ಶಿಷ್ಯ ಪರಮೇಶ್ವರನನ್ನು ಕರೆದು "ಪರಮೇಶ್ವರ ಇನ್ನು ಮೇಲಿಂದ ಈ ಪಶುಪತಿನಾಥನೇ ನಿನ್ನ ಆರಾಧ್ಯ ದೈವ. ಇವನನ್ನೇ ಪರಬ್ರಹ್ಮದ ದಿವ್ಯ ಪ್ರತೀಕವೆಂದು ಭಾವಿಸಿ ಆರಾಧಿಸು. ನಿನ್ನ ಜನ್ಮವು ಸಾರ್ಥಕವಾಗುತ್ತದೆ. ನಿನ್ನೊಡನೆ ಸದಾಶಿವನೂ ಇಲ್ಲಿರುತ್ತಾನೆ" ಎಂದು ಹೇಳಿ, ಮಹಾರಾಜ ಶಿವದೇವನನ್ನು ಕುರಿತು "ರಾಜನ್ ನಿನ್ನ ಇಚ್ಛೆಯಂತೆ ಇನ್ನು ಮೇಲಿನಿಂದ ಶ್ರೀ ಪಶುಪತಿನಾಥನ ಅರ್ಚನೆಯನ್ನು ಈ ನಮ್ಮ ಶಿಷ್ಯರಾದ ಪರಮೇಶ್ವರ, ಸದಾಶಿವರು ನಡೆಸುತ್ತಾರೆ. ಇವರು ಕಳೆದ ಇಪ್ಪತ್ತನಾಲ್ಕು ವರ್ಷಗಳಿಂದ ನನ್ನೊಡನೆ ಇದ್ದಾರೆ. ಸಾವಿರಾರು ಹರಿದಾರಿ ದೂರದಲ್ಲಿರುವ ತಾಯಿ, ತಂದೆ, ಬಂಧು–ಬಳಗ ಎಲ್ಲರನ್ನೂ ಬಿಟ್ಟು, ನನ್ನ ಜೊತೆಯಲ್ಲಿ ತಿರುಗಾಡುತ್ತ ನನ್ನ ಸೇವೆ ಮಾಡಿದ್ದಾರೆ. ಇವರು ನನ್ನ ಸ್ನೇಹಿತರೂ ಹೌದು, ನನ್ನ ಶಿಷ್ಯರೂ ಹೌದು. ಇವರನ್ನು ನಿನ್ನ ಮಕ್ಕಳಂತೆ ಭಾವಿಸಿ, ಚೆನ್ನಾಗಿ ನೋಡಿಕೋ" ಎಂದರು. ಶಿವದೇವನು "ಗುರುದೇವ ನಿಮ್ಮ ಆಜ್ಞೆಯನ್ನು ಶಿರಸಾ ವಹಿಸುತ್ತೇನೆ. ತಮ್ಮ ಪಾದ ಧೂಳಿನಿಂದ ನಮ್ಮ ರಾಜ್ಯದಲ್ಲಿ ಶಾಂತಿ, ಸೌಖ್ಯ ನೆಲೆಸುತ್ತಿದೆ" ಎಂದು ವಿನಯದಿಂದ ನುಡಿದನು.

ಮಹಾರಾಜನು, ಜಗದ್ಗುರುವನ್ನು ತನ್ನ ಅರಮನೆಗೆ ಬರಮಾಡಿಕೊಂಡು ಬಹುವಾಗಿ ಸತ್ಕರಿಸಿದನು. ಆಚಾರ್ಯರಿಗೆ ಐದು ಸ್ಫಟಿಕ ಲಿಂಗಗಳನ್ನು ಅಪೂರ್ವವಾದ ಸಾಲಿಗ್ರಾಮಗಳನ್ನು, ರುದ್ರಾಕ್ಷಿಮಾಲೆಗಳನ್ನು ಸಮರ್ಪಿಸಿದನು. ಆಚಾರ್ಯರು ಅಪೂರ್ವವಾದ ಶಿವಲಿಂಗಗಳನ್ನು, ಭಕ್ತಿಯಿಂದ ಕಣ್ಣೊತ್ತಿಕೊಳ್ಳುತ್ತಿರುವುದನ್ನು ನೋಡಿದ ರಾಜನು "ಗುರುದೇವ, ಈ ಲಿಂಗಗಳು ನಮ್ಮ ಪೂರ್ವಜರಿಗೆ, ಶ್ರೀ ಪರಮೇಶ್ವರನಿಂದಲೇ ಪ್ರಾಪ್ತವಾದುದವೆಂದು ಐತಿಹ್ಯವಿದೆ. ಅವರು ಕೈಲಾಸ ಯಾತ್ರೆಗಾಗಿ ಹೋಗಿದ್ದಾಗ, ಅವರಿಗೆ ಈ ದಿವ್ಯ ಸ್ಫಟಿಕ ಲಿಂಗಗಳು ಪರಮೇಶ್ವರನಿಂದ ಅನುಗ್ರಹಿಸಲ್ಪಟ್ಟಿದ್ದವು" ಎಂದು ಬಿನ್ನವಿಸಿದನು.

ಆಚಾರ್ಯರ ನೇಪಾಳದ ಭೇಟಿಯ ಸ್ಮರಣೆಗಾಗಿ ಶಿವದೇವನು ಒಂದು ಮಠವನ್ನು ನಿರ್ಮಿಸಿ, ಶ್ರೀ ಶಂಕರ ಮತ್ತು ಶ್ರೀ ದತ್ತಾತ್ರೇಯ ವಿಗ್ರಹಗಳನ್ನು ಪ್ರತಿಷ್ಠಾಪಿಸಿದನು. ಪುತ್ರ ಸಂತತಿಯಿಲ್ಲದ ರಾಜನು, ಆಚಾರ್ಯರಲ್ಲಿ ತನ್ನ ಕೊರಗನ್ನು ಬಿನ್ನವಿಸಲು, ಆಚಾರ್ಯರು ಆತನಿಗೆ ಹಲವು ವೈದಿಕ ಕರ್ಮಗಳನ್ನು ಆಚರಿಸುವುದರಿಂದ ಪುತ್ರ ಸಂತಾನವುಂಟಾಗುವುದೆಂದು ಆಶೀರ್ವಾದಪೂರ್ವಕವಾಗಿ ಭರವಸೆ ನೀಡಿದರು. ಆಚಾರ್ಯರ ಆಶೀರ್ವಾದದಿಂದ ಮುಂದೆ ಜನಿಸಿದ ಮಗನಿಗೆ ದೊರೆಯು ಶ್ರೀಶಂಕರದೇವ ಎಂದೇ ನಾಮಕರಣ ಮಾಡಿದನು.

ಆಚಾರ್ಯರು ನೇಪಾಳದಿಂದ ಹಿಂದಿರುಗುತ್ತ ದಾರಿಯುದ್ದಕ್ಕೂ ದೊರಕಿದ ಆದರದ ಸ್ವಾಗತವನ್ನು ಸ್ವೀಕರಿಸುತ್ತ, ಪಾಟಲೀಪುತ್ರದಿಂದ ಇಂದ್ರಪ್ರಸ್ಥಕ್ಕೆ ಆಗಮಿಸಿದರು.

ಇಂದ್ರಪ್ರಸ್ಥದಿಂದ ಕುರುಕ್ಷೇತ್ರಕ್ಕೆ ತೀರ್ಥಸ್ನಾನಕ್ಕಾಗಿ ಹೋಗಿದ್ದ ಆಚಾರ್ಯರಿಗೆ ಮತ್ತೊಂದು ಪ್ರಯಾಣ ಕಾದಿತ್ತು. ಗಂಗಾ, ಯಮುನಾ, ಸರಸ್ವತಿ ಪುಣ್ಯಸಂಗಮ ಸ್ಥಳವಾದ ಪ್ರಯಾಗ ಕ್ಷೇತ್ರದಲ್ಲಿ ಆಗ ನಡೆಯುತ್ತಿದ್ದ ಕುಂಭಮೇಳಕ್ಕೆ ಬಂದಿದ್ದ ಯಾತ್ರಿಕರು ಕೆಲವರು ಕುರುಕ್ಷೇತ್ರಕ್ಕೂ ಬಂದಿದ್ದರು. ಅವರು ಆಚಾರ್ಯರನ್ನು ಸಂದರ್ಶಿಸಿ "ಮಹಾತ್ಮರೇ ಈಗ ಪ್ರಯಾಗ ಕ್ಷೇತ್ರದಲ್ಲಿ ಕುಂಭಮೇಳ ನಡೆಯುತ್ತಿದೆ. ಶಿವರಾತ್ರಿಗೆ ಅದು ಪರಿಸಮಾಪ್ತಿ ಹೊಂದುತ್ತದೆ. ಅಲ್ಲಿ ಸಾವಿರಾರು ಜನ ಸಾಧು ಸಂತರು, ಸಂನ್ಯಾಸಿಗಳು, ಪಂಡಿತ ಶ್ರೇಷ್ಠರೂ ಬಂದಿದ್ದಾರೆ. ತಾವೂ ಅಲ್ಲಿಗೆ ಭೇಟಿ ನೀಡಬೇಕು" ಎಂದು ಮನವಿ ಮಾಡಿದರು. ಆಚಾರ್ಯರು ಭರತವರ್ಷದ ಎಲ್ಲ ಸ್ಥಳಗಳಿಂದಲೂ ಬಂದು ಸೇರುವ ಸಾಧು ಸಂತರ ಸಂದರ್ಶನಕ್ಕಾಗಿ, ಪವಿತ್ರ ತೀರ್ಥಸ್ನಾನಕ್ಕಾಗಿ ಪ್ರಯಾಗಕ್ಕೆ ಸಂಚಾರ ಹೊರಟರು.

ಆಚಾರ್ಯರು ಮಾಘ ಶುದ್ಧ ರಥಸಪ್ತಮಿಯಂದು ಪ್ರಾತಃಕಾಲದಲ್ಲಿ ಪ್ರಯಾಗ ಕ್ಷೇತ್ರವನ್ನು ಸೇರಿದರು. ಎಲ್ಲಿ ನೋಡಿದರೂ ಜನ, ಸಾಧುಗಳು, ಸಂನ್ಯಾಸಿಗಳು, ಸಂತರು. ಭಜನೆ, ಪ್ರವಚನಗಳು. ನಾನಾ ವರ್ಗದ ನಾನಾ ಪಂಥದ ಜನ ಅಲ್ಲಿ ಸೇರಿದ್ದರು. ಆಚಾರ್ಯರು ಮಿತ ಪರಿವಾರದೊಡನೆ, ಅಲ್ಲಿಗೆ ಬಂದಿದ್ದು, ಒಂದು ದೇವಾಲಯದ ಪಡಸಾಲೆಯಲ್ಲಿ ಬಿಡಾರ ಮಾಡಿದರು. ತಾವು ಯಾರೆಂದು ಯಾರಿಗೂ ತಿಳಿಸಲಿಲ್ಲ.

ಈ ತೇಜೋವಂತನಾದ ಸಂನ್ಯಾಸಿಯನ್ನು ನೋಡಿದ ವೃದ್ಧ ಸಂನ್ಯಾಸಿಯೊಬ್ಬರು, ಇವರಿಂದ ಆಕರ್ಷಿತನಾಗಿ, ಯತಿವರ್ಯರು ಎಲ್ಲಿಂದ ಬಂದಿರಿ? ಎಂದು ಪ್ರಶ್ನಿಸಿದರು. ಶಂಕರರು ಚುಟುಕಾಗಿ "ನೇಪಾಳದಿಂದ" ಎಂದರು.

ಅವರು ಪುನಃ "ಸಂಪ್ರದಾಯ?" ಎಂದಾಗ ಆಚಾರ್ಯರು 'ಅದ್ವೈತ' ಎಂದು ಉತ್ತರಿಸಿದರು. ಆ ವೃದ್ಧ ಸಂನ್ಯಾಸಿ ಹುಬ್ಬೇರಿಸಿ "ತಮಗೆ ಶ್ರೀ ಶಂಕರಾಚಾರ್ಯರ ಹೆಸರು ಗೊತ್ತೆ ಸ್ವಾಮಿಗಳೆ? ಅವರೀಗ ದಿಟವಾದ ಅದ್ವೈತಾಚಾರ್ಯರು" ಎಂದರು.

ಆಚಾರ್ಯರು ಹಸನ್ಮುಖದಿಂದ "ಅವರ ಹೆಸರು ಗೊತ್ತು. ಅವರ ಪರಿಚಯವೂ ನನಗಿದೆ" ಎಂದರು.

"ಈಗ ಆಚಾರ್ಯರು ಎಲ್ಲಿದ್ದಾರೋ?"

"ನೇಪಾಳಕ್ಕೆ ಹೋಗಿದ್ದರು, ಬದರಿಗೆ ಹಿಂದಿರುಗುವ ಮಾರ್ಗದಲ್ಲಿ ಇರಬಹುದು."

"ಆ ಮಹಾತ್ಮರ ದರ್ಶನ ಮಾಡಬೇಕು ಎಂದು ನನ್ನ ಆಶಯ. ಬದರೀ ಕ್ಷೇತ್ರಕ್ಕೆ ಹೋಗಬೇಕಾಗುತ್ತದೇನೋ" ಎಂದರು ವೃದ್ಧ ಸಂನ್ಯಾಸಿ.

"ನಿಮಗೆ ಅವರ ದರ್ಶನ ಇಲ್ಲಿಯೇ, ಬೇಗನೇ ಆಗಬಹುದು. ಅವರು ಕುಂಭಮೇಳಕ್ಕೆ ಬರುವ ಸಂಭವವಿದೆ" ಎಂದರು ಶಂಕರಾಚಾರ್ಯರು. ಶಿಷ್ಯರಿಗೆಲ್ಲಾ ಆಶ್ಚರ್ಯ, ಗುರುಗಳು ತಾವೇ ಶಂಕರಾಚಾರ್ಯರೆಂದೇಕೆ ಹೇಳಲಿಲ್ಲ ಎಂದು.

ಆ ವೃದ್ಧ ಸಂನ್ಯಾಸಿಯು ವಂದನೆ ಸಲ್ಲಿಸಲು, ಆಚಾರ್ಯರು ಅವರಿಗೆ "ತಾವು ಹಿರಿಯರು" ಎಂದು ಹೇಳಿ ಪ್ರತಿವಂದನೆಯನ್ನು ಮಾಡಿದರು. ಆತ ಆಚಾರ್ಯರ ವಿನಯ ಸೌಜನ್ಯಗಳನ್ನು ಮೆಚ್ಚಿಕೊಂಡು, ಹೊರಟರು.

ಆಚಾರ್ಯರೂ ಶಿಷ್ಯ ಪರಿವಾರವೂ ತೀರ್ಥಸ್ನಾನಕ್ಕೆಂದು ಸಂಗಮದತ್ತ ನಡೆದರು. ಅವರನ್ನು ನೋಡಿದ ಜನ, ತಾವಾಗಿ ಅವರಿಗೆ ದಾರಿ ಮಾಡಿಕೊಟ್ಟರು. ಅವರನ್ನು ಕಂಡ ಎಲ್ಲರಿಗೂ, ಇದುವರೆಗೂ ಇಂತಹ ತೇಜಸ್ವಿಯನ್ನು ಕಂಡಿಲ್ಲ, ಸಾಕ್ಷಾತ್ ಸೂರ್ಯ ಭಗವಾನನೇ ಭೂಮಿಗೆ ಇಳಿದಂತಿದೆ, ಎಂದು ಮಾತನಾಡಿಕೊಳ್ಳುತ್ತಿದ್ದರು. ಪುನಃ ಪುನಃ ಅವರತ್ತ ನೋಡುತ್ತ ನಮಸ್ಕಾರ ಮಾಡುತ್ತ, ಸಾಕ್ಷಾತ್ ದಕ್ಷಿಣಾಮೂರ್ತಿಯೋ ಸುಬ್ರಹ್ಮಣ್ಯನೋ ಬಂದಂತಿದೆ ಎಂದುಕೊಳ್ಳುತ್ತಿದ್ದರು.

ಆಚಾರ್ಯರ ಸ್ನಾನವಾಗುವವರೆಗೆ ಕಾದಿದ್ದ ಶಿಷ್ಯರು, ಅನಂತರ ತಾವೂ ಸ್ನಾನ ಮಾಡಿದರು. ಆಚಾರ್ಯರು ಜಪಕ್ಕೆಂದು ಮರದಡಿಯಲ್ಲಿ ಕುಳಿತಾಗ, ಅವರನ್ನು ಬದರಿಯಲ್ಲಿ ದರ್ಶನ ಮಾಡಿದ್ದ ಯಾತ್ರಿಕರ ಗುಂಪೊಂದು ಗುರುತಿಸಿಬಿಟ್ಟಿತು. ಅತ್ಯಾನಂದದಿಂದ "ಶ್ರೀ ಶಂಕರಾಚಾರ್ಯ ಜಗದ್ಗುರು ಮಹಾರಾಜ ಜಯ ಜಯ" ಎಂದು ಘೋಷಿಸಿಬಿಟ್ಟಿತು. ಆ ಹೆಸರನ್ನು ಹೇಳಿದುದೇ ತಡ, ಜನಗಳ ಗುಂಪು ಮಹಾಪ್ರವಾಹದಂತೆ ಗುರುದೇವರತ್ತ ಧಾವಿಸಿತು. ಎಲ್ಲರಿಗೂ ಈ ಮಹಾತ್ಮನನ್ನು ದರ್ಶಿಸುವ ತವಕ, ಕುತೂಹಲ, ಆಸೆ, ಅಪೇಕ್ಷೆ.

–ಮುಂದುವರೆಯುವುದು...

ಸುಂದರಕಾಂಡದ ಸೌಂದರ್ಯ

ಲೇ॥ ರಾಮಕೃಷ್ಣ.ಎನ್.ಹೆಗಡೆ

# ಶ್ರೀ ವೀರಾಂಜನೇಯ

ಶ್ರೀರಾಮನ ಕಾರ್ಯ ನಿಮಿತ್ತವಾಗಿ ಲಂಕೆಗೆ ಬಂದ ಹನುಮಂತನು ಸೀತೆಗೆ ತನ್ನ ಮಾತುಗಳ ಮೂಲಕ ಶ್ರೀರಾಮ ಮತ್ತು ಲಕ್ಷ್ಮಣರು ಖಂಡಿತವಾಗಿಯೂ ಲಂಕಾನಗರಕ್ಕೆ ಶೀಘ್ರದಲ್ಲಿ ಬರುತ್ತಾರೆನ್ನುವ ಸಂದೇಶವನ್ನು ನೀಡಿದ್ದಾನೆ ಹಾಗೆಯೇ ತೇಜೋಮೂರ್ತಿಗಳಾದ ಅವರುಗಳು ಬಂದು ನಿನ್ನನ್ನು ಮತ್ತೆ ಅಯೋಧ್ಯೆಗೆ ಕರೆದುಕೊಂಡು ಹೋಗುತ್ತಾರೆನ್ನುವ ಭರವಸೆಯನ್ನು ನೀಡಿದ್ದಾನೆ. ಇಂತಹ ಕಪಿ ಶ್ರೇಷ್ಠನ ಗುಣವನ್ನು ಶ್ರೀರಾಮನು ಮೆಚ್ಚಿದ್ದಾನೆ. ಹಾಗೆಯೇ ಅವನ ಶೌರ್ಯ ಪರಾಕ್ರಮಗಳೂ ಕೂಡ ಅಪ್ರತಿಮವಾಗಿದೆಯೆಂದು ಹೀಗೆ ಪ್ರಶಂಸೆ ವ್ಯಕ್ತಪಡಿಸುತ್ತಾನೆ ರಾವಣನಂತಹ ಬಲಶಾಲಿಯಾದ ಅಸುರನಿಂದ ರಕ್ಷಿಸಲ್ಪಡುತ್ತಿರುವ ಲಂಕೆಯನ್ನು ದೇವ–ದಾನವ–ಯಕ್ಷರಿಂದಾಗಲೀ ಗಂಧರ್ವ ರಾಕ್ಷಸರುಗಳಿಂದಾಗಲೀ ಆಕ್ರಮಿಸುವುದಕ್ಕೆ ಸಾಧ್ಯವಿಲ್ಲ. ಆದರೆ ಆಂಜನೇಯನು ಲಂಕಾನಗರವನ್ನು ಸ್ವಶಕ್ತಿಯಿಂದ ಪ್ರವೇಶ ಮಾಡಿರುವುದರಿಂದ ಅವನ ಸಾಹಸವನ್ನು ಪ್ರಶಂಸೆ ಮಾಡಲೇ ಬೇಕು. ಇವನಿಗೆ ಸಮಾನರಾಗಿರುವ ಕಾರ್ಯ ಸಾಧಕರು ಯಾರಿದ್ದಾರೆ? ಎಂದು ಶ್ರೀರಾಮನು ಪ್ರಶ್ನಿಸುತ್ತಾನೆ. ಹನುಮಂತನಿಗೆ ಅವನೇ ಸರಿಸಾಟಿ ಹಾಗಾಗಿ ಶತ್ರು ಸಂಹಾರಕನಾಗಿರುವ ಶ್ರೀರಾಮನು ಹನುಮಂತನ ವಿಷಯದಲ್ಲಿ ಅಪಾರವಾದ ಪ್ರೀತಿಯನ್ನು ಹೊಂದುತ್ತಾನೆ.

ಪಂಡಿತರುಗಳಿಂದಲೂ ದೂತರು ಪ್ರಶಂಸೆಗೆ ಒಳಗಾಗುತ್ತಾರೆನ್ನುವುದು ಸತ್ಯವಾದರೂ ದೂತರ ಕೆಲಸವು ರಾಜನಾದವನಿಗೆ ಅತ್ಯಂತ ಪ್ರಮುಖವಾದುದಾಗಿದೆ ಒಬ್ಬ ದೂತನು ಕಾರ್ಯವನ್ನು ಸಾಧಿಸಿ ಕೊಡಬಹುದು ಹಾಗೆಯೇ ಕಾರ್ಯವನ್ನು ಹಾಳು ಮಾಡಲೂಬಹುದು ಹಾಗಾಗಿ ಸುಗ್ರೀವನಂತಹ ರಾಜನಿಗೆ ಶ್ರೀರಾಮದೂತನಾಗಿ ಲಂಕಾ ದ್ವೀಪಕ್ಕೆ ಹೋದ ಹನುಮಂತನು ತಂದಿರುವುದು ಕಾರ್ಯಸಾಧನೆಯ ಸಿಹಿಸುದ್ಧಿಯಾಗಿದೆ ಹಾಗಾಗಿ ಸುಗ್ರೀವನೂ ಹನುಮಂತನನ್ನು ಪ್ರಶಂಸಿದ್ದಾನೆ. "ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್" ಎಂಬಂತೆ ಪ್ರಿಯವಾದ ಸತ್ಯವನ್ನು ಬಂದು ಹೇಳಿದಾಗ ಸಾಮಾನ್ಯರಾದ ಜನರಿಗೇ ಸಂತೋಷವಾಗುವಾಗ ಇನ್ನು ರಾಜರುಗಳಿಗೆ ಸಂತೋಷವಾಗದೇ ಇರುತ್ತದೆಯೇ? ಹಾಗಾಗಿ ಸತ್ಯವಾದ ಹಿತಕರವಾದ ಆನಂದ ನೀಡುವ ವಿಷಯವನ್ನು ಹನುಮಂತನು ಹೇಳಿದಾಗ ರಾಜನಾದವನು ಸಂತೋಷದಿಂದ ಪ್ರಶಂಸೆ ಮಾಡುವುದು ರಾಜಧರ್ಮವೇ ಸರಿ. ಹೀಗೆ ಎಲ್ಲರಿಂದಲೂ ಪ್ರಶಂಸೆಗೊಳಗಾದ ಹನುಮಂತನು ಮಾತ್ರ ಶ್ರೀರಾಮನ ಧ್ಯಾನದಲ್ಲಿ ನಿರತನಾಗಿದ್ದನು. ತಾನು ಶ್ರೀರಾಮನ ಧ್ಯಾನದಲ್ಲಿ ನಿರತನಾಗಿದ್ದನು. ತಾನು ಶ್ರೀರಾಮನ ದಾಸನೆಂದು ಸಂತೋಷಪಡುತ್ತಿದ್ದನು.

ದಾಸೋ ಹಂ ಕೋಸಲೇಂದ್ರಸ್ಯ ರಾಮಸ್ಯಾಕ್ಲಿಷ್ಟ ಕರ್ಮಣಃ ॥

ಹನುಮಾನ್ ಶತ್ರು ಸೈನ್ಯಾನಾಂ ನಿಹಂತಾ ಮಾರುತಾತ್ಮಜಃ ॥

ಹನುಮಂತನೆಂಬ ಹೆಸರಿನ ನಾನು ಶತ್ರು ಸೈನ್ಯವನ್ನೆಲ್ಲಾ ನಾಶಮಾಡುವ ಸಾಮರ್ಥ್ಯದವನಾಗಿದ್ದೇನೆಂದು ಹೇಳುತ್ತಾ ಕೋಸಲ ದೇಶಕ್ಕೆ ರಾಜನಾದ ಶ್ರೀರಾಮನಿಗೆ ತಾನು ದಾಸನೆನ್ನುವ ಮಾತುಗಳಿಂದ ಇಲ್ಲಿ ವಿನಯತೆಯು ಪ್ರಕಟಿತವಾಗಿದೆ. ಈಗ ಹನುಮಂತನು ಸೀತಾರಾಮಚಂದ್ರರನ್ನು ಒಂದು ಮಾಡುವ ಮಹತ್ವದ ಕಾರ್ಯಕ್ಕೆ ಹೊರಟ್ಟಿದ್ದಾನೆ ಈ ಕುರಿತಾಗಿ ಈಗಾಗಲೇ ಸೀತಾಮಾತೆಗೆ ಮಾತುಕೊಟ್ಟು ಬಂದಿದ್ದಾನೆ ಇನ್ನು ಕಾರ್ಯಸಾಧನೆಯತ್ತ ಹನುಮಂತನ ಚಿತ್ತವಿದೆ.

–ಮುಂದುವರಿಯುವುದು...



ಭಾರತದ ಪ್ರಥಮ ಬ್ಯಾಂಕ್ – ಬ್ಯಾಂಕ್ ಅಫ್ ಹಿಂದೂಸ್ಥಾನ

# ಪವನತನಯನ ಹೃದಯ

ಪವನತನಯ ಶ್ರೀ ಹನುಮಂತನ ಹೃದಯ ಶ್ರೀರಾಮಚರಿತ ಮಾನಸ, ಅದು ಯಾವಾಗಲೂ ಶ್ರೀರಾಮಚಂದ್ರರ ಮೇಲಿನ ಭಕ್ತಿಯಿಂದ ತುಂಬಿ ಹೋಗಿರುತ್ತದೆ. ಎಲ್ಲಿ ಶ್ರೀರಾಮಚಂದ್ರರ ಸಂಕೀರ್ತನೆ ನಡೆಯುತ್ತಿರುತ್ತದೋ, ಅಲ್ಲಿ ಶ್ರೀ ಆಂಜನೇಯನು ಆನಂದ ಪರವಶ್ಯದಿಂದ ಅಂಜಲಿಬದ್ಧರಾಗಿ ತನ್ನನ್ನು ತಾನೇ ಮರೆತು ನಿಂತು ಕೇಳುತ್ತಿರುತ್ತಾನೆಂದು, ಅದೇ ರೀತಿ ಎಲ್ಲ ಶ್ರೀರಾಮ ಮತ್ತು ಆಂಜನೇಯರ ಸಂಕೀರ್ತನೆ ನಡೆಯುತ್ತಿರುತ್ತದೋ ಅಲ್ಲಿ ಆನಂದಾನಂದ ತುಂಬಿ ಅಶೃಪೂರ್ಣ ವದನದಿಂದ ನಿಂತು ಕೇಳುತ್ತಾ ಇರುವೆಂದು ಸಂತ ತುಳಸೀದಾಸರು ಹೇಳಿದ್ದಾರೆ. ಆಂಜನೇಯನನ್ನು ಆರಾಧಿಸುವ ಭಕ್ತಕೋಟಿಗೆ "ಹನುಮಾನ್ ಚಾಲಿಸ" ಕಂಠಪಾಠವಾಗಿರುತ್ತದೆ ಎನ್ನುವುದು ಅತಿಶೋಕ್ತಿಯಲ್ಲ. ತುಳಸಿದಾಸರು ಈ "ಹನುಮಾನ್ ಚಾಲೀಸ್" ರಚಿಸಿರುವುದಕ್ಕೆ ಒಂದು ಐತಿಹ್ಯವಿದೆಯೆಂದು ಹೇಳುವರು. ತುಳಸೀದಾಸರು ತೀರ್ಥಯಾತ್ರೆ ಮಾಡುತ್ತಾ ಒಮ್ಮೆ ಪಂಡಾಪುರದ ಚಂದ್ರಭಾಗ ನದಿ ತೀರಕ್ಕೆ ಬಂದು ಭಕ್ತಿ ಪರವಶದಿಂದ ಪಂಡರಿನಾಥ ವಿಠಲ ಸ್ವಾಮಿಯನ್ನು ಧ್ಯಾನಿಸುತ್ತಾ ಕುಳಿತಿದ್ದಾಗ, ಜೀವನದಲ್ಲಿ ನೊಂದ ಒಬ್ಬ ಅಂಧ ಮಾನವನು ಅತ್ಮಹತ್ಯೆ ಮಾಡಿಕೊಳ್ಳಲು ನದಿಗೆ ಧುಮಿಕಿದಾಗ ದೇವರ ಧ್ಯಾನದಲ್ಲಿದ್ದ ಸಂತ ತುಳಸೀದಾಸರ ಪಾದಗಳ ಹತ್ತಿ ಬಿದ್ದನಂತೆ, ಆಗ ಆತನನ್ನು ನೋಡಿ ಹಿಡಿದು ಮೇಲಕ್ಕೆ ಎತ್ತಿ ಸಮಾಧಾನ ಮಾತುಗಳನ್ನಾಡಿ ಸಂತೈಸುತ್ತಾ, ಹೇ ಪುಣ್ಯಾತ್ಮ ಮಾನವನೇ ಆ ಕಡೆಗೆ ಕೈ ತೋರಿಸಲು, ಆ ನೊಂದ ಮಾನವನು ಆ ದಿಕ್ಕಿಗೆ ಮುಖತಿರುಗಿಸಿದಾಗ, ಆತನ ಕಣ್ಣುಗಳಿಗೆ ನೋಡುವ ಶಕ್ತಿ ಬಂದು, ಸ್ವಾಮಿ ವಿಠಲ ಸ್ವಾಮಿ ದೇವಸ್ಥಾನದ ಭಾಗ ಕಾಣಿಸುತ್ತದೆ ಎಂದು ಅತೀವ ಸಂತೋಷದಿಂದ, ಆನಂದ ಪರವಶನಾಗಿ ಕುಣಿಯುತ್ತಾ ತುಲಸೀದಾಸರ ಪಾದಕ್ಕೆ ಎರಗಿ ಸ್ವಾಮಿ ನನಗೆ ನಿಮ್ಮ ಆಶೀರ್ವಾದದಿಂದ ನೋಡುವ ದೃಷ್ಟಿ ಬಂದಿದೆ, ಕಣ್ಣಿಗೆ ಸ್ವಚ್ಛವಾಗಿ ಎಲ್ಲಾ ಕಾಣಿಸುತ್ತದೆ ಇನ್ನೂ ತಮ್ಮ ಆಜ್ಞೆಯಂತೆ ವಿಠಲ ಸ್ವಾಮಿಯನ್ನು ಎಡಬಿಡದೆ ಭಕ್ತಿಯಿಂದ ಧ್ಯಾನಿಸುತ್ತಾ ತನ್ನ ಜೀವನ ಪಾವನಗೊಳಿಸಿಕೊಳ್ಳುವೆ ಎಂದು ಮಾತುಕೊಟ್ಟನಂತೆ.

ಈ ಘಟನಾವಿಚಾರ ವೃತ್ತಾಂತ ಅಲ್ಲಿ ನೆರೆದ ಜನರ ಬಾಯಿಯಿಂದ ಹರಡಿ ಅದು ಆಗಿನ ರಾಜನ ಕಿವಿಗೆ ಬಿದ್ದು, ಆಶ್ಚರ್ಯ ಚಕಿತರಾಗಿ ಆ ಭಕ್ತ ಸಂತ ತುಳಸೀದಾಸರನ್ನು ನೋಡಬೇಕು ಆಸ್ಥಾನಕ್ಕೆ ಕರೆತರಲು ಆಜ್ಞೆ ಮಾಡಲಾಗಿ, ಭಟರು ತುಳಸೀದಾಸರಿದ್ದಲ್ಲಿಗೆ ಬಂದು ಆಸ್ಥಾನಕ್ಕೆ ಕರೆತರಲು ರಾಜಾಜ್ಞೆ ಆಗಿದೆ ಬನ್ನಿ ಎನ್ನಲಾಗ, ಶ್ರೀರಾಮಚಂದ್ರ ಮತ್ತು ಆಂಜನೇಯರನ್ನು ಬಿಟ್ಟು ಇನ್ಯಾರಿಗೂ ಶರಣಾಗಲಾರೆ ಮತ್ತು ಎಲ್ಲಿಗೂ ಬರಲಾರೆ ಎಂದು ಹೇಳಿದರಂತೆ ಇದನ್ನು ಕೇಳಿ ರಾಜಾಜ್ಞೆ ಧಿಕ್ಕರಿಸಿದ ಆತನನ್ನು ಬಂಧಿಸಿ ಎಳೆದು ತನ್ನಿ ಎಂದು ರಾಜನು ಸಿಟ್ಟಿನಿಂದ ಹೇಳಿದರಂತೆ ಆಗ ರಾಜಭಟ್ಟರು ತುಳಸೀದಾಸರುರನ್ನು ಕರೆದೊಯ್ಯಲು ಸಮೀಪಿಸುತ್ತಿದ್ದಂತೆ, ಆ ಕ್ಷಣ ಆಶ್ಚರ್ಯ ಆಕಸ್ಮಿತೆಯಿಂದ ನೂರಾರು ಕೋತಿಗಳ ಸಮೂಹ ಅವರನ್ನು ಸುತ್ತುವರಿದು ಸಿಟ್ಟಿನಿಂದ ಗೊರ್ ಗೊರ್ ಎಂದು ಶಬ್ಧ ಮಾಡುತ್ತಾ, ಕಚ್ಚಲು ಮುಂದೆ ಬರಲಾರಂಭಿಸಿದಾಗ ಆಗ ಆ ರಾಜಭಟರು ಭಯ ಪಟ್ಟು ಅಲ್ಲಿಂದ ಪಲಾಯನ ಮಾಡಿ ರಾಜನಲ್ಲಿಗೆ ಬಂದು ಈ ಎಲ್ಲಾ ಘಟನೆಗಳನ್ನು ನಿವೇದಿಸಲಾಗಿ ಆಗ ರಾಜನಿಗೆ ಜ್ಞಾನೋದಯವಾಗಿ ತಾನು ಭಗವಾನ್ ಭಕ್ತನನ್ನು ಬಲಂತನಾಗಿ ಬಂಧಿಸಲು ಆಜ್ಞೆ ಮಾಡಿದ್ದು ತಪ್ಪೆಂದು ಪಶ್ಚಾತ್ತಾಪ ಪಟ್ಟು, ಕೂಡಲೇ ತುಳಸೀದಾಸರಿದ್ದುಲ್ಲಿಗೆ ಪರಿವಾರ ಸಮೇತ ಬಂದು ತನ್ನ ತಪ್ಪನ್ನು ಮನ್ನಿಸಿ ಎಂದೂ ಶರಣಾಗತರಾಗಲಾಗಿ ಆ ಕ್ಷಣ ತುಳಸೀದಾಸರಿಗೆ ಈ ಘಟನೆಯಿಂದಾಗಿ ಶ್ರೀ ಆಂಜನೇಯನು ತನ್ನ ಭಕ್ತರನ್ನು ಆಪತ್ತಿನಲ್ಲಿ ಕಾಪಾಡುವ ಕೃಪಾಸಾಗರತೆ ನೆನೆದು ಕಣ್ಣು ತುಂಬಿಬಂದು ಗದ್ಗತಿರಾಗಿ ಎರಡು ಕೈಗಳನ್ನು ಮೇಲಕ್ಕೆ ಎತ್ತಿ ಆಂಜನೇಯನನ್ನು ಕಣ್ಣಲ್ಲಿ ತಂದು ಕೊಂಡಾಗ ಈ ಹನುಮಾನ್ ಚಾಲೀಸ ಪ್ರಾಸಬದ್ಧವಾಗಿ ಹೊರಬಂದಿತೆಂದು ಜಗತ್ತ ಜನಿತವಾಯಿತೆಂದು ಹೇಳುತ್ತಾರೆ. ಶ್ರೀರಾಮಭಕ್ತ ಆಂಜನೇಯ ಸ್ವಾಮಿ ಸದ್ಭಕ್ತರನ್ನು ಎಂದೂ ಕೈಬಿಡದೆ ಅವರ ಕಷ್ಟಗಳನ್ನು ದೂರಮಾಡಿ ಕಾಪಾಡುತ್ತನೆಂಬುದಕ್ಕೆ ಇದು ಕೇವಲ ಒಂದು ನಿದರ್ಶನವೆನ್ನುವರು, ಆದದರಿಂದಲೇ ಭಾರತೀಯರು ಭಾರತದ ಎಲ್ಲಾ ಕಡೆಗಳಲ್ಲಿಯೂ ಶ್ರೀ ಹನುಮಂತನ ಸಾವಿರಾರು ಗುಡಿಗೋಪುರಗಳನ್ನು ಕಟ್ಟಿ ಭಕ್ತಿಯಿಂದ ಲಕ್ಷಾಂತರ ಜನರು ಭಜಿಸಿ ಸುತ್ತಿಸುತ್ತಿರುವಂತೆ ನಾವೂ ಸಹಾ ಆಭಕ್ತಾಂಜನೇಯನನ್ನು ಭಕ್ತಿಯೀಮದ ಸ್ತುತಿಸಿ ಗುಣಗಾನ ಮಾಡಿ ಧನ್ಯತೆ ಪಡೆಯೋಣ.

**ಸಂಗ್ರಹ:–** ಎಮ್. ಚನ್ನಕೇಶವಪ್ಪ, ಶಿವಮೊಗ್ಗ.

# ವಿವೇಕವಿದ್ದರೆ ಮಾತ್ರ ಮನುಷ್ಯ

ಲೇ : ಜಿ. ಜಿ ಹೆಗಡೆ ಬಾಳಗೋಡ, ರಾಷ್ಟ್ರಪ್ರಶಸ್ತಿ ಪುರಸ್ಕೃತರು.

ವಿವೇಕಕ್ಕಿಂತಲೂ ಶ್ರೇಷ್ಠ ಪರಮಾತ್ಮ. ವಿವೇಕದ ಮೂಲಕ ನ್ಯಾಯ ಅನ್ಯಾಯ ಸತ್ಯ ಮಿಥ್ಯಗಳನ್ನು ತಿಳಿಯುತ್ತಿದ್ದು ನಿತ್ಯ ನಿರ್ವಿಕಾರ ಮತ್ತು ಸತ್– ಚಿತ್ ಆನಂದ ನೀಡಬಲ್ಲ ಪರಮಾತ್ಮ ತತ್ವವನ್ನು ಪಡೆದುಕೊಳ್ಳುವುದರಲ್ಲಯೇ ನಮ್ಮ ಶರೀರದ ಸಾರ್ಥಕತೆ ಇದೆ. ಅದನ್ನು ಪಡೆಯಲು ಕೇವಲ ಸಾಂಸಾರಿಕ ಸುಖಭೋಗಗಳಲ್ಲಿಯೇ ಕಳೆಯಬಲ್ಲ ಮನುಷ್ಯರ ಜನ್ಮ ವ್ಯರ್ಥ.

ಸುಖಭೋಗಗಳು ಪಶುಪಕ್ಷಿಗಳಿಗೂ ದೊರೆಯುತ್ತವೆ. ಉದಾಹರಣೆಗಾಗಿ– ನಾಯಿಗಳ ಯೋಗಕ್ಷೇಮವನ್ನು ನೋಡಿಕೊಳ್ಳಲು ಮನುಷ್ಯರಿರುವುದನ್ನು ನಾವು ನೋಡಿದ್ದೇವೆ. ಅವುಗಳಿಗೆ ಉತ್ತಮ ಕೊಠಡಿ, ಒಳ್ಳೆಯ ಹಾಸಿಗೆ ಕೆಲವೊಮ್ಮೆ ಫ್ಯಾನು, ಅಡ್ಡಾಡಲು ಹೊರಟರೆ ಮನಷ್ಯರು ಜೊತೆಯಲ್ಲಿರುವುದು ಸಹ ಇರುತ್ತದೆ. ವಿಮಾನದಲ್ಲೂ ಅವು ಯಾತ್ರೆ ಮಾಡುತ್ತದೆ. ಮನುಷ್ಯರಲ್ಲಿಯೂ ಸಹ ಕೆಲವರಿಗೆ ಇಂತಹ ಸೌಲಭ್ಯ ಸಿಗುತ್ತದೆ. ಸಾಂಸಾರಿಕ ಸುಖ ಭೋಗಗಳು ಸಿಕ್ಕುವುದಾದರೆ ನಾಯಿ ಕತ್ತೆ ಮುಂತಾದವುಗಳೂ ಸಹ ಭೋಗಿಸುತ್ತವೆ. ಕೇವಲ ಭೋಗಕ್ಕಾಗಿ ಜನ್ಮವಲ್ಲ. ಪರಮಾತ್ಮ ತತ್ವ – ಚಿಂತನೆಗಾಗಿ ಜನ್ಮ ಎಂಬುದರ ಬಗ್ಗೆ ನಮ್ಮ ಗಮನವಿರಲಿ.

ನಮ್ಮ ಶರೀರ ಪೃಥ್ವಿ ತತ್ವ ಪ್ರಧಾನವಾಗಿದೆ. ದೇವತೆಗಳ ಶರೀರ ತೇಜಸ್ ತತ್ವ ಪ್ರಧಾನವಾಗಿದೆ. ಶರೀರದ ಮೂಲಕ ಎಲ್ಲ ಸಾಧನೆ ಮಾಡಲು ಸಾಧ್ಯ ಎಂಬ ವಿಚಾರ ಸದಾ ಗ್ರಹಿಕೆಯಲ್ಲಿರಬೇಕು. ಮನುಷ್ಯರ ಶರೀರದಲ್ಲಿಯೂ ಸಹ ಯಾರು ತನ್ನನ್ನು ಉದ್ಧಾರ ಮಾಡಿಕೊಳ್ಳುವುದಿಲ್ಲವೋ ಅಂತಹ ಮನುಷ್ಯ ಹುಟ್ಟಿಯೂ ವ್ಯರ್ಥ.

ಹಣಕ್ಕಿಂತ ವಸ್ತು, ವಸ್ತುವಿಗಿಂತ ಶರೀರ ,ಶರೀರಕ್ಕಿಂತ ವಿವೇಕ ಮತ್ತು ವಿವೇಕಕ್ಕಿಂತಲೂ ಸಹ ಶರೀರ ನಿವಾರಣೆಗೆ ವಸ್ತುಗಳ ಅವಶ್ಯಕತೆ ಇದೆಯೇ ಹೊರತು ಹಣವಲ್ಲ. ವಸ್ತುಗಳು ಸ್ವಯಂ ಉಪಯೋಗಕ್ಕೆ ಬರುತ್ತದೆ. ಹಣವೆಂಬುದು ಸ್ವಯಂ ಕೆಲಸಕ್ಕೆ ಬರಲಾರದು. ಅದೊಂದು ಮಾಧ್ಯಮವಾಗಿ ಕೆಲಸ ಮಾಡಬಲ್ಲದು. ಹಣದ ಮೂಲಕ ನಮಗೆ ಬೇಕಾದ ವಸ್ತುಗಳನ್ನು ಹೊಂದುತ್ತೇವೆ. ವಸ್ತುಗಳಿಗಿಂತಲೂ ಅಮೂಲ್ಯವಾದದು ನಮ್ಮ ಶರೀರ. ಶರೀರಕ್ಕಾಗಿಯೇ ವಸ್ತುಗಳಿರುತ್ತವೆ. ಹೀಗಿರುವಾಗ ಶರೀರಕ್ಕಿಂತ ಹೆಚ್ಚು ಮಹತ್ವವು ವಸ್ತುಗಳಿಗೆ ಇರಲಾರದು.

ಪಶು ಮುಂತಾದವುಗಳ ಶರೀರವು ಬಹು ಮಹತ್ವವಿದೆ. ಈ ಶರೀರದಲ್ಲಿ ಉತ್ತಮ ವಸ್ತುವೆಂಬುದು ಏನಿದೆ ? ಎಂದು ಪ್ರಶ್ನಿಸಿದರೆ "ವಿವೇಕ" ಎಂಬುದೊಂದು ಇದೆ ಎಂದು ಅನ್ನಿಸುತ್ತದೆ. ವಿವೇಕ ಕಳೆದುಕೊಂಡರೇ ಮನುಷ್ಯನೂ ಸಹ ಪಶುವಿಗಿಂತ ಕನಿಷ್ಠನಾಗುತ್ತಾನೆ.

ಯಾವುದು ಸರಿ–ತಪ್ಪು, ನಿತ್ಯ–ಅನಿತ್ಯ, ಕರ್ತವ್ಯ–ಅಕರ್ತವ್ಯ, ಸಾರ–ನಿಸ್ಸಾರ, ನೀತಿ–ಅನೀತಿ ಎಂಬಿತ್ಯಾದಿ ಸಂಗತಿಗಳು ತಿಳಿದುಬರಲು ವಿವೇಕ ಇದ್ದರೆ ಮಾತ್ರ ಸಾಧ್ಯ. ವಿವೇಕಎಂಬುದು ಸರ್ವೋತ್ಕೃಷ್ಟವಾದುದು. ವಿವೇಕ ಎಷ್ಟು ಹೆಚ್ಚಿರುವುದೋ ಮನುಷ್ಯನ ಶ್ರೇಷ್ಠತೆ ಹೆಚ್ಚು ಕಂಡುಬರುತ್ತದೆ. ವಿವೇಕಿಗಳು ಸದಾ ಆದರಣೀಯರು.

ವಿವೇಕಶಕ್ತಿಯಿಂದ ಮನುಷ್ಯ ಪ್ರತಿಯೊಂದು ವಿಚಾರವನ್ನೂ ಸರಿಯಾಗಿ ನಿರ್ಣಯಿಸಬಲ್ಲ. ವಿವೇಕಶಕ್ತಿಯ ಮಹಿಮೆಯಿಂದಾಗಿ ಮನುಷ್ಯ ಜನ್ಮದ ಸಾರ್ಥಕತೆ ನಿರ್ಧರಿಸಲ್ಪಡುತ್ತದೆ. ಮನುಷ್ಯನ ಅಸ್ತಿಪಂಜರ ಇಲ್ಲದೇ ಆಕೃತಿಗೆ ಖಂಡಿತಾ ಬೆಲೆ ಇಲ್ಲ. ಆದ್ದರಿಂದ ಯಾರೊಬ್ಬರೂ ವಿವೇಕಶೂನ್ಯರಾಗಬಾರದು. ಸತ್ಯ ಹಾಗೂ ಪರಮಾತ್ಮನೇ ಶ್ರೇಷ್ಠ ಎಂಬ ತತ್ವಚಿಂತನೆ ಹೆಚ್ಚು ಸೂಕ್ತವಾದ ಮಾರ್ಗ. ಪರಮಾತ್ಮನಿಗೆ ಅತ್ಯಧಿಕ ಆದರವನ್ನು ತೋರಿಸಿ ಅವನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುವುದರಲ್ಲಿಯೇ ಮನುಷ್ಯ ಜನ್ಮದ ಸಾರ್ಥಕತೆ ಇದೆ. ಅದಕ್ಕಾಗಿ ವಿವೇಕವನ್ನು ಕಳೆದುಕೊಳ್ಳದಿರಿ.

# ಔಷಧೀಯ ಸಸ್ಯ ಸಂಪತ್ತು

ಲೇ: ಶ್ರೀ ಪಿ. ಎಸ್. ವೆಂಕಟರಾವ್ ದೈತೋಟ್.

**ಉದ್ದ ಹಾಗಲ ಬಳ್ಳಿ**

ಯಕೃತ್ ರೋಗಗಳಲ್ಲಿ

**ಹೆಸರುಗಳು:**

**ಕನ್ನಡ:** ಹಾಗಲ ಬಳ್ಳಿ, ಮಿಡಿಗಾಯಿ ಬಳ್ಳಿ, ಕೈಕಾಯಿ ಬಳ್ಳಿ; **ಹಿಂದಿ:** ಕರೇಲಾ; **ತುಳು:** ಕಂಚಿವೇಲ್; **ತಮಿಳು:** ಪಾಕಲ್; **ಮಲಯಾಳಂ:** ಕೈಪ್ಪಕ್ಕ; ತೆಲುಗು: ಕಾಕರ; **ಕೊಂಕಣಿ:** ಕಾರಾತೆ; **ಮರಾಠಿ:** ಕಾರ್‌ಲೇ; **ಕರ್ಹಾಡ:** ಕಾರಾತ; **ಸಂಸ್ಕೃತ:** ಕಾರವೇಲ್ಲ; **ಇಂಗ್ಲಿಷ್:** Bitterguard; **ಸಸ್ಯಶಾಸ್ತ್ರೀಯ:** *Momordica charantia* L.; **ಕುಟುಂಬ:** Cucurbitaceae; **ಉಪಯೋಗ:** ಉಪಯೋಗವಿಲ್ಲದ ಅಂಶವಿಲ್ಲ.



**ಮೂಲಿಕಾ ಪರಿಚಯ**

ತರಕಾರಿಗಳ ಪೈಕಿ ವಿಶಿಷ್ಟವಾದ ತರಕಾರಿ. ಅಂದರೆ ಔಷಧೀಯ ಗುಣ ಹೆಚ್ಚಿದ ಬಾಬತ್ತು. ಇದರ ಉಪಯೋಗವು ಕಡಿಮೆ ಮಸಾಲೆ ಸೇರಿಸಿ ಕಡಿಮೆ ಪ್ರಮಾಣದಲ್ಲಿ ಸೇರಿಸುವುದರಲ್ಲಿದೆ. ಒಂದು ರೀತಿಯಲ್ಲಿ ತರಕಾರಿಯಾಗಿ ಬಲಸುವುದಕ್ಕಿಂತ ಹೆಚ್ಚು ಔಷಧವಾಗಿಯೇ ಶ್ರೇಷ್ಠವೆನ್ನಬಹುದು. ಅಷ್ಟೇ ಅಲ್ಲ ಹಸಿಯದಾಗಿ ಸೇವಿಸುವುದೇ ಹೆಚ್ಚು ಪರಿಣಾಮಕಾರಿ ಸಹ. ಉಷ್ಣ ಸಮಶೀತೋಷ್ಣ ಹವೆಯ ಹಲವಾರು ದೇಶಗಳಲ್ಲಿ ಬೆಳೆಯುವುದು. ತರಕಾರಿ ಹಾಗೂ ಔಷಧವಾಗಿಯೂ ಬಳಕೆಯಲ್ಲಿದೆ. ಆಯುರ್ವೇದದ ಎಲ್ಲಾ ನಿಘಂಟುಗಳಲ್ಲೂ ವಿಸ್ತಾರವಾಗಿ ವಿಶದಪಡಿಸಿದ ಗುಣಗಳನ್ನು ಕಾಣಬಹುದು. ಯಕೃತ್, ಪ್ಲೀಹಗಳ ಅಕ್ರಮ ಮತ್ತು ಅದರಿಂದುಂಟಾದ ರೋಗಗಳು ಪ್ರಮುಖವಾಗಿ. ಮಲಬದ್ಧತೆ, ವಾತದೋಷಗಳು, ಅಜೀರ್ಣ, ವಿಷಪ್ರಕಾರಗಳು, ಹಲವು ಬಗೆಯ ಚರ್ಮರೋಗಗಳು, ಕೊಳೆ, ವ್ರಣಗಳು, ಲೈಂಗಿಕವ್ಯಾಧಿ, ಸ್ತ್ರೀರೋಗಗಳು ಹೀಗೆ ಇವುಗಳಲ್ಲಿ ಸಾಕಷ್ಟು ಉಪಯುಕ್ತ ಔಷಧ. ಆಗಾಗ ಸ್ವಲ್ಪ ಪ್ರಮಾಣದಲ್ಲಿ ಹಾಗಲಕಾಯಿ ಬೀಜ ಯಾ ಎಲೆಗಳ ಸೇವನೆ ಬಹುಸಂಖ್ಯಾತ ರೋಗಗಳಿಂದ ದೂರವಿಡಬಲ್ಲದು. ಪೋಷಕ ಸಹಾ. ಸೇವನೆ ಹೆಚ್ಚಾದಾಗ ಶರೀರ ಉಷ್ಣವಾಗುವುದು. ನರ, ಮಾಂಸಖಂಡಗಳ ಹಿಡಿತ, ಬಿಗಿತ, ಅನಿದ್ರೆ, ಅಸಮಾಧಾನ, ಉರಿಮೂತ್ರಗಳುಂಟಾಗಬಹುದು. ಇದರೊಂದಿಗೆ ಹೆಚ್ಚು ಮಸಾಲೆಗಳೊಂದಿಗೆ ತಯಾರಿಸಿದ ಅಡುಗೆಯಿಂದ ಮೂತ್ರಜನಕಾಂಗ(ಕಿಡ್ನಿ)ಗಳ ಸೋಂಕು, ಉರಿಮೂತ್ರ ಕಾಣಿಸಬಹುದು. ಇದಕ್ಕೆ ಸಿಹಿ ಆಹಾರಗಳು ಪ್ರತಿವಿಧಿ. ಒಳಭೇದಗಳನ್ನು ಬಿಟ್ಟು 2 ವಿಧ. ಉದ್ದ ಹಾಗಲ, ಗಿಡ್ಡ ಹಾಗಲ. ಗಿಡ್ಡ ಹಾಗಲ ಕಾಯಿಯ ಗಾತ್ರ 1 ಹಿಡಿಯೊಳಗಿದ್ದು ತುದಿ ಬುಡ ಚೂಪು ಅಷ್ಟೆ. ಗುಣಗಳ ವ್ಯತ್ಯಾಸವೂ ಇದೆ. ಹಲವಾರು ತರಹ ಅಡುಗೆ ತಯಾರಿಯಲ್ಲಿ ಎರಡು ಬಳಕೆಯಲ್ಲಿವೆ.

**ಉಪಯೋಗಗಳು**

ಸಿಹಿಮೂತ್ರ ಸೇರಿದಂತೆ ಎಲ್ಲಾ ಪ್ರಮೇಹಗಳಿಗೆ: ಸಣ್ಣದಾಗಿ ಕತ್ತರಿಸಿಕೊಂಡ ಎಳೆಯ ಹಾಗಲಕಾಯಿ ಚೂರುಗಳು 1 ಹಿಡಿಯೊಂದಿಗೆ 1 ತುಂಡು ಶುಂಠಿ ಎರಡೂ ಹಸಿಯದಾಗಿ 1 ಲೋಟ ಕಡೆದ ಮಜ್ಜಿಗೆಯಲ್ಲಿ ಉಪ್ಪು 1 ಚಿಟಿಕೆ ಸೇರಿಸಿ ಅರೆದು ಸೇವನೆ. ವಾರದಲ್ಲಿ 3 ದಿನಗಳಂತೆ 4 ವಾರಗಳು. ಮಧ್ಯೆ 4 ವಾರ ಬಿಟ್ಟು ಪುನಃ ಸೇವಿಸಬಹುದು. ಈ ತಯಾರಿಯನ್ನು ಊಟದ ಆರಂಭದಲ್ಲಿ ಅನ್ನದೊಂದಿಗೆ ಕಲಸಿ ಸೇವಿಸಬಹುದು. ಒಗ್ಗರಣೆಯನ್ನೂ ನೀಡಬಹುದು. ಅಗತ್ಯದಂತೆ 3–4 ಬಾರಿ.

**ಚರ್ಮರೋಗಗಳಿಗೆ:** (ಶಿಲೀಂಧ್ರದಿಂದ ಯಾ ಸಾಂಸರ್ಗಿಕವಾದ) ಹಾಗಲ ಎಲೆಗಳನ್ನು ಉಪ್ಪು, ನಿಂಬೆರಸ ಸೇರಿಸಿ ಅರೆದು ಲೇಪನ. ಒಂದೂವರೆ ಗಂಟೆ ಕಾಲ ಆರಿದಂತೆ.

ಸೂಚನೆ: ಇಲ್ಲಿ ಕರಿಹಾಗಲ ಎಲೆ ಉತ್ತಮ. ಅಗತ್ಯದಂತೆ 5–6 ದಿನ.

## ಬಾಳ ದಾರಿ

ಲೇ॥ ಶ್ರೀಮತಿ ಪ್ರತಿಭಾ ಭಟ್ಟ

ನಡೆಯುವುದು ಬಾಳ ಪಯಣವು
ಅಂಕು ಡೊಂಕಿನ ಹಾದಿಯಲಿ
ಸಾಗುವುದು ಗಮ್ಯದೆಡೆಗಿನ ಓಟವು
ಕಲ್ಲು ಮುಳ್ಳಿನ ದಾರಿಯಲಿ

ಕಷ್ಟ ಸುಖಗಳಿರುವವು
ನೆರಳು ಬೆಳಕ ತೆರದಲಿ
ಆಕಸ್ಮಿಕ ತಿರುವಿರುವವು
ಆಗೊಮ್ಮೆ ಈಗೊಮ್ಮೆ ಜೀವನದಲಿ

ದುಃಖ ದುಮ್ಮಾನಗಳು ಬರುವವು
ಬಿಸಿಲು ಬಿರುಗಾಳಿ ಪರಿಯಲಿ
ಖುಷಿಯ ನಗುವರಳುವವು
ಮೊಗ್ಗು ಹೂ ಬಿರಿದಂದದಲಿ



ನೋವು ನಲಿವುಗಳಿರುವವು
ಹಸಿರು ಬಂಜರು ರೂಪದಲಿ
ಕನಸ ಹೊತ್ತ ಜೀವನವು
ಹೊಸ ಚಿಗುರಿಗಾಗಿ ಕಾದ ತರುಲತೆಯ ರೀತಿಯಲಿ

ಬಾಳ ಪಯಣಕೆ ಸಂಗಾತಿ ಒಡನಾಟವು
ಮರಕೆ ತಬ್ಬಿದ ಬಳ್ಳಿಯಾ ಸಂಗದಂದದಲಿ
ಒಬ್ಬರಿಗೊಬ್ಬರು ಆಧಾರವಾಗಿಹ ಜೀವನವು
ಭುವಿಯಿರುವಂತೆ ಸೂರ್ಯನಾಸರೆಯಲಿ

ಈ ಯಾನ ಅನುದಿನವು
ಉಸಿರಿರುವವರೆಗೆ ನಡೆಯಲಿ
ನಿಸ್ವಾರ್ಥದಿ ಸತತ ಪ್ರಯತ್ನವು
ಬಾಳ ದಾರಿಯ ಗಮ್ಯದೆಡೆಗೆ ತಲುಪಿಸಲಿ

## ॥ ಯಕ್ಷಪೂರ್ಣಿಮೆ ॥

ಲೇ॥ ಶ್ರೀಮತಿ ಸಾವಿತ್ರಿ ಹೆಗಡೆ, ಬಸವನಬೆಟ್ಟ





ಹೆಮ್ಮೆಯ ಕರುನಾಡಿನಲಿ
ಕರಾವಳಿಯ ತೀರದಲಿ
ನವರಾತ್ರಿಯ ಉತ್ಸವದ
ಸುಂದರದ ವೈಭವವು
ಯಕ್ಷಗಾನ ಪ್ರಿಯ
ವೀರಾಂಜನೇಯನಿಗೆ
ಪೌರಾಣಿಕ ಯಕ್ಷಗಾನದ
ಕುಣಿತ ಯಕ್ಷಪೂರ್ಣಿಮೆಯಲ್ಲಿ

ಭಾವದಲಿ ಭಾಗವತ
ಚಂಡೆ ತಾಳ ಮದ್ದಳೆಯು
ಅಂದ ಚೆಂದದ ಕುಣಿತ
ಪ್ರೇಕ್ಷಕರ ಮನ ತಣಿಸಿ
ಎಂಥ ಸುಂದರ ಸೊಬಗು
ಯಕ್ಷಗಾನದ ಐಸಿರಿಯು
ಹೇಮಪುರಿಯಲ್ಲಿ!!!

## ಪದಬಂಧ–49

–ಶ್ರೀ ಗುರು ದಾಸ.

**ಎಡದಿಂದ ಬಲಕ್ಕೆ :–**

1.. ಶ್ರೀಕ್ಷೇತ್ರದಲ್ಲಿ 15ದಿನಗಳ ಕಾಲ ನಡೆಯುವ ಪೌರಾಣಿಕ ಯಕ್ಷಗಾನ ಪ್ರಸಂಗಗಳ ಸೇವಾ ಪ್ರದರ್ಶನ –5
4. ಅನಿಶ್ಚಿತ ಅಪಾಯದ ನಿರ್ವಹಣೆಗಾಗಿ ರೂಪಿಸಿರುವ ಉಪಾಯ –2
5. ಬಾಹ್ಯ ವಸ್ತುಗಳನ್ನು ಗುರುತಿಸಬಲ್ಲ ಕಣ್ಣಿನೊಳಗಿರುವ ಅಂಗಾಂಶ –3
6. ದಿನವು ಕಾಣಸಿಗುವ ಭಾಸ್ಕರ –4
9. ಸರಸರನೆ ಬಂದ ಬಾಣ –2
11. ಸರಿಸಮವಾಗಿರುವವರು –3
13. ರಾಮಾಯಣದಲ್ಲಿ ಸೀತೆಯನ್ನು ಸಾಕಿದ ತಂದೆ –3
15. ಇದು ಉಪ್ಪಿನಕಾಯಿ ಪಾತ್ರೆಯೋ ಅಥವಾ ನಕ್ಷತ್ರವೋ–3
17. ಜತನದಿಂದ ಕಾಪಾಡಿಕೊಂಡು ಬಂದ ಬೆಳ್ಳಿ –3
19. ಹಿಂದೂಸ್ಥಾನೀ ಸಂಗೀತದಲ್ಲಿ ಬರುವ ಸ್ತ್ರೀ ರಾಗ –3
20. ವಜ್ರದಂತೆ ಗಟ್ಟಿಮುಟ್ಟಾದ ದೇಹ ಹೊಂದಿರುವವ –4
22. ಯಾವಕಡೆಯಿಂದ ನೋಡಿದರು ಬಂಗಾರವೆ –3

| | | | | | | | |
|---|---|---|---|---|---|---|---|
| 1 | | 2 | | 3 | ■ | 4 | |
| | ■ | | ■ | 5 | | | ■ |
| 6 | 7 | | 8 | ■ | ■ | 9 | 10 |
| ■ | | ■ | 11 | | 12 | ■ | |
| 13 | | 14 | ■ | ■ | 15 | 16 | |
| | ■ | 17 | | 18 | ■ | | ■ |
| 19 | | | ■ | 20 | | | 21 |
| | ■ | 22 | | | ■ | ■ | |

**ಮೇಲಿಂದ ಕೆಳಕ್ಕೆ :–**

1. ಪ್ರಪಂಚದ ಧರ್ಮಗಳಲ್ಲೊಂದು –3
2. ಶೇಷವಿಲ್ಲದೆ ಭಾಗಿಸಲ್ಪಡುವ ಭಾಗಲಬ್ಧವುಳ್ಳ ಸಂಖ್ಯೆ –3
3. ತನ್ನನ್ನು ತಾನು ತೋರ್ಪಡಿಸಿಕೊಳ್ಳುವಿಕೆ –2
4. ಅಳಿವಿನಂಚಿನಲ್ಲಿದೆ –3
7. ಹೇಗೆ ನೋಡಿದರು ಹೊಸದಾಗಿಯೇ ಕಾಣುತ್ತದೆ –3
8. ಇದೊಂದು ದ್ರವರೂಪದ ಪದಾರ್ಥ –2
10. ಸುಂದರವಾದ ತರುಣಿ –3
12. ನಮಗೆ ಕಾಣುವ ಅಂಬರ –2
13. ಜೀವನದ ಕೊನೆಯಲ್ಲಿ ಎಲ್ಲರನ್ನೂ ಭೇಟಿಯಾಗುವ ಮೃತ್ಯುದೇವತೆ –4
14. ಲೆಕ್ಕ ಬರೆಯುವ ಲೆಕ್ಕಿಗ –4
16. ಕಾಳಜಿ ಪೂರಕವಾದ ಕಳವಳ ತಿರುಗಿದೆ –3
18. ತೀವ್ರವಾಗಿರುವ ಉತ್ಸುಕತೆ –3
21. ಸಮರ್ಪಣಾ ಭಾವದಿಂದ ಮಾಡಿದ ಯಾಗ –2

**(ಉತ್ತರ ಮುಂದಿನ ಸಂಚಿಕೆಯಲ್ಲಿ)**

ಪದಬಂಧ–48ರ ಉತ್ತರ

**ಎಡದಿಂದ ಬಲಕ್ಕೆ:–** 1.ಮರುಗು, 3.ಉಡಾವಣೆ, 5.ಟುವುಚಿ(ಚಿವುಟು), 6.ನಸುಕು, 8.ತರತರ, 12.ಮಾರುವೇಷ, 13.ಕಡತ, 15.ಯಮ, 18.ಯಕ್ಷ, 21.ಗುಪ್ತಚರ, 22.ಮೆಚ್ಚುಗೆ.

**ಮೇಲಿಂದ ಕೆಳಕ್ಕೆ:–** 1.ಮನನ, 2.ಗುಟುಕು, 3.ಉಚಿತ, 4.ವಸಂತ, 7.ಸುಮಾರು, 9.ರಜಕ, 10.ರಹಿತ, 11.ವಿಷಯ, 12.ಮಾಯವಾಗು, 14.ಡಜ(ಜಡ), 16.ಮಯ, 17.ನೀಚ, 19.ಕ್ಷಮೆ, 20.ಹಗೆ.



ಭಾರತದ ಪ್ರಥಮ ಹಡಗು – ಜಲದುರ್ಗ